ಕುಶಾಲನಗರ ಯೋಜನಾ ಪ್ರಾಧಿಕಾರ, ಕುಶಾಲನಗರ

ಕಾವೇರಿ ಬಡಾವಣೆ, ಸಂ.05, ಬ್ಲಾಕ್ ನಂ.01, ಕುಶಾಲನಗರ – 571 234

Email Id: kushalnagaradtp@hotmail.com **ದೂರವಾಣಿ ಸಂ: 08276–274040**

ಕುಶಾಲನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಪ್ರಮೋದ್ ಮುತ್ತಪ್ಪ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 20–07–2024 ರ ಶನಿವಾರದಂದು ಅಪರಾಹ್ನ 4.00 ಗಂಟೆಗೆ ನಡೆದ ಪ್ರಾಧಿಕಾರದ 61 ನೇ ಸಾಮಾನ್ಯ ಸಭೆಯ ನಡಾವಳಿ

ಸಭೆಯಲ್ಲಿ ಹಾಜರಿದ್ದವರು :–

1. ಅಧ್ಯಕ್ಷರು
2. ಸದಸ್ಯ ಕಾರ್ಯದರ್ಶಿ, ಕುಶಾಲನಗರ ಯೋಜನಾ ಪ್ರಾಧಿಕಾರ
3. ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ.
4. ಶ್ರೀ ವಿ.ಎಸ್. ಸಜಿ, ಸದಸ್ಯರು, ಕುಶಾಲನಗರ ಯೋಜನಾ ಪ್ರಾಧಿಕಾರ
5. ಶ್ರೀಮತಿ ಸಂಗೀತ ಕೆ.ಆರ್, ಸದಸ್ಯರು, ಕುಶಾಲನಗರ ಯೋಜನಾ ಪ್ರಾಧಿಕಾರ
6. ಶ್ರೀ ಕಿರಣ್‌ಕುಮಾರ್ ಸದಸ್ಯರು, ಕುಶಾಲನಗರ ಯೋಜನಾ ಪ್ರಾಧಿಕಾರ

ವಿಶೇಷ ಅಹ್ವಾನಿತರು:–

7. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಗುಡ್ಡೆಹೊಸೂರು ಗ್ರಾಮಪಂಚಾಯಿತಿ
8. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ

ಗೈರುಹಾಜರಾದವರು :–

1. ಶ್ರೀ ಅಮೃತ್‌ರಾಜ್, ಸ್ಥಳೀಯ ಸಂಸ್ಥೆಯಿಂದ ನಾಮನಿರ್ದೇಶಿತವಾದ ಸದಸ್ಯರು.

ವಿಷಯ ಸಂಖ್ಯೆ(01): ದಿನಾಂಕ: 12–03–2024 ರಂದು ನಡೆದ ಪ್ರಾಧಿಕಾರದ 60ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಸ್ಥಿರೀಕರಿಸುವ ಬಗ್ಗೆ.

ಟಿಪ್ಪಣಿ: ದಿನಾಂಕ: 12–03–2024 ರಂದು ನಡೆದ ಪ್ರಾಧಿಕಾರದ 60ನೇ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಓಪ್ಪಿ ಸ್ಥಿರೀಕರಿಸುವ ಬಗ್ಗೆ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ.

(i) ದಿನಾಂಕ:12–03–2024 ರಂದು ನಡೆದ ಸಭೆಯ ನಡವಳಿಗಳ ವಿಷಯ ಸಂಖ್ಯೆ (1)ರಲ್ಲಿ ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡುವ ಸಂಬಂಧ ಚರ್ಚಿಸಿದ್ದು, ಮಾನ್ಯ ಜಿಲ್ಲಾಧಿಕಾರಿಗಳ ಕಛೇರಿ ಮತ್ತು ಮಾನ್ಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಕೊಡಗು ಜಿಲ್ಲಾ ಪಂಚಾಯತ್ ಮಡಿಕೇರಿ ಕಛೇರಿಗಳಿಂದ ಕೊಡಗು ಜಿಲ್ಲೆಯಲ್ಲಿರುವ ಎಲ್ಲಾ ರಾಜ್ಯ ಸರ್ಕಾರದ ಇಲಾಖೆಗಳು, ಸ್ಥಳೀಯ ಪ್ರಾಧಿಕಾರಗಳ ಪಟ್ಟಿಯನ್ನು ಪಡೆದು, ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರುಗಳಿಗೆ ಹಾಗೂ ಆರಕ್ಷಕ ಉಪಅಧಿಕ್ಷಕರಿಗೆ ಪ್ರತ್ಯೇಕವಾಗಿ ಪತ್ರ ಬರೆದು ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳ ಪಟ್ಟಿಯನ್ನು ನೀಡಿ ಅಗತ್ಯತೆ ಇರುವ ಬಗ್ಗೆ ಮಾಹಿತಿ ನೀಡಲು ತಿಳಿಸಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿದೆ.

ಈ ಹಿಂದೆ ಪ್ರಾಧಿಕಾರದಿಂದ ಕೈಗೊಂಡ ಕ್ರಮದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ಕೈಗೊಂಡ ಕ್ರಮದ ವಿವರ
1	ಕುಶಾಲನಗರ ಯೋಜನಾ ಪ್ರಾಧಿಕಾರದ ಹೆಸರಿನಲ್ಲಿರುವ ಏಳು ನಾಗರೀಕ ಸೌಲಭ್ಯ ನಿವೇಶನಗಳಿಗೆ ಉಪನೋಂದಣಾಧಿಕಾರಿಗಳು ನಿಗದಿಪಡಿಸಿರುವ ಮಾರುಕಟ್ಟೆ ದರದಂತೆ ಗುತ್ತಿಗೆ ಮೊಬಲಗನ್ನು ನಿಗಧಿಪಡಿಸಿ ಸಂಘ ಸಂಸ್ಥೆಯವರಿಗೆ 30 ವರ್ಷಗಳ ಗುತ್ತಿಗೆ (ಲೀಜ್) ಅವಧಿಗೆ ವಿತರಿಸಲು ಸರ್ಕಾರದ ಸುತ್ತೋಲೆಯಂತೆ ಸ್ಥಳೀಯ ಯೋಜನಾ ಪ್ರದೇಶದಲ್ಲಿ ವ್ಯಾಪಕ ಪ್ರಚಾರದಲ್ಲಿರುವ ಕನ್ನಡ (ಶಕ್ತಿ ದಿನಪತ್ರಿಕೆ) ಮತ್ತು ಇಂಗ್ಲೀಷ್ (Deccan Herald) ಎರಡು ಭಾಷೆಯ ದಿನಪತ್ರಿಕೆಗಳಲ್ಲಿ ದಿನಾಂಕ:25–07–2023 ರಂದು ಪ್ರಕಟಣೆಯನ್ನು ನೀಡಲಾಗಿತ್ತು. ಆದರೆ ಇದುವರೆಗೂ ಸದರಿ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ಅರ್ಜಿಗಳು ಸ್ವೀಕೃತಿಯಾಗಿರುವುದಿಲ್ಲ ಹಾಗೂ ನಿವೇಶನಗಳು ಹಂಚಿಕೆಯಾಗಿರುವುದಿಲ್ಲ.
2	ದಿನಾಂಕ: 08–02–2024 ರಂದು ಈ ಕಛೇರಿಯಿಂದ ಮಾನ್ಯ ಜಿಲ್ಲಾಧಿಕಾರಿಗಳಿಗೆ ಮತ್ತು ಮಾನ್ಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕೊಡಗು ಜಿಲ್ಲಾ ಪಂಚಾಯತ್ ಮಡಿಕೇರಿ ಇವರಿಗೆ ಪತ್ರ ಬರೆದು, ನಾಗರೀಕ ಸೌಕರ್ಯ ನಿವೇಶನದ ಹಂಚಿಕೆಗಾಗಿ ಸ್ವೀಕರಿಸಿದ ಅಗತ್ಯತೆಗಳ ಕೋರಿಕೆ ಪಟ್ಟಿಯನ್ನು ನೀಡುವಂತೆ ಕೋರಲಾಗಿದ್ದು, ಪ್ರಾಧಿಕಾರದಲ್ಲಿ ಲಭ್ಯವಿರುವ ಸಿ.ಎ. ನಿವೇಶನಗಳ ಪಟ್ಟಿಯನ್ನು ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿರುತ್ತದೆ. ಆದರೆ ಯಾವುದೇ ಕೋರಿಕೆ ಪಟ್ಟಿಯು ಸ್ವೀಕೃತವಾಗಿರುವುದಿಲ್ಲ.
3	ದಿನಾಂಕ:12–03–2024 ರಂದು ನಡೆದ ಪ್ರಾಧಿಕಾರದ 60ನೇ ಸಭೆಯ ನಿರ್ಣಯದಂತೆ, ದಿನಾಂಕ: 25–03–2024 ರಂದು ಕೊಡಗು ಜಿಲ್ಲೆಯಲ್ಲಿರುವ ಎಲ್ಲಾ ರಾಜ್ಯ ಸರ್ಕಾರದ ಇಲಾಖೆಗಳು, ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರುಗಳಿಗೆ ಹಾಗೂ ಆರಕ್ಷಕ ಉಪಅಧಿಕ್ಷಕರಿಗೆ ಪತ್ರ ಬರೆದು, ಪ್ರಾಧಿಕಾರದ ಹೆಸರಿನಲ್ಲಿರುವ ನಾಗರೀಕ ಸೌಲಭ್ಯ ನಿವೇಶನಗಳ ಪಟ್ಟಿಯನ್ನು ನೀಡಿ, ಸಿ.ಎ. ನಿವೇಶನವು ತಮ್ಮ ಇಲಾಖೆಗೆ ಅಗತ್ಯತೆ ಇದ್ದಲ್ಲಿ ಈ ಕಛೇರಿಗೆ ಪತ್ರ ಬರೆದು ತಿಳಿಸಬೇಕೆಂದು ಕೋರಲಾಗಿದೆ. ದಿನಾಂಕ: 15–04–2024 ರಂದು ಕಾರ್ಯಪಾಲಕ ಇಂಜಿಯನಿಯರ್, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಕುಶಾಲನಗರ ಇವರು ಪತ್ರ ಬರೆದು **"ಕುಶಾಲನಗರ ಉಪವಿಭಾಗದ ಕೂಡಿಗೆ ಶಾಖೆಯನ್ನು ಕೇಂದ್ರಸ್ಥಾನವಾಗಿ ಕೂಡ್ಲೂರು ಗ್ರಾಮದಲ್ಲಿ ಸ್ಥಳಾಂತರಿಸಲು ಸರ್ವೆ ನಂ. 58/9 ರನ್ನು ನಮ್ಮ ಇಲಾಖೆಗೆ ಹಂಚಿಕೆ ಮಾಡಿದ್ದಲ್ಲಿ ಸಾರ್ವಜನಿಕರಿಗೆ ಹಾಗೂ ಇಲಾಖೆಯ ಸಿಬ್ಬಂದಿ ವರ್ಗದವರಿಗೆ ತುಂಬಾ ಅನುಕೂಲವಾಗುವುದರಿಂದ ಸರ್ವೆ ನಂ. 58/9 ರ (ಕೂಡ್ಲೂರು ಗ್ರಾಮ) 466.75 ಚ.ಮೀ ವಿಸ್ತೀರ್ಣವನ್ನು ಹಂಚಿಕೆ ಮಾಡಬೇಕೆಂದು"** ಕೋರಿರುತ್ತಾರೆ. ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ದಿನಾಂಕ:01–03–2024 ರ ಪತ್ರದಲ್ಲಿ ಶ್ರೀ ವಿವೇಕಾನಂದ ಎಜುಕೇಷನ್ ಟ್ರಸ್ಟ್(ರಿ),ಕುಶಾಲನಗರ ಇವರ ಶಿಕ್ಷಣಸಂಸ್ಥೆ ಐ.ಡಿ.ಎಸ್.ಎಂ.ಟಿ ಯೋಜನೆಯಲ್ಲಿ ರಚಿಸಲಾದ ಗುಂಡುರಾವ್ ಬಡಾವಣೆಯಲ್ಲಿದ್ದು ಆಟದ ಮೈದಾನ ಮತ್ತು ತರಗತಿ ಕೊಠಡಿ ಕೊರತೆಯಿರುವುದರಿಂದ ಸದರಿಯವರು ನಾಗರೀಕ ಸೌಲಭ್ಯ ನಿವೇಶನವನ್ನು ಕೋರಿದ್ದು, ಈ ಬಗ್ಗೆ ಮಾನ್ಯ ವಿಭಾಗಾಧಿಕಾರಿಯವರು ಈ ಸಂಬಂಧ ನಿಯಮಾನುಸಾರ ಪರಿಶೀಲಿಸಿ ವರದಿ ನೀಡಲು ಸೂಚಿಸಿರುವುದರಿಂದ ಗುಂಡುರಾವ್ ಬಡಾವಣೆಯ ನಾಗರೀಕ ಸೌಲಭ್ಯ ನಿವೇಶನವು ತಮ್ಮ ಇಲಾಖೆಯಲ್ಲಿ ನೋಂದಣಿ ಆಗಿರುವುದರಿಂದ ಹಾಗೂ ಸಿ.ಎ. ನಿವೇಶನ ಮಂಜೂರಾತಿ ತಮ್ಮ ಇಲಾಖಾ ವ್ಯಾಪ್ತಿಗೆ ಬರುವುದರಿಂದ ಶ್ರೀ ವಿವೇಕಾನಂದ ಏಜುಕೇಷನ್ ಟ್ರಸ್ಟ್ (ರಿ) ರವರ ಕೋರಿಕೆಯಂತೆ ಪರಿಶೀಲಿಸಿ ಸೂಕ್ತ ಕ್ರಮವಹಿಸುವಂತೆ ಕೋರಿರುತ್ತಾರೆ. ಇನ್ನುಳಿದಂತೆ ಯಾವುದೇ ಕೋರಿಕೆಗಳು ಪ್ರಾಧಿಕಾರದ ಕಛೇರಿಗೆ ಸ್ವೀಕೃತವಾಗಿರುವುದಿಲ್ಲ.

ಸದಸ್ಯಕಾರ್ಯದರ್ಶಿ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ ಮಾನ್ಯ ಜಿಲ್ಲಾಧಿಕಾರಿಗಳಿಂದ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಕೊಡಗು ಜಿಲ್ಲಾ ಪಂಚಾಯತ್ ಮಡಿಕೇರಿ ಇವರಿಂದ ಯಾವುದೇ ಅಗತ್ಯತೆಗಳ ಕೋರಿಕೆ ಪಟ್ಟಿಯು ಸ್ವೀಕೃತವಾಗಿರುವುದಿಲ್ಲ. ಇತರೆ ಇಲಾಖೆಗಳಿಂದ ಸ್ವೀಕೃತಗೊಂಡ ಕೋರಿಕೆ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಇಲಾಖೆಗಳಿಂದ ಬಂದ ಕೋರಿಕೆ	ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ
1.	ಕಾರ್ಯಪಾಲಕ ಇಂಜಿಯನಿಯರ್, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಕುಶಾಲನಗರ ಇವರು ಕೂಡ್ಲೂರು ಗ್ರಾಮದ ಸರ್ವೆ ನಂ. 58/9 ರ 466.75 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನ ಹಂಚಿಕೆ ಮಾಡಬೇಕೆಂದು ಕೋರಿರುತ್ತಾರೆ	ಸದರಿ ಇಲಾಖೆಗೆ ಕರ್ನಾಟಕ ನಗರ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು–2016ರ ಪ್ರಕಾರ 30 ವರ್ಷಗಳ ಗುತ್ತಿಗೆ ಅವಧಿಗೆ ಹಂಚಿಕೆ ಮಾಡಬಹುದಾಗಿರುತ್ತದೆ.
2.	ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಶ್ರೀ ವಿವೇಕಾನಂದ ಎಜುಕೇಷನ್ ಟ್ರಸ್ಟ್(ರಿ), ಕುಶಾಲನಗರ ಇವರ ಶಿಕ್ಷಣಸಂಸ್ಥೆ ಐ.ಡಿ.ಎಸ್.ಎಂ.ಟಿ ಯೋಜನೆಯಲ್ಲಿ ರಚಿಸಲಾದ ಗುಂಡುರಾವ್ ಬಡಾವಣೆಯಲ್ಲಿದ್ದು ಆಟದ ಮೈದಾನ ಮತ್ತು ತರಗತಿ ಕೊಠಡಿ ಕೊರತೆಯಿರುವುದರಿಂದ ಗುಂಡುರಾವ್ ಬಡಾವಣೆಯಲ್ಲಿನ 1081.713 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಕೋರಿದ್ದು, ಪರಿಶೀಲಿಸಿ ಸೂಕ್ತ ಕ್ರಮವಹಿಸುವಂತೆ ಕೋರಿರುತ್ತಾರೆ.	ಗುಂಡುರಾವ್ ಬಡಾವಣೆಯಲ್ಲಿರುವ 1081.713 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸಲು ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ವಿಷಯದ ಬಗ್ಗೆ ವಿಷಯ ಸಂಖ್ಯೆ (3) ರಲ್ಲಿ ಮಂಡಿಸಿದೆ. ಆದ್ದರಿಂದ ಶ್ರೀ ವಿವೇಕಾನಂದ ಎಜುಕೇಷನ್ ಟ್ರಸ್ಟ್(ರಿ), ಕುಶಾಲನಗರ ಇವರು ಪ್ರಾಧಿಕಾರದಿಂದ ಸಿ.ಎ. ನಿವೇಶನವನ್ನು ಹಂಚಿಕೆ ಮಾಡಲು ಪ್ರಕಟಣೆ ಹೊರಡಿಸಿದ ನಂತರ ಬೇರೆ ಸಿ.ಎ ನಿವೇಶನವನ್ನು ಕೋರಿದ್ದಲ್ಲಿ ಕ್ರಮವಹಿಸಬಹುದಾಗಿದೆ.

ನಿರ್ಣಯ: ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಕುಶಾಲನಗರ ಇವರಿಗೆ ಕೂಡ್ಲೂರು ಗ್ರಾಮದ ಸರ್ವೆ ನಂ. 58/9 ರ 466.75 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು–2016ರ ಪ್ರಕಾರ 30 ವರ್ಷಗಳ ಗುತ್ತಿಗೆ ಅವಧಿಗೆ ಹಂಚಿಕೆ ಮಾಡಬಹುದೆಂದು ಮತ್ತು ಶ್ರೀ ವಿವೇಕಾನಂದ ಎಜುಕೇಷನ್ ಟ್ರಸ್ಟ್(ರಿ), ಕುಶಾಲನಗರ ಇವರು ಪ್ರಾಧಿಕಾರದಿಂದ ಪ್ರಕಟಣೆ ಹೊರಡಿಸಿದ ನಂತರ ಬೇರೆ ಸಿ.ಎ ನಿವೇಶನವನ್ನು ಕೋರಿದ್ದಲ್ಲಿ ಹಂಚಿಕೆ ಮಾಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(ii): **ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಕೆರೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ.**

ಟಿಪ್ಪಣಿ: ದಿನಾಂಕ:12–03–2024 ರಂದು ನಡೆದ ಸಭೆಯ ನಡವಳಿಗಳ ವಿಷಯ ಸಂಖ್ಯೆ (2)ರಲ್ಲಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಕೆರೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಚರ್ಚಿಸಲಾಗಿದ್ದು, ಸರ್ಕಾರದ ಸುತ್ತೋಲೆಗಳನ್ವಯ ಸಂಬಂಧಪಟ್ಟ ಇಲಾಖೆಗಳಾದ ಸಣ್ಣ ನೀರಾವರಿ ಅಭಿವೃದ್ಧಿ ಉಪವಿಭಾಗ ಮಡಿಕೇರಿ, ಮುಖ್ಯಾಧಿಕಾರಿ ಪುರಸಭೆ ಮತ್ತು ತಹಶೀಲ್ದಾರ್ ಕುಶಾಲನಗರ ಇವರಿಂದ ಮಾಹಿತಿಯನ್ನು ಪಡೆದು ಸಲ್ಲಿಸುವಂತೆ ಸಭೆಯು ಸದಸ್ಯಕಾರ್ಯದರ್ಶಿವರಿಗೆ ಸೂಚಿಸಿ ನಿರ್ಣಯಿಸಲಾಗಿದೆ.

ಸಭೆಯ ನಿರ್ಣಯದಂತೆ ತಹಶೀಲ್ದಾರ್ ಕುಶಾಲನಗರ, ಸಣ್ಣ ನೀರಾವರಿ ಇಲಾಖೆ ಮಡಿಕೇರಿ, ಮಣ್ಣುಪರೀಕ್ಷಾ ಕೇಂದ್ರ ಕೂಡಿಗೆ, ಪರಿಸರ ಅಧಿಕಾರಿ ಮಾಲಿನ್ಯ ನಿಯಂತ್ರಣ ಮಂಡಳಿ ಮಡಿಕೇರಿ ಮತ್ತು ಮುಖ್ಯಾಧಿಕಾರಿ ಪುರಸಭೆ ಇವರುಗಳಿಗೆ ದಿನಾಂಕ: 21–03–2024 ರಂದು ಪತ್ರ ಬರೆದು, ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಒಟ್ಟು ಏಳು ಕೆರೆಗಳ ಪಟ್ಟಿಯನ್ನು ನೀಡಿ, ಸದರಿ ಕೆರೆಗಳ ಒಳಹರಿವು ಹಾಗೂ ಹೊರಹರಿವು, ಕೆರೆಗಳು ಕಲ್ಮಷ/ತ್ಯಾಜ್ಯದಿಂದ ಕಲುಷಿತಗೊಂಡಿದ್ದಲ್ಲಿ ಇದರ ಬಗ್ಗೆ ಮಾಹಿತಿ, ಒತ್ತುವರಿ ಹಾಗೂ ಹೂಳು ತೆಗಿಸಿದ್ದಲ್ಲಿ ಇದರ ಬಗ್ಗೆ ಮಾಹಿತಿ ಮತ್ತು ಕೆರೆಗಳ ಹಾಲಿ ಸಾಮರ್ಥ್ಯ ಹಾಗೂ ಪೂರ್ಣ ಸಾಮರ್ಥ್ಯ ಇದರ ಬಗ್ಗೆ ಮಾಹಿತಿಯನ್ನು ನೀಡುವಂತೆ ಕೋರಲಾಗಿದೆ.

ಮುಂದುವರೆದು, ಮಾನ್ಯ ಆಪ್ತ ಕಾರ್ಯದರ್ಶಿಗಳು, ಗೌರವಾನ್ವಿತ ಉಪಲೋಕಾಯುಕ್ತರವರ ಕಛೇರಿ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಕಂ.ಉಪಲೋಕ್/ಎಂವೈಎಸ್ /1880/2024/ ಉ.ಲೋ.ಕಾರ್ಯದರ್ಶಿ ದಿನಾಂಕ: 01–04–2024 ರಲ್ಲಿ ಕುಶಾಲನಗರ ತಾವರೆಕೆರೆಯ ಬಗ್ಗೆ ದಿನಾಂಕ: 22–03–2024 ರ ಕನ್ನಡಪ್ರಭ ಪತ್ರಿಕೆಯಲ್ಲಿ ಸುದ್ದಿ ಪ್ರಕಟವಾಗಿರುವ ಬಗ್ಗೆ ಸ್ವಯಂ ಪ್ರೇರಿತ ದಾಖಲಾಗಿರುವ ದೂರಿನ ಕುರಿತು ಅಗತ್ಯ ಕ್ರಮವಹಿಸಿ ತೆಗೆದುಕೊಂಡ ಕ್ರಮದ ವರದಿಯನ್ನು ದಿನಾಂಕ:13–05–2024 ರೊಳಗಾಗಿ ಸಲ್ಲಿಸಲು ಸೂಚಿಸಿರುತ್ತಾರೆ. (ಈ ಕಚೇರಿ ಸ್ವೀಕೃತಿ ದಿನಾಂಕ: 30–05–2024)

ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಮತ್ತೊಮ್ಮೆ ಸಂಬಂಧಿಸಿದ ಇಲಾಖೆಗಳಿಗೆ ದಿನಾಂಕ: 03–05–2024 ಪತ್ರ ಬರೆದು ಮಾಹಿತಿ ನೀಡುವಂತೆ ಕೋರಲಾಗಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ	ದಿನಾಂಕ	ಕೈಗೊಂಡ ಕ್ರಮದ ವಿವರ	ದಿನಾಂಕ	ಸಂಬಂಧಪಟ್ಟ ಕಛೇರಿಗಳಿಂದ ನೀಡಿರುವ ಮಾಹಿತಿ
1	03.05.2024	ತಹಶೀಲ್ದಾರ್ ಕುಶಾಲನಗರ, ಸಣ್ಣ ನೀರಾವರಿ ಇಲಾಖೆ, ಮಡಿಕೇರಿ, ಸಹಾಯಕ ನಿರ್ದೇಶಕರು ಮಣ್ಣುಪರೀಕ್ಷಾ ಕೇಂದ್ರ ಕೂಡಿಗೆ, ಪರಿಸರ ಅಧಿಕಾರಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರ ಮಂಡಳಿ ಮಡಿಕೇರಿ ಮತ್ತು ಮುಖ್ಯಾಧಿಕಾರಿ, ಪುರಸಭೆ ಕುಶಾಲನಗರ ಇವರುಗಳಿಗೆ ಕುಶಾಲನಗರ ತಾವರೆಕೆರೆಯನ್ನು ಒಳಗೊಂಡಂತೆ ಕುಶಾಲನಗರ ಯೋಜನಾ ಪ್ರಾಧಿಕಾರದ	06.05.2024	ಮುಖ್ಯಾಧಿಕಾರಿ ಪುರಸಭೆ, ಕುಶಾಲನಗರ ಇವರು ಪುರಸಭೆಗೆ ಹಸ್ತಾಂತರಗೊಂಡಿರುವ 12 ಕೆರೆಗಳು ಒತ್ತುವರಿಯಾಗಿರುವುದಿಲ್ಲ ಎಂದು ಮತ್ತು ಕೆರೆಗಳಿಗೆ ನೇರವಾಗಿ ಕಲುಷಿತ ನೀರು ಸೇರದಂತೆ ಕ್ರಮವಹಿಸಲಾಗಿದೆ ಎಂದು ಹಾಗೂ **ಸರ್ವೆ ನಂ. 35 ರಲ್ಲಿ ಬರುವ ತಾವರೆಕೆರೆಯನ್ನು ಅಭಿವೃದ್ಧಿ ಪಡಿಸಲು ಹಸ್ತಾಂತರಿಸಲಾಗಿದೆ ಎಂದು ಪತ್ರ ಬರೆದು ತಿಳಿಸಿರುತ್ತಾರೆ.**
		ವ್ಯಾಪ್ತಿಯಲ್ಲಿರುವ ಒಟ್ಟು ಏಳು ಕೆರೆಗಳ ಒಳಹರಿವು ಹಾಗೂ ಒಳಹರಿವು, ಕೆರೆಗಳು ಕಲ್ಮಷ/ತ್ಯಾಜ್ಯದಿಂದ ಕಲುಷಿತಗೊಂಡಿದ್ದಲ್ಲಿ ಇದರ ಬಗ್ಗೆ ಮಾಹಿತಿ, ಕೆರೆಗಳು ಒತ್ತುವರಿಗೊಂಡಿದ್ದಲ್ಲಿ ಒತ್ತುವರಿ ತೆರವುಗೊಳಿಸಿ ಹಾಗೂ ಹೂಳು ತೆಗೆಸಿದ್ದಲ್ಲಿ ಇದರ ಬಗ್ಗೆ ಮಾಹಿತಿ ಮತ್ತು ಸದರಿ ಕೆರೆಗಳ ಹಾಲಿ ಸಾಮರ್ಥ್ಯ ಹಾಗೂ ಪೂರ್ಣ ಸಾಮರ್ಥ್ಯ ಇವುಗಳ ಬಗ್ಗೆ ಮಾಹಿತಿಯನ್ನು ಕೂಡಲೇ ಈ ಕಚೇರಿಗೆ ಒದಗಿಸಿಕೊಡಬೇಕೆಂದು ಕೋರಲಾಗಿದೆ.	04.05.2024 (ಈ ಕಛೇರಿ ಸ್ವೀಕೃತಿ ದಿನಾಂಕ: 06.05.202)	ತಹಶೀಲ್ದಾರ್ ಕುಶಾಲನಗರ ತಾಲ್ಲೂಕು ಇವರು ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಏಳು ಕೆರೆಗಳ ಒಳ ಹರಿವು ಹಾಗೂ ಒಳಹರಿವಿನ ಮಾಹಿತಿ ಈ ಕಚೇರಿಯಲ್ಲಿ ಲಭ್ಯವಿರುವುದಿಲ್ಲವೆಂದು, ಕೆರೆಗಳು ಕಲ್ಮಷ/ತ್ಯಾಜ್ಯದಿಂದ ಕಲುಷಿತಗೊಂಡಿರುವ ಬಗ್ಗೆ ಪುರಸಭೆಯಿಂದ ಮಾಹಿತಿ ಪಡೆಯಬಹುದಾಗಿರುತ್ತದೆಂದು, ಬೈಚನಹಳ್ಳಿ ಸ.ನಂ. 21ರ ಮತ್ತು ಗುಮ್ಮನಕೊಲ್ಲಿ ಸ.ನಂ. 30ರ ಕೆರೆಗಳನ್ನು ಈಗಾಗಲೇ ಪುರಸಭೆ ಮುಖ್ಯಾಧಿಕಾರಿಯವರಿಗೆ ಹಸ್ತಾಂತರಿಸಲಾಗಿರುತ್ತದೆ, ಮಾದಾಪಟ್ಟಣ ಗ್ರಾಮದ ಸ.ನಂ. 98 ರ 2.57 ಎಕರೆ ಕೆರೆ ಜಾಗದ ಸರ್ವೆ ಕಾರ್ಯವಾಗಿದ್ದು ಒತ್ತುವರಿ ತೆರವು ಮಾಡಿ ಹಸ್ತಾಂತರಿಸಲು ಬಾಕಿ ಇರುತ್ತದೆ, **ಬೈಚನಹಳ್ಳಿ ಗ್ರಾಮದ ಸ.ನಂ. 35 ರಲ್ಲಿ 3.80 ಎಕರೆ ವಿಸ್ತೀರ್ಣದ ತಾವರೆಕೆರೆಯನ್ನು ಸರ್ವೆ ಮಾಡಿ ಯಾವುದೇ ಒತ್ತುವರಿ ಇಲ್ಲವೆಂದು ವರದಿಸಿರುವಂತೆ ದಿನಾಂಕ:18–03–2020 ರಂದು ಪಟ್ಟಣಪಂಚಾಯಿತಿಯವರಿಗೆ ಹಸ್ತಾಂತರಿಸಲಾಗಿರುತ್ತದೆ ಮತ್ತು ಸದರಿಯವರು ಕೆರೆಗೆ ಗಡಿ ಕಲ್ಲು ಹಾಕಿಕೊಂಡಿರುತ್ತಾರೆ, ಹಾಗೂ ದಿನಾಂಕ: 10–03–2021 ರಂದು ಮರುಸರ್ವೆ ಕಾರ್ಯ ನಡೆಸಿ ಹದ್ದುಬಸ್ತು ಗುರುತಿಸಲಾಗಿದ್ದು ತಾವರೆಕೆರೆಯು ಯಾವುದೇ ಒತ್ತುವರಿಯಾಗಿರುವುದಿಲ್ಲ ಎಂಬ ಸರ್ವೆ ಇಲಾಖೆಯ ವರದಿನುಸಾರ ಮುಖ್ಯಾಧಿಕಾರಿಗಳು ಕುಶಾಲನಗರ ಪಟ್ಟಣ ಪಂಚಾಯಿತಿಯವರಿಗೆ ಕೆರೆಯನ್ನು ಮರುಹಸ್ತಾಂತರಿಸಲಾಗಿರುತ್ತದೆ** ಎಂದು ಮತ್ತು ಕೆರೆಗಳ ಹಾಲಿ ಸಾಮರ್ಥ್ಯ ಹಾಗೂ ಪೂರ್ಣ ಸಾಮರ್ಥ್ಯದ ಬಗ್ಗೆ ಈ ಕಛೇರಿಯಲ್ಲಿ ಲಭ್ಯವಿರುವುದಿಲ್ಲ ಎಂದು ತಿಳಿಸಿ, ಸ.ನಂ. ಗಳ ಪಹಣಿ ಪ್ರತಿಯನ್ನು ಲಗತ್ತಿಸಿರುತ್ತಾರೆ.
	03.05.2024	ಮುಖ್ಯಾಧಿಕಾರಿ ಪುರಸಭೆ ಇವರಿಗೆ ಪತ್ರ ಬರೆದು ತಹಶೀಲ್ದಾರ್ ಕುಶಾಲನಗರ, ಸಣ್ಣ ನೀರಾವರಿ ಇಲಾಖೆ, ಮಡಿಕೇರಿ, ಸಹಾಯಕ ನಿರ್ದೇಶಕರು ಮಣ್ಣುಪರೀಕ್ಷಾ ಕೇಂದ್ರ ಕೂಡಿಗೆ, ಪರಿಸರ ಅಧಿಕಾರಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರ ಮಂಡಳಿ ಮಡಿಕೇರಿ ಸದರಿ ಇಲಾಖೆಗಳಿಂದ ಕೆರೆಗಳ ಮಾಹಿತಿಗಳು ಲಭ್ಯವಾದ ಕೂಡಲೇ ತಾವರೆಕೆರೆಯ ವಿಸ್ತೃತ ಯೋಜನಾ ವರದಿಯನ್ನು (DPR) ತಯಾರಿಸಿ ಸಲ್ಲಿಸಲಾಗುವುದು ಎಂದು ತಿಳಿಸಲಾಗಿದೆ.	04.05.2024 (ಈ ಕಛೇರಿ ಸ್ವೀಕೃತಿ ದಿನಾಂಕ: 06.05.2024	ತಹಶೀಲ್ದಾರ್ ಕುಶಾಲನಗರ ಇವರು ತಾವರೆಕೆರೆಯ ಸಂರಕ್ಷಣೆ ಮತ್ತು ಅಭಿವೃದ್ಧಿ ಮಾಡುವ ಕಾರ್ಯ ತಮ್ಮ ವ್ಯಾಪ್ತಿಗೆ ಒಳಪಡುವುದರಿಂದ ಕೆರೆಯ ಅಭಿವೃದ್ಧಿಯ ಸಂಬಂಧ ವಿಸ್ತೃತವಾದ ಯೋಜನಾ ವರದಿ

				ತಯಾರಿಸಿ ಅನುಷ್ಠಾನ ಕ್ರಮವಹಿಸಲು ಮತ್ತು ಈ ಸಂಬಂಧ ಪ್ರತಿ ಹಂತದ ಬಗ್ಗೆ ಹಂತದ ಬಗ್ಗೆ ಕಾಲಕಾಲಕ್ಕೆ ವರದಿ ನೀಡಲು ಕೋರಿದೆ ಹಾಗೂ ಸದರಿ ದೂರಿನ ಸಂಬಂಧ ಮಾನ್ಯ ಗೌರವಾನ್ವಿತ ಲೋಕಾಯುಕ್ತರಿಗೆ ಅನುಪಾಲನಾ ವರದಿ ನೀಡಲು ಕೋರಿದೆ ಎಂದು ಪತ್ರ ಬರೆದಿರುತ್ತಾರೆ.
			04.05.2024 (ಈ ಕಛೇರಿ ಸ್ವೀಕೃತಿ ದಿನಾಂಕ: 07.05.2024)	ಪರಿಸರ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮಡಿಕೇರಿ ಇವರು ಈ ಕಛೇರಿಗೆ ಪತ್ರ ಈ ಕಛೇರಿಯಿಂದ ನವೆಂಬರ್ 2023, ಡಿಸೆಂಬರ್ 2023, ಫೆಬ್ರವರಿ 2024 ರಿಂದ ಏಪ್ರಿಲ್ 2024 ರವರೆಗೆ ತಾವರೆಕೆರೆ, ಬೈಚನಹಳ್ಳಿ ಕುಶಾಲನಗರದಲ್ಲಿ ನೀರಿನ ಮಾದರಿ ಸಂಗ್ರಹಿಸಿದ್ದು, ವಿಶ್ಲೇಷಣಾ ವರದಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ, ಸದರಿ ಕೆರೆಗೆ ಸುತ್ತಮುತ್ತ ಇರುವ ವಸತಿ ಪ್ರದೇಶದಿಂದ ಕೊಳಚೆ ನೀರು ಸೇರುತ್ತಿದೆ ಎಂದು ತಿಳಿಸಿ ತಾವರೆಕೆರೆಯ ವಿಶ್ಲೇಷಣಾ ವರದಿಯನ್ನು ಲಗತ್ತಿಸಿರುತ್ತಾರೆ.
			07.05.2024 (ಈ ಕಛೇರಿ ಸ್ವೀಕೃತಿ ದಿನಾಂಕ: 08.05.2024)	ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗ ಮಡಿಕೇರಿ ಇವರು ಪ್ರಾಧಿಕಾರದಿಂದ ಕೇಳಿರುವ ಕೆರೆಗಳು ಸಣ್ಣ ನೀರಾವರಿ ವ್ಯಾಪ್ತಿಗೆ ಒಳಪಡದೇ ಇರುವುದರಿಂದ, ಸದರಿ ಕೆರೆಗಳಿಗೆ ಸಂಬಂಧಿಸಿದ ಯಾವುದೇ ಮಾಹಿತಿಯು ನಮ್ಮ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ ಎಂದು ತಿಳಿಸಿ, ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ ಎಂದು ತಿಳಿಸಿರುತ್ತಾರೆ.
2	07.05.2024 7.05.2024	ಪ್ರಾಧಿಕಾರದಿಂದ ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಇಲಾಖೆ, ಬೆಂಗಳೂರು ಇವರಿಗೆ ಪತ್ರ ಬರೆದು, ಕುಶಾಲನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಕೆರೆಗಳ (ತಾವರೆಕೆರೆಯನ್ನು ಒಳಗೊಂಡಂತೆ) ಸವಿಸ್ತಾರವಾದ ಅಂದಾಜು ಪಟ್ಟಿಯನ್ನು (comprehensive Estimate) ಹಾಗೂ ಯೋಜನೆಯ ವಿಸ್ತೃತ ಯೋಜನಾ ವರದಿಯನ್ನು (DPR) ಸಿದ್ಧಪಡಿಸಿಕೊಡಲು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ, ಮಡಿಕೇರಿ ಇವರಿಗೆ ಸೂಚಿಸುವಂತೆ ಮುಖ್ಯ ಅಭಿಯಂತರರು ಸಣ್ಣನೀರಾವರಿ ಇಲಾಖೆ ಇವರಿಗೆ ತಮ್ಮ ಮುಖಾಂತರ ಪತ್ರ ಬರೆದು ತಿಳಿಸಬೇಕೆಂದು ಕೋರಲಾಗಿದೆ. ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ, ಮಡಿಕೇರಿ ಇವರಿಗೆ ಪತ್ರ ಬರೆದು, ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಇಲಾಖೆ, ಬೆಂಗಳೂರು ಇವರಿಗೆ ಪತ್ರ ಬರೆದಿದ್ದು, ಅಂದಾಜು ಪಟ್ಟಿಯನ್ನು ಮತ್ತು ಯೋಜನಾ ವರದಿಯನ್ನು (DPR) ಸಿದ್ಧಪಡಿಸಿಕೊಡಲು ಸಹಾಯಕ		

		ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಇಲಾಖೆ, ಮಡಿಕೇರಿ ಇವರಿಗೆ ಸೂಚಿಸುವಂತೆ ಮುಖ್ಯ ಅಭಿಯಂತರರು ಸಣ್ಣನೀರಾವರಿ ಇಲಾಖೆ ಇವರಿಗೆ ತಮ್ಮ ಮುಖಾಂತರ ಪತ್ರ ಬರೆದು ತಿಳಿಸಬೇಕೆಂದು ಕೋರಲಾಗಿದ್ದು, ಸದರಿಯವರಿಂದ ಆದೇಶ ಬಂದ ನಂತರ ಕೆರೆಗಳ ಯೋಜನಾ ವರದಿ (DPR) ಹಾಗೂ ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿಕೊಡುವಂತೆ ಕೋರಲಾಗಿದೆ. **ಸಹಾಯಕ ಕಾರ್ಯಪಾಲಕ ಅಭಿಯಂತರರು ಮಡಿಕೇರಿ ಇವರು ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ವಿಭಾಗ, ಮಂಗಳೂರು ಇವರಿಗೆ ಅಂದಾಜುಪಟ್ಟಿ ಹಾಗೂ ಡಿ.ಪಿ.ಆರ್ ತಯಾರಿಸಿಕೊಡಲು ಅನುಮತಿ ನೀಡಲು ಕೋರಿರುತ್ತಾರೆ.**		
	16.05.2024			

ಸದರಿ ವಿಷಯಗಳ ಬಗ್ಗೆ ಮಾನ್ಯ ಆಪ್ತ ಕಾರ್ಯದರ್ಶಿಗಳು, ಗೌರವಾನ್ವಿತ ಉಪಲೋಕಾಯುಕ್ತರವರ ಕಛೇರಿ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ವರದಿಯನ್ನು ಸಲ್ಲಿಸಲಾಗಿದೆ.

ಕುಶಾಲನಗರ ಯೋಜನಾ ಪ್ರಾಧಿಕಾರವು ಕೆ.ಟಿ.ಸಿ.ಪಿ ಕಾಯ್ದೆ ಕಲಂ 4(J) ರನ್ವಯ ಕಾರ್ಯನಿರ್ವಹಿಸುತ್ತಿದ್ದು, ಕೆರೆಗಳ ಅಭಿವೃದ್ಧಿ ಕಾರ್ಯಕ್ಕೆ Funding agency ಮಾತ್ರ ಆಗಿರುತ್ತದೆ. ಕೆರೆಯನ್ನು ಅಭಿವೃದ್ಧಿಪಡಿಸುವ ಅಧಿಕಾರವಿರುವುದಿಲ್ಲ. ಪ್ರಾಧಿಕಾರವು ತಾವರೆಕೆರೆಯ ಮಾಲೀಕತ್ವವಿರುವ ಇಲಾಖೆಯಿಂದ (ಅಂದರೆ ಪುರಸಭೆಯಿಂದ) ಪೂರ್ವಾನುಮತಿಯನ್ನು ಪಡೆದು, ಸಣ್ಣ ನೀರಾವರಿ ಇಲಾಖೆಯ ಸಹಯೋಗದೊಂದಿಗೆ ಕೆರೆಯ ಅಂದಾಜು ಪಟ್ಟಿ ಹಾಗೂ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಬೇಕಾಗಿರುತ್ತದೆ. ಅಭಿವೃದ್ಧಿಪಡಿಸುವ ಕಾರ್ಯವು ಪುರಸಭೆ ವತಿಯಿಂದ ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ಕೆರೆಯನ್ನು ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಳ್ಳಲು ಅವಕಾಶವಿರುವುದಿಲ್ಲ ಎಂದು ಮುಖ್ಯಾಧಿಕಾರಿ, ಪುರಸಭೆ ಇವರಿಗೆ ದಿನಾಂಕ: 20–05–2024 ರಂದು ಈ ಕಛೇರಿಯಿಂದ ಪತ್ರ ಬರೆದು ತಿಳಿಸಲಾಗಿದೆ.

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಮಡಿಕೇರಿ ಇವರು ದಿನಾಂಕ: 27–05–2024 ರ ಪತ್ರದಲ್ಲಿ ಸದರಿ ಕೆರೆಗಳಿಗೆ ಸಂಬಂಧಿಸಿದ ಯಾವುದೇ ಮಾಹಿತಿಯು ನಮ್ಮ ಇಲಾಖೆಯಲ್ಲಿ ಲಭ್ಯವಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಸದಸ್ಯಕಾರ್ಯದರ್ಶಿ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ವಿಭಾಗ, ಮಂಗಳೂರು ಇವರಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮಡಿಕೇರಿ ಇವರಿಗೆ ಅನುಮತಿ ದೊರೆತ ನಂತರ ಸಣ್ಣ ನೀರಾವರಿ ಇಲಾಖೆಯ ಸಹಯೋಗದೊಂದಿಗೆ ಕೆರೆಯ ಅಂದಾಜು ಪಟ್ಟಿ ಹಾಗೂ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗುವುದು. ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ:– ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿದ್ದು, ಮುಂದಿನ ಸಭೆಗೆ ಮಂಡಿಸಿ ಚರ್ಚಿಸುವಂತೆ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(iii) ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ ಮುಳ್ಳುಸೋಗೆ ಗ್ರಾಮದ ಸ.ನಂ. 41/ಎ ರಲ್ಲಿ 2.17 ಎಕರೆ, ಸ.ನಂ. 42/1 ರಲ್ಲಿ 4.32.50 ಎಕರೆ ಮತ್ತು ಗೊಂದಿಬಸವನಹಳ್ಳಿ ಗ್ರಾಮದ ಸ.ನಂ. 44/3 ರಲ್ಲಿ 0.88 ಎಕರೆ, ಸ.ನಂ. 37/2 ರಲ್ಲಿ 0.52.50 ಎಕರೆ ಒಟ್ಟು 7.90 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವ ಬಗ್ಗೆ **(ಅರ್ಜಿದಾರರು:– ಶ್ರೀ ಎಸ್.ಎಸ್. ಮನೋಹರ್)**

ಸದಸ್ಯಕಾರ್ಯದರ್ಶಿ ಅಭಿಪ್ರಾಯ: ಸದರಿ ವಿಷಯದ ಬಗ್ಗೆ ಹಿಂದಿನ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಿ, ಸರ್ಕಾರಕ್ಕೆ ಪತ್ರ ಬರೆದು ಮಾರ್ಗದರ್ಶನ ಪಡೆಯುವುದು ಸೂಕ್ತವೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು. ಅದರಂತೆ ಸರ್ಕಾರಕ್ಕೆ ವಿವರಣೆ ನೀಡಿ ದಿನಾಂಕ: 12–07–2024 ರಂದು ಪತ್ರ ಬರೆದು ಮಾರ್ಗದರ್ಶನವನ್ನು ಕೋರಲಾಗಿದೆ.

ನಿರ್ಣಯ: ಸದರಿ ವಿಷಯದ ಬಗ್ಗೆ ಸಭೆಯಲ್ಲಿ ಓದಿ ಸ್ಥಿರೀಕರಿಸಲಾಯಿತು.

ವಿಷಯಸಂಖ್ಯೆ:(02): ಪ್ರಾಧಿಕಾರದ ಖಾತೆಗೆ ಮಾರ್ಚ್ 2024, ಏಪ್ರಿಲ್ 2024, ಮೇ 2024 ಮತ್ತು ಜೂನ್ 2024 ರ ಮಾಹೆಗಳ ಜಮಾ ಮತ್ತು ಖರ್ಚುಗಳ ವಿವರಗಳನ್ನು ಪ್ರಾಧಿಕಾರದ ಸಭೆಗೆ ಮಂಡಿಸುವ ಬಗ್ಗೆ.

ಟಿಪ್ಪಣಿ: ಮಾರ್ಚ್ 2024, ಏಪ್ರಿಲ್ 2024, ಮೇ 2024 ಮತ್ತು ಜೂನ್ 2024 ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸ್ಥಿರೀಕರಣಕ್ಕಾಗಿ ಮಂಡಿಸಲಾಗಿದೆ.

ಮಾರ್ಚ್ 2024					
ಕ್ರ.ಸಂ	**ಜಮಾ**	**ಮೊಬಲಗು**	**ಕ್ರ.ಸಂ**	**ವೆಚ್ಚ**	**ಮೊಬಲಗು**
1.	**ಪ್ರಾರಂಭಿಕ ಶಿಲ್ಕು**	**ರೂ. 29,65,105=00**	1.	ಹೊರಗುತ್ತಿಗೆ ಸೇವೆ	ರೂ. 54,820=00
2.	ಮಾರ್ಚ್ 2024 ರ ಮಾಹೆಯ ಜಮಾ		2.	ಸದಸ್ಯಕಾರ್ಯದರ್ಶಿ ವೇತನ	ರೂ. 88,261=00
			3.	ವಿದ್ಯುತ್	ರೂ. 928=00
	1) ಪರಿಶೀಲನಾ ಶುಲ್ಕ	ರೂ. 22,075=00	4.	ದೂರವಾಣಿ	ರೂ. 1769=00
	2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ	ರೂ. 26,96,375=00	5.	ಸಾದಿಲ್ವಾರು ವೆಚ್ಚ	ರೂ. 4,939=00
			6.	ಖಾಸಗಿ ವಾಹನ ವೆಚ್ಚ	ರೂ. 1,800=00
	3) ಕಟ್ಟಡದ ಶುಲ್ಕ	ರೂ. 18,960=00		**ವೆಚ್ಚ**	**ರೂ. 1,52,517=00**
	4) ಇತರೆ ಶುಲ್ಕ	ರೂ. 610=00		**ಅಖೈರು ಶಿಲ್ಕು**	**ರೂ. 55,75,014=00**
	5) ಬ್ಯಾಂಕ್ ಬಡ್ಡಿ	ರೂ. 24,406=00			
	ಒಟ್ಟು ಮೊಬಲಗು	**ರೂ. 57,27,531=00**		**ಒಟ್ಟು ಮೊಬಲಗು**	**ರೂ. 57,27,531=00**

ಏಪ್ರಿಲ್ –2024					
ಕ್ರ.ಸಂ	**ಜಮಾ**	**ಮೊಬಲಗು**	**ಕ್ರ.ಸಂ**	**ವೆಚ್ಚ**	**ಮೊಬಲಗು**
1.	**ಪ್ರಾರಂಭಿಕ ಶಿಲ್ಕು**	**ರೂ. 55,75,014=00**	1.	ಹೊರಗುತ್ತಿಗೆ ಸೇವೆ	ರೂ. 54,820=00
2.	ಏಪ್ರಿಲ್ 2024 ರ ಮಾಹೆಯ ಜಮಾ		2.	ಸದಸ್ಯಕಾರ್ಯದರ್ಶಿ ವೇತನ	ರೂ. 1,01,047=00
			3.	ವಿದ್ಯುತ್	ರೂ. 1,292=00
	1) ಪರಿಶೀಲನಾ ಶುಲ್ಕ	ರೂ. 38,500=00	4.	ದೂರವಾಣಿ	ರೂ. 1,769=00
	2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ	ರೂ. 17,870=00	5.	ಬ್ಯಾಂಕ್ ಕಮಿಷನ್	ರೂ. 177=00
	3) ಕಟ್ಟಡದ ಶುಲ್ಕ	ರೂ. 14,480=00			
	4) ಇತರೆ ಶುಲ್ಕ	ರೂ. 4000=00		**ವೆಚ್ಚ**	ರೂ. 1,59,105=00
				ಅಖೈರು ಶಿಲ್ಕು	ರೂ. 54,90,759=00
	ಒಟ್ಟು ಮೊಬಲಗು	**ರೂ.56,49,864=00**		**ಒಟ್ಟು ಮೊಬಲಗು**	**ರೂ. 56,49,864=00**

ಮೇ –2024					
ಕ್ರ.ಸಂ	**ಜಮಾ**	**ಮೊಬಲಗು**	**ಕ್ರ.ಸಂ**	**ವೆಚ್ಚ**	**ಮೊಬಲಗು**
1.	**ಪ್ರಾರಂಭಿಕ ಶಿಲ್ಕು**	**ರೂ. 54,90,759=00**	1.	ಹೊರಗುತ್ತಿಗೆ ಸೇವೆ	ರೂ. 39,320=00
2.	ಮೇ 2024 ರ ಮಾಹೆಯ ಜಮಾ		2.	ಸದಸ್ಯಕಾರ್ಯದರ್ಶಿ ವೇತನ	ರೂ. 90,283=00
			3.	ಸಾದಿಲ್ವಾರು ವೆಚ್ಚ	ರೂ. 1,386=00
	1) ಪರಿಶೀಲನಾ ಶುಲ್ಕ	ರೂ. 17,410=00	4.	ವಿದ್ಯುತ್	ರೂ. 1,083=00

	2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ	ರೂ. 3,090=00	5.	ದೂರವಾಣಿ	ರೂ. 1,804=00
				ವೆಚ್ಚ	**ರೂ. 1,33,876=00**
	3) ಕಟ್ಟಡದ ಶುಲ್ಕ	ರೂ. 4,920=00		**ಅಖೈರು ಶಿಲ್ಕು**	**ರೂ. 53,99,213=00**
	4) ಇತರೆ ಶುಲ್ಕ	ರೂ. 6,910=00			
	ಒಟ್ಟು ಮೊಬಲಗು	**ರೂ. 55,33,089=00**		**ಒಟ್ಟು ಮೊಬಲಗು**	**ರೂ. 55,33,089=00**

ಜೂನ್ –2024					
ಕ್ರ.ಸಂ	**ಜಮಾ**	**ಮೊಬಲಗು**	**ಕ್ರ.ಸಂ**	**ವೆಚ್ಚ**	**ಮೊಬಲಗು**
1.	**ಪ್ರಾರಂಭಿಕ ಶಿಲ್ಕು**	**ರೂ. 53,99,213=00**	1.	ಹೊರಗುತ್ತಿಗೆ ಸೇವೆ	ರೂ. 39,320=00
2.	ಜೂನ್ 2024 ರ ಮಾಹೆಯ ಜಮಾ		2.	ಸದಸ್ಯಕಾರ್ಯದರ್ಶಿ ವೇತನ	ರೂ. 90,283=00
			3.	ಸಾದಿಲ್ವಾರು ವೆಚ್ಚ	ರೂ. 6,350=00
	1) ಪರಿಶೀಲನಾ ಶುಲ್ಕ	ರೂ. 27,130=00	4.	ವಿದ್ಯುತ್	ರೂ. 860=00
	2) ಕೆ.ಟಿ.ಸಿ.ಪಿ.ಕಾಯ್ದೆ 18ರಅಡಿಯಲ್ಲಿ ಪಾವತಿಸುವ ಶುಲ್ಕ	ರೂ. 60,530=00	5.	ದೂರವಾಣಿ	ರೂ. 1,769=00
			6.	ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಗೆ ಶೇ.5% ಉತ್ತಮತೆ ಶುಲ್ಕ ಪಾವತಿ	ರೂ. 1,63,464=00
	3) ಕಟ್ಟಡದ ಶುಲ್ಕ	ರೂ. 8,330=00			
	4) ಇತರೆ ಶುಲ್ಕ	ರೂ. 1,380=00	7.	ಅಂಚೆ ಚೀಟಿ ವೆಚ್ಚ	ರೂ. 2000=00
	5) ಅಭಿಯಂತರರ ನೊಂದಣಿ ಶುಲ್ಕ	ರೂ. 8,000=00	8.	ಎಂ.ಸಿ.ಸಿ ಬ್ಯಾಂಕ್ ಚಾರ್ಜಸ್	ರೂ. 265.50
				ವೆಚ್ಚ	**ರೂ.3,04,311.50=00**
	6) ಬ್ಯಾಂಕ್ ಬಡ್ಡಿ	ರೂ. 36,744=00		**ಅಖೈರು ಶಿಲ್ಕು**	**ರೂ. 52,37,015=50**
	ಒಟ್ಟು ಮೊಬಲಗು	**ರೂ. 55,41,327=00**		**ಒಟ್ಟು ಮೊಬಲಗು**	**ರೂ. 55,41,327=00**

30–06–2024 ರ ಅಂತ್ಯಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಕುಶಾಲನಗರ ಶಾಖೆಯಲ್ಲಿ ಇರುವ ಮೊಬಲಗಿನ ವಿವರ.

ಕ್ರ.ಸಂ.	**ಬ್ಯಾಂಕ್ ಖಾತೆಯ ವಿವರ**	**ಮೊಬಲಗು**
1.	ಉಳಿತಾಯ ಶುಲ್ಕದ ಖಾತೆ ಸಂಖ್ಯೆ: 64041739956 (ಪರಿಶೀಲನಾ ಶುಲ್ಕ, ಕೆ.ಟಿ.ಸಿ.ಪಿ.ಕಾಯ್ದೆ 18ರ ಅಡಿಯಲ್ಲಿ ಉತ್ತಮತೆ ಶುಲ್ಕ, ಕಟ್ಟಡ ಶುಲ್ಕ ಹಾಗೂ ಇತರೆ ಶುಲ್ಕ)	52,37,015=00
2.	ಕೆರೆ ಅಭಿವೃದ್ಧಿ ಶುಲ್ಕದ ಖಾತೆ ಸಂಖ್ಯೆ: 64113591421	4,50,475=00
3.	ಸೆಸ್ ಶುಲ್ಕದ ಖಾತೆ ಸಂಖ್ಯೆ: 40179698207 (ನೀರು ಸರಬರಾಜು ಸೆಸ್, ಸ್ಲಂ ಸೆಸ್, ವರ್ತುಲ ರಸ್ತೆ,)	10,11,988=00
	ಒಟ್ಟು ಮೊಬಲಗು	**66,99,477=00**

ನಿರ್ಣಯ: ಮಾರ್ಚ್ 2024, ಏಪ್ರಿಲ್ 2024, ಮೇ 2024 ಮತ್ತು ಜೂನ್ 2024 ರ ಮಾಹೆಗಳ ಜಮಾ ಮತ್ತು ಖರ್ಚುಗಳನ್ನು ಸಭೆಯಲ್ಲಿ ಚರ್ಚಿಸಿ, ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯ ಸಂಖ್ಯೆ(03): ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿಯ ಸ್ವಂತ ಕಟ್ಟಡ ನಿರ್ಮಿಸಲು ನಾಗರೀಕ ಸೌಲಭ್ಯ ನಿವೇಶನವನ್ನು ಕಾಯ್ದಿರಿಸುವ ಬಗ್ಗೆ.

ಟಿಪ್ಪಣಿ: ಈ ಹಿಂದೆ ದಿನಾಂಕ 18–09–2021 ರಂದು ನಡೆದ ಯೋಜನಾ ಪ್ರಾಧಿಕಾರದ ಸಭೆಯಲ್ಲಿ ಬೈಚನಹಳ್ಳಿ ಗ್ರಾಮದ ಸ.ನಂ. 80/2 ರಲ್ಲಿನ ಚಂದ್ರಶೇಖರ ಬಡಾವಣೆಯಲ್ಲಿರುವ ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟಿರುವ ನಿವೇಶನದಲ್ಲಿ ಯೋಜನಾ ಪ್ರಾಧಿಕಾರದ ಸ್ವಂತ ಕಟ್ಟಡ ನಿರ್ಮಿಸುವುದು ಸೂಕ್ತವೆಂದು ತೀರ್ಮಾನಿಸಲಾಗಿರುತ್ತದೆ. ಆದರೆ ಸದರಿ ಬಡಾವಣೆಯ ರಸ್ತೆಗೆ ಸಂಬಂಧಿಸಿದಂತೆ ಪುರಸಭೆಯವರು

ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಪ್ರಕರಣ ನ್ಯಾಯಾಲಯದಲ್ಲಿ ಇರುತ್ತದೆ. ಆದ್ದರಿಂದ ಅದನ್ನು ರದ್ದುಪಡಿಸಿ, ಬೈಚನಹಳ್ಳಿ ಗ್ರಾಮದಲ್ಲಿ ಐ.ಡಿ.ಎಸ್.ಎಂ.ಟಿ ಯೋಜನೆಯಲ್ಲಿ ರಚಿಸಲಾದ ಗುಂಡುರಾವ್ ಬಡಾವಣೆಯಲ್ಲಿರುವ 1081.713 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವು ಪ್ರಾಧಿಕಾರದ ಹೆಸರಿನಲ್ಲಿ ನೊಂದಣಿಯಾಗಿದ್ದು, ಅದರಲ್ಲಿ ಪ್ರಾಧಿಕಾರದ ಸ್ವಂತ ಕಟ್ಟಡವನ್ನು ನಿರ್ಮಿಸಬಹುದಾಗಿದ್ದು, ಸದರಿ ಸಿ.ಎ. ನಿವೇಶನವನ್ನು ಪ್ರಾಧಿಕಾರದ ಸ್ವಂತ ಕಟ್ಟಡ ನಿರ್ಮಿಸಲು ಕಾಯ್ದಿರಿಸುವ ಬಗ್ಗೆ ವಿಷಯವನ್ನು ಸಭೆಗೆ ಮಂಡಿಸಿದೆ.

ಸದಸ್ಯಕಾರ್ಯದರ್ಶಿ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ ಬೈಚನಹಳ್ಳಿ ಗ್ರಾಮದಲ್ಲಿ ಐ.ಡಿ.ಎಸ್.ಎಂ.ಟಿ ಯೋಜನೆಯಲ್ಲಿ ರಚಿಸಲಾದ ಗುಂಡುರಾವ್ ಬಡಾವಣೆಯಲ್ಲಿರುವ 1081.713 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವು ಪ್ರಾಧಿಕಾರದ ಹೆಸರಿನಲ್ಲಿ ನೊಂದಣಿಯಾಗಿದ್ದು, ಅದರಲ್ಲಿ ಪ್ರಾಧಿಕಾರದ ಸ್ವಂತ ಕಟ್ಟಡವನ್ನು ನಿರ್ಮಿಸಲು ಕಾಯ್ದಿರಿಸಬಹುದಾಗಿದೆ.

ಶ್ರೀ ವಿವೇಕಾನಂದ ಏಜುಕೇಷನ್ ಟ್ರಸ್ಟ್ (ರಿ) ಕುಶಾಲನಗರ ಇವರು ಆಟದ ಮೈದಾನ ಮತ್ತು ತರಗತಿ ಕೊಠಡಿ ಕೊರತೆಯಿರುವುದರಿಂದ ಸದರಿ ಗುಂಡುರಾವ್ ಬಡಾವಣೆಯಲ್ಲಿರುವ 1081.713 ಚ.ಮೀ ಸಿ.ಎ. ನಿವೇಶನವನ್ನು ಕೋರಿದ್ದು, ಸದರಿಯವರು ಪ್ರಾಧಿಕಾರದಿಂದ ಸಿ.ಎ. ನಿವೇಶನವನ್ನು ಹಂಚಿಕೆ ಮಾಡಲು ಪ್ರಕಟಣೆ ಹೊರಡಿಸಿದ ನಂತರ ಬೇರೆ ಸಿ.ಎ ನಿವೇಶನವನ್ನು ಕೋರಿದ್ದಲ್ಲಿ ಕ್ರಮವಹಿಸಬಹುದಾಗಿದೆ.

ಮುಂದುವರೆದು, ಸರ್ಕಾರದ ಸುತ್ತೋಲೆ ಸಂಖ್ಯೆ: UDD 285 MYAPRA 2016 dated: 03-06-2019 ರನ್ವಯ ಪ್ರಾಧಿಕಾರದ ಸ್ವಂತ ಕಟ್ಟಡ ನಿರ್ಮಿಸಲು Fund 1 (General Administration and Master plan) ರಲ್ಲಿರುವ ಮೊಬಲಗನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಆದರೆ Fund 1 ಉಳಿತಾಯ ಖಾತೆಯಲ್ಲಿ ಜೂನ್ 2024ರ ಅಂತ್ಯಕ್ಕೆ ರೂ. 52,37,015=00 ಮಾತ್ರ ಇದ್ದು, ಇದರಲ್ಲಿ ಪ್ರಾಧಿಕಾರದ ವೆಚ್ಚಗಳನ್ನು (ಅಧಿಕಾರಿ ಮತ್ತು ನೌಕರರ ವೇತನ, ಕಛೇರಿ ಬಾಡಿಗೆ, ಸಾದಿಲ್ವಾರು ವೆಚ್ಚ ಮತ್ತು ಇತರೆ ವೆಚ್ಚಗಳು) ಭರಿಸಬೇಕಾಗಿರುವುದರಿಂದ ಉಳಿತಾಯ ಖಾತೆಯಲ್ಲಿ ಕನಿಷ್ಟ ಮೊಬಲಗು (minimum balance) ಅನ್ನು ಕಾಯ್ದಿರಿಸಬೇಕಾಗಿರುವ ಕಾರಣ ಇದನ್ನು ಬಳಸಿಕೊಳ್ಳಲು ಸೂಕ್ತವಾಗಿರುವುದಿಲ್ಲ. ಅದಲ್ಲದೇ ಈ ಕಛೇರಿಗೆ ತಾಂತ್ರಿಕ ಅನುಮೋದನೆ ಕೋರಿ ಸ್ವೀಕೃತಗೊಳ್ಳುವ ಕಡತಗಳ ಸಂಖ್ಯೆ ಪ್ರತಿ ಮಾಹೆ ವ್ಯತ್ಯಯಗೊಳ್ಳುತ್ತದೆ. ಕೆಲವು ಮಾಹೆಗಳಲ್ಲಿ ಅತೀ ಕಡಿಮೆ ಸಂಖ್ಯೆಯಲ್ಲಿ ಕಡತಗಳು ಸ್ವೀಕೃತಿಯಾಗದೇ ಇದ್ದಾಗ, ಹಿಂದೆ ಲಭ್ಯವಿರುವ ಉಳಿಕೆ ಮೊಬಲಗನ್ನು ಕಛೇರಿಯ ಖರ್ಚು–ವೆಚ್ಚಗಳಿಗೆ ಉಪಯೋಗಿಸಿ ಕೊಳ್ಳಬಹುದಾಗಿರುತ್ತದೆ. ಅದರ ಬದಲಾಗಿ ಇದೇ ಉಳಿತಾಯ ಖಾತೆಯಿಂದ ಹಿಂದೆ ನಿಗಧಿತ ಠೇವಣಿಯನ್ನು ಇಟ್ಟಿದ್ದು ಅದರಲ್ಲಿ ರೂ. 16,03,842=00 ಇದ್ದು, ಸದರಿ ಠೇವಣಿಯನ್ನು ಉಪಯೋಗಿಸಿಕೊಳ್ಳಬಹುದಾಗಿದೆ. ಈ ಹಿಂದೆ ಚಂದ್ರಶೇಖರ ಬಡಾವಣೆಯಲ್ಲಿರುವ 1078.0 ಚ.ಮೀ ನಾಗರೀಕ ಸೌಲಭ್ಯ ನಿವೇಶನದಲ್ಲಿ ಸ್ವಂತ ಕಟ್ಟಡ ನಿರ್ಮಿಸಲು ಅಂದಾಜು ಪಟ್ಟಿ ತಯಾರಿಸಿದ್ದು ಅದರಲ್ಲಿ 1.2 ಕೋಟಿ ರೂಪಾಯಿ ಅಂದಾಜಿಸಲಾಗಿದೆ. ಗುಂಡುರಾವ್ ಬಡಾವಣೆಯ ವಿಸ್ತೀರ್ಣ 1081.713 ಚ.ಮೀ ಇರುವುದರಿಂದ ಅಂದಾಜು ಮೊತ್ತ 1.3 ಕೋಟಿ ಆಗುತ್ತದೆ. ಅದರಿಂದ ಮಾನ್ಯ ಶಾಸಕರಿಂದ ಅನುದಾನ ಪಡೆಯಲು ಮನವಿ ಸಲ್ಲಿಸಬಹುದಾಗಿದೆ. ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ಚರ್ಚೆ: ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಅಧ್ಯಕ್ಷರು ಮತ್ತು ಸದಸ್ಯರುಗಳು ಮಾತನಾಡಿ ವಿಷಯ ಸಂಖ್ಯೆ(1) ರಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಕುಶಾಲನಗರ ಇವರಿಗೆ ಕೂಡ್ಲೂರು ಗ್ರಾಮದ ಸರ್ವೆ ನಂ. 58/9 ರ 466.75 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು 30 ವರ್ಷಗಳ ಗುತ್ತಿಗೆ ಅವಧಿಗೆ ಹಂಚಿಕೆ ಮಾಡಬಹುದೆಂದು ನಿರ್ಣಯಿಸಿರುವುದರಿಂದ ಗುತ್ತಿಗೆ ಮೊಬಲಗನ್ನು ಕಛೇರಿ ಕಟ್ಟಡ ನಿರ್ಮಿಸಲು ಉಪಯೋಗಿಸಿಕೊಳ್ಳಬಹುದೆಂದು ಮತ್ತು ಇತರೆ ಇಲಾಖೆಗಳಿಂದ ಕೋರಿಕೆ ಬಂದಲ್ಲಿ ಸಿ.ಎ. ನಿವೇಶನವನ್ನು ಹಂಚಿಕೆ ಮಾಡಿ, ಬರುವ ಆದಾಯವನ್ನು ಕಛೇರಿ ಕಟ್ಟಡ ನಿರ್ಮಿಸಲು ಉಪಯೋಗಿಸಿಕೊಳ್ಳಬಹುದೆಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ಸರ್ಕಾರದ ಸುತ್ತೋಲೆ ಸಂಖ್ಯೆ: UDD 285 MYAPRA 2016 dated: 03-06-2019 ರ ಪ್ರಕಾರ Fund V Utilisation ನಲ್ಲಿ ಕ್ರಮ ಸಂಖ್ಯೆ iii ರಲ್ಲಿ Any development work relating to providing civic amenities, infrastructure development, street light, Arch, etc. in the local planning area limits

of respective Planning Authority ಎಂದು ನಮೂದಿಸಿರುವ ಕಾರಣ Fund V ನಲ್ಲಿರುವ ಮೊಬಲಗನ್ನು ಉಪಯೋಗಿಸಿಕೊಳ್ಳಬಹುದೆಂದು ತಿಳಿಸಿದರು. ಸದಸ್ಯಕಾರ್ಯದರ್ಶಿಗಳು ಮಾತನಾಡಿ ಕೇವಲ Fund I ನಲ್ಲಿರುವ ಮೊಬಲಗನ್ನು ಮಾತ್ರ ಬಳಸಬಹುದೆಂದು, ಹಾಗೂ ಕಛೇರಿ ಕಟ್ಟಡದ ನಕ್ಷೆ, ಅಂದಾಜು ಪಟ್ಟಿಗಳನ್ನು ಲೋಕೋಪಯೋಗಿ ಇಲಾಖೆಯಿಂದ ಅನುಮೋದನೆ ಪಡೆದ ನಂತರ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುತ್ತದೆ. Fund V ನಲ್ಲಿರುವ ಮೊಬಲಗನ್ನು ಉಪಯೋಗಿಸಿಕೊಳ್ಳುವುದರಿಂದ ಸರ್ಕಾರವು ಪ್ರಸ್ತಾವನೆಯನ್ನು ತಿರಸ್ಕರಿಸಲಾಗುತ್ತದೆ ಎಂದು ತಿಳಿಸಿದರು.

ನಿರ್ಣಯ: ವಿಷಯವನ್ನು ಸಭೆಯಲ್ಲಿ ಚರ್ಚಿಸಿ, ಹಿಂದಿನ ಸಭೆಯ ನಿರ್ಣಯದಲ್ಲಿ ಚಂದ್ರಶೇಖರ ಬಡಾವಣೆಯಲ್ಲಿರುವ ಸಿ.ಎ. ನಿವೇಶನವನ್ನು ಕಛೇರಿ ಕಟ್ಟಡಕ್ಕಾಗಿ ಕಾಯ್ದಿರಿಸಿದ್ದನ್ನು ರದ್ದುಪಡಿಸಿ, ಬೈಚನಹಳ್ಳಿ ಗ್ರಾಮದಲ್ಲಿ ಐ.ಡಿ.ಎಸ್.ಎಂ.ಟಿ ಯೋಜನೆಯಲ್ಲಿ ರಚಿಸಲಾದ ಗುಂಡುರಾವ್ ಬಡಾವಣೆಯಲ್ಲಿರುವ 1081.713 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸಲು ಕಾಯ್ದಿರಿಸಲು ಮತ್ತು ಕಛೇರಿ ಕಟ್ಟಡ ನಿರ್ಮಾಣಕ್ಕೆ Fund I ರಲ್ಲಿರುವ ಮೊಬಲಗನ್ನು ಹಾಗೂ Fund V ನಲ್ಲಿರುವ ಮೊಬಲಗನ್ನು ಉಪಯೋಗಿಸಿಕೊಳ್ಳಬೇಕೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(04): ಮಾನ್ಯ ಘನ ಉಚ್ಚನ್ಯಾಯಾಲಯದ W.P.No. 8641/2024 ರ ಪ್ರಕರಣಕ್ಕೆ ಸಂಬಂಧಿಸಿದಂತೆ ವಕಾಲತ್ತು ವಹಿಸಲು ಪ್ರಾಧಿಕಾರದಿಂದ ವಕೀಲರನ್ನು ನೇಮಕ ಮಾಡಿದ್ದು, ಘಟನ್ನೋತ್ತರ ಮಂಜೂರಾತಿಗಾಗಿ ಸಭೆಗೆ ಮಂಡಿಸಿರುವ ಬಗ್ಗೆ.

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಕುಶಾಲನಗರ ಪರುಸಭೆ ವ್ಯಾಪ್ತಿಯ ಸ.ನಂ. 107, 108, 103, 103/1, 103/2, 103/3 ರಲ್ಲಿನ ಚಿಕ್ಕಣ್ಣ ಬಡಾವಣೆ ನಿವೇಶನ ಸಂಖ್ಯೆ: 12,13,14,15 ರಲ್ಲಿ ವಾಣಿಜ್ಯ ಕಟ್ಟಡ (Auto LPG Dispensing Service Station) ನಿರ್ಮಿಸಲು ಅನುಮತಿಗೆ ಸಂಬಂಧಿಸಿದಂತೆ Thenpandiyan LPG Import Terminal Pvt. Ltd, ಹಾಗೂ ಇತರರು ಮಾನ್ಯ ಘನ ಉಚ್ಚನ್ಯಾಯಾಲಯದಲ್ಲಿ W.P.No. 8641/2024 ರಲ್ಲಿ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಕರ್ನಾಟಕ ಸರ್ಕಾರ, ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಮತ್ತು ಕುಶಾಲನಗರ ಯೋಜನಾ ಪ್ರಾಧಿಕಾರವನ್ನು ಪ್ರತಿವಾದಿಗಳನ್ನಾಗಿಸಿರುತ್ತಾರೆ.

ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಹಾಗೂ ಕುಶಾಲನಗರ ಯೋಜನಾ ಪ್ರಾಧಿಕಾರದ ಪರವಾಗಿ ವಕೀಲರಾದ ಶ್ರೀ ಯೋಗೇಶ್ ಡಿ ನಾಯಕ್ ಇವರಿಗೆ ವಕಾಲತ್ತನ್ನು ವಹಿಸಲಾಗಿರುತ್ತದೆ. ಶ್ರೀ ಯೋಗೇಶ್ ಡಿ ನಾಯಕ್, ವಕೀಲರು ಇವರು ಕುಶಾಲನಗರ ಯೋಜನಾ ಪ್ರಾಧಿಕಾರದ ಪರವಾಗಿ ವಕಾಲತ್ತು ವಹಿಸಲು ಶ್ರೀ ಸುಬ್ರಮಣ್ಯ ಇವರನ್ನು ನೇಮಿಸಲು ದೂರವಾಣಿ ಮೂಲಕ ಸಲಹೆ ನೀಡಿರುತ್ತಾರೆ. ಆದ್ದರಿಂದ ಕುಶಾಲನಗರ ಯೋಜನಾ ಪ್ರಾಧಿಕಾರದ ಪರವಾಗಿ ವಕಾಲತ್ತು ವಹಿಸಲು ವಕೀಲರಾದ ಶ್ರೀ ಸುಬ್ರಮಣ್ಯ ಇವರನ್ನು ನೇಮಿಸಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಪ್ರಾಧಿಕಾರದ ಹಿಂದಿನ ಅಧ್ಯಕ್ಷರಾದ ಮಾನ್ಯ ಉಪವಿಭಾಗಾಧಿಕಾರಿಗಳು, ಮಡಿಕೇರಿ ಇವರನ್ನು ಕೋರಿದ್ದು, ಸದರಿಯವರು ದಿನಾಂಕ: 31–05–2024 ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತಾರೆ. ಅದರಂತೆ W.P.No. 8641/2024 ರ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಶಾಲನಗರ ಯೋಜನಾ ಪ್ರಾಧಿಕಾರದ ಪರವಾಗಿ ವಕಾಲತ್ತು ವಹಿಸಿ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ವಕೀಲರಾದ ಶ್ರೀ ಸುಬ್ರಮಣ್ಯ ಇವರನ್ನು ದಿನಾಂಕ: 04–06–2024 ರಂದು ಕೋರಲಾಗಿದ್ದು, ಮಾಹಿತಿಯನ್ನು ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಲಾಗಿದೆ. ಸದರಿ ವಿಷಯವನ್ನು ಘಟನ್ನೋತ್ತರ ಮಂಜೂರಾತಿಗಾಗಿ ಸಭೆಗೆ ಮಂಡಿಸಿದೆ.

ನಿರ್ಣಯ: ವಿಷಯವನ್ನು ಸಭೆಯಲ್ಲಿ ಚರ್ಚಿಸಿ, ಮಾನ್ಯ ಉಚ್ಚನ್ಯಾಯಾಲಯದ W.P.No. 8641/2024 ರ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಶಾಲನಗರ ಯೋಜನಾ ಪ್ರಾಧಿಕಾರದ ಪರವಾಗಿ ವಕಾಲತ್ತು ವಹಿಸಲು ವಕೀಲರಾದ ಶ್ರೀ ಸುಬ್ರಮಣ್ಯ ಇವರನ್ನು ನೇಮಿಸಿರುವುದಕ್ಕೆ ಸಭೆಯಲ್ಲಿ ಘಟನ್ನೋತ್ತರ ಮಂಜೂರಾತಿ ನೀಡಲಾಯಿತು ಹಾಗೂ ವಕೀಲರ ವೆಚ್ಚವನ್ನು ಪ್ರಾಧಿಕಾರದಿಂದ ಪಾವತಿಸಲು ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(05): ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿಗೆ ಒಂದು ಬಯೋಮೆಟ್ರಿಕ್ ಸಾಧನ ಮತ್ತು ಸಿ.ಸಿ. ಕ್ಯಾಮರ ಅಳವಡಿಸಲಾಗಿದ್ದು, ಘಟನ್ನೋತ್ತರ ಮಂಜೂರಾತಿಗಾಗಿ ಸಭೆಗೆ ಮಂಡಿಸಿರುವ ಬಗ್ಗೆ.

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿಯಲ್ಲಿ ಸದಸ್ಯಕಾರ್ಯದರ್ಶಿಯವರ ಹಾಜರಾತಿಯನ್ನು ನಮೂದಿಸಲು ಬಯೋಮೆಟ್ರಿಕ್ ಸಾಧನವು ಅವಶ್ಯಕವಾಗಿರುತ್ತದೆ ಮತ್ತು ಪ್ರಾಧಿಕಾರದ ಕಛೇರಿಗೆ ಸಿ.ಸಿ. ಕ್ಯಾಮರವನ್ನು ಅಳವಡಿಸಿಕೊಳ್ಳಬೇಕಾಗಿರುತ್ತದೆ. ಆದ್ದರಿಂದ ಈ ಎರಡು ಸಾಧನಗಳನ್ನು ದರಪಟ್ಟಿಯ ಮುಖಾಂತರ ಪಡೆಯಲು ಆಡಳಿತಾತ್ಮಕ ಅನುಮೋದನೆ ನೀಡುವಂತೆ ಪ್ರಾಧಿಕಾರದ ಅಂದಿನ ಅಧ್ಯಕ್ಷರಾದ ಮಾನ್ಯ ಉಪವಿಭಾಗಾಧಿಕಾರಿಗಳು, ಮಡಿಕೇರಿ ಇವರನ್ನು ಕೋರಿದ್ದು, ಸದರಿಯವರು ದಿನಾಂಕ: 10–06–2024 ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಿರುತ್ತಾರೆ. ಅದರಂತೆ ದಿನಾಂಕ:12–06–2024 ರಂದು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಣೆಯನ್ನು ನೀಡಿ ದಿನಾಂಕ: 14–06–2024 ರಿಂದ 28–06–2024 ರವರೆಗೆ ಆಸಕ್ತಿಯುಳ್ಳ ಪೂರೈಕೆದಾರರು ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ಈ ಕಛೇಯ ವಿಳಾಸಕ್ಕೆ ಕಳುಹಿಸಿಕೊಡಲು ಕೋರಲಾಗಿದೆ.

ಅದರಂತೆ, ಮೂರು ಸಂಸ್ಥೆಯವರು ದರಪಟ್ಟಿಗಳನ್ನು ಸಲ್ಲಿಸಿದ್ದು, ಅದರ ತುಲನಾತ್ಮಕ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ಸಂಸ್ಥೆಯ ಹೆಸರು	ಸಿ.ಸಿ. ಕ್ಯಾಮೆರಾ ಹಾಗೂ ಬಯೋಮೆಟ್ರಿಕ್ ಸಾಧನಕ್ಕೆ ಸಂಬಂಧಿಸಿದ ವಿವರ	QTY	ನಮೂದಿಸಿದ ದರ	ಒಟ್ಟು ಮೊಬಲಗು ರೂ.
1	BHAIRAVESHWARA ENTERPRISES # 2206, 4th Cross, Kuvempunatar, Mysore ದರಪಟ್ಟಿ ನೀಡಿದ ದಿನಾಂಕ: 25–06–2024	8 CHANNEL DVR	1	4950	4950=00
		CCTV CAMERA	5	1600	8000=00
		4/4 BOX	5	150	750=00
		SMPS	1	1350	1350=00
		HARD DISK	1	2950	2950=00
		CONNECTOR	1	370	370=00
		4 U RACK	1	1950	1950=00
		ELECTRICAL ITEMS AND LABOR		5300	5300=00
		MOUSE AND SPIKE	1	780	780=00
		COPPER WIRE	4	1400	5600=00
		HIKVISION BIOMETRIC THUMB	1	7950	7950=00
		LED DISPLAY 32 TV	1	25800	25800=00
				Total	**65750=00** (+ ತೆರಿಗೆ ಪ್ರತ್ಯೇಕ)
2	HYTECH COMTUTERS No.360, 6th Main, 3rd cross, K.N. Pura Main Road Mysore- 570009 ದರಪಟ್ಟಿ ನೀಡಿದ ದಿನಾಂಕ: 27–06–2024	8 CHANNEL HD DVR WITH HDMI VGA AV OUT	1	4800	4800=00
		HD NITE CCTV CAMERA 2.4 MP HD	5	1500	7500=00
		4/4 BOX WITH COVER	5	100	500=00
		SMPS POWER SUPPLY FOR DVR	1	1200	1200=00
		HARD DISK FOR STORAGE	1	2800	2800=00
		COPPER CONNECTOR	1	350	350=00
		4 U RACK	1	1800	1800=00
		ELECTRICAL CASING, PIPES, GANG BOX,NAILS,SCROOS,BENDS,FLEXIBLE INCLUDING FIXING AND INSTALLATION	1	5000	5000=00
		MOUSE AND SPIKE	1	700	700=00
		COPPER WIRE 3+1	4	1200	4800=00
		HIKVISION BIOMETRIC THUMB	1	7800	7800=00
		LED DISPLAY 32 INCH TV	1	25000	25000=00
				TOTAL	**63250=00**

					(+ ತೆರಿಗೆ ಪ್ರತ್ಯೇಕ)
3	COMPUTECH SOLUTIONS # 144, Shop No. 3, 1st main, Gayatri Puram, Main Road, Mysore-570023 ದರಪಟ್ಟಿ ನೀಡಿದ ದಿನಾಂಕ: 08–06–2024	8 CHANNEL DVR	1	4850	**4850=00**
		HD DAY NITE CCTV CAMERA	5	1550	**7750=00**
		4/4 BOX	5	120	**600=00**
		SMPS POWER SUPPLY	1	1250	**1250=00**
		HARD DISK	1	2900	**2900=00**
		CONNECTORS	1	350	**350=00**
		4 U RACK	1	1900	**1900=00**
		ELECTRICAL CASING, PIPES, GANG BOX,NAILS,SCROOS,BENDS,FLEXIBLE INCLUDING FIXING AND INSTALLATION		5200	**5200=00**
		MOUSE AND SPIKE	1	750	**750=00**
		COPPER WIRE 3+1	4	1300	**5200=00**
		HIKVISION BIOMETRIC THUMB	1	7850	**7850=00**
		LED DISPLAY 32 INCH TV	1	25500	**25500=00**
				TOTAL	**64,100=00** (+ ತೆರಿಗೆ ಪ್ರತ್ಯೇಕ)

ಅದರಲ್ಲಿ ಕ್ರ.ಸಂ.(2) ರಲ್ಲಿ HYTECH COMTUTERS No.360, 6th Main, 3rd cross, K.N. Pura Main Road Mysore-570009 ಸಂಸ್ಥೆಯವರು ಇತರೆ ಸಂಸ್ಥೆಗಳಿಗಿಂತ ಕಡಿಮೆ ದರ (ರೂ.63,250=00+ಜಿ.ಎಸ್.ಟಿ) ನಮೂದಿಸಿರುವುದರಿಂದ ಸದರಿಯವರಿಗೆ ಪ್ರಾಧಿಕಾರದ ಕಛೇರಿಗೆ ಒಂದು ಬಯೋಮೆಟ್ರಿಕ್ ಸಾಧನ ಮತ್ತು ಐದು ಸಿ.ಸಿ. ಕ್ಯಾಮರಗಳನ್ನು ಅಳವಡಿಸಿ, ಅದರ ಬೆಲೆಯ ಮೊಬಲಗನ್ನು ಪಾವತಿಸಲು ಈ ಕಛೇರಿಗೆ ರಸೀತಿಯನ್ನು ಕಳುಹಿಸಿಕೊಡಬೇಕೆಂದು ದಿನಾಂಕ:01–07–2024 ರಂದು ತಿಳಿಸಲಾಗಿದೆ. ಸದರಿ ವಿಷಯವನ್ನು ಘಟನ್ನೋತ್ತರ ಮಂಜೂರಾತಿಗಾಗಿ ಸಭೆಗೆ ಮಂಡಿಸಿದೆ.

ನಿರ್ಣಯ: ವಿಷಯವನ್ನು ಸಭೆಯಲ್ಲಿ ಚರ್ಚಿಸಿ, HYTECH COMTUTERS No.360, 6th Main, 3rd cross, K.N. Pura Main Road Mysore-570009 ಸಂಸ್ಥೆಯವರು ಇತರೆ ಸಂಸ್ಥೆಗಳಿಗಿಂತ ಕಡಿಮೆ ದರ (ರೂ.63,250=00+ಜಿ.ಎಸ್.ಟಿ) ನಮೂದಿಸಿರುವುದರಿಂದ ಸದರಿಯವರಿಗೆ ಪ್ರಾಧಿಕಾರದ ಕಛೇರಿಗೆ ಒಂದು ಬಯೋಮೆಟ್ರಿಕ್ ಸಾಧನ ಮತ್ತು ಐದು ಸಿ.ಸಿ. ಕ್ಯಾಮರಗಳನ್ನು ಅಳವಡಿಸಲು ತಿಳಿಸಿರುವುದಕ್ಕೆ ಘಟನ್ನೋತ್ತರ ಮಂಜೂರಾತಿ ನೀಡಲಾಯಿತು ಹಾಗೂ ಸದರಿ ಮೊಬಲಗನ್ನು ಪಾವತಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(06): ಪ್ರಾಧಿಕಾರದ ಕಛೇರಿಯ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಹೊರಗುತ್ತಿಗೆಯಲ್ಲಿ ನೌಕರರನ್ನು ಪಡೆಯಲು ಸರ್ಕಾರದ ಮಂಜೂರಾತಿಯನ್ನು ಕೋರುವ ಬಗ್ಗೆ.

ಟಿಪ್ಪಣಿ: ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 149 ಮೈಅಪ್ರಾ 2008 ದಿನಾಂಕ: 18–02–2008 ರಲ್ಲಿ ಕುಶಾಲನಗರ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕುಶಾಲನಗರ ಯೋಜನಾ ಪ್ರಾಧಿಕಾರವನ್ನಾಗಿ ರಚಿಸಿ ಆದೇಶವನ್ನು ಹೊರಡಿಸಲಾಗಿದೆ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 149 ಮೈಅಪ್ರಾ 2008 ಬೆಂಗಳೂರು ದಿನಾಂಕ:26–05–2008 ರಲ್ಲಿ ಕುಶಾಲನಗರ ಯೋಜನಾ ಪ್ರಾಧಿಕಾರಕ್ಕೆ ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ. ಆದರೆ ಯೋಜನಾ ಪ್ರಾಧಿಕಾರದ ಕೆಲಸಗಳನ್ನು ನಿರ್ವಹಿಸಲು ಸದಸ್ಯ ಕಾರ್ಯದರ್ಶಿಯ ಹುದ್ದೆಯನ್ನು ಬಿಟ್ಟು ಇಲ್ಲಿಯವರೆಗೆ ಇನ್ನಿತರ ಯಾವುದೇ ಹುದ್ದೆಗಳನ್ನು ಸೃಜಿಸಿರುವುದಿಲ್ಲ. ಪ್ರಾಧಿಕಾರ ಕಛೇರಿಯ ದೈನಂದಿನ ಕೆಲಸಗಳನ್ನು ನಿರ್ವಹಿಸಲು ಹೊರಗುತ್ತಿಗೆಯಲ್ಲಿ ಒಬ್ಬರು ಗ್ರೂಪ್ **"ಡಿ"** ನೌಕರರನ್ನು ಪಡೆಯಲು ಪ್ರಾಧಿಕಾರದ ದಿನಾಂಕ: 15–04–2011 ರಂದು ನಡೆದ ಐದನೇ ಸಭೆಯಲ್ಲಿ, ಒಬ್ಬ ಟೈಪಿಸ್ಟ್ ರನ್ನು ಪಡೆಯಲು ಪ್ರಾಧಿಕಾರದ ದಿನಾಂಕ: 25–04–2012 ರಂದು ನಡೆದ ಎಂಟನೇ ಸಭೆಯಲ್ಲಿ ಮತ್ತು ಕಛೇರಿ ಸಹಾಯಕರನ್ನು ಪಡೆಯಲು ಪ್ರಾಧಿಕಾರದ

ದಿನಾಂಕ: 12–01–2016 ರಂದು ನಡೆದ 25ನೇ ಸಭೆಯಲ್ಲಿ ನಿರ್ಣಯಿಸಿ, ಅದರಂತೆ ಸದರಿ ಸೇವೆಗಳನ್ನು ಪಡೆದು ಪ್ರಾಧಿಕಾರದ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.

ಹಿಂದಿನ ಪ್ರಾಧಿಕಾರದ ಸಭೆಯ ನಿರ್ಣಯಗಳಂತೆ, ದಿನಾಂಕ: 27–04–2015 ಮತ್ತು 08–10–2015 ರಂದು ಸರ್ಕಾರಕ್ಕೆ ಪತ್ರ ಬರೆದು ಅವಶ್ಯವಿರುವ ಹುದ್ದೆಗಳಿಗೆ ಮಂಜೂರಾತಿ ನೀಡುವಂತೆ ಕೋರಲಾಗಿದೆ ಮತ್ತು ದಿನಾಂಕ: 26–02–2016 ರಲ್ಲಿ ಮತ್ತೊಮ್ಮೆ ಪತ್ರ ಬರೆದು ಕಛೇರಿ ಸಹಾಯಕ, ಟೈಪಿಸ್ಟ್, ಅಟೆಂಡರ್(ಜವಾನ) ಸೇವೆಯನ್ನು ಹೊರಗುತ್ತಿಗೆಯಿಂದ ಪಡೆಯುತ್ತಿದ್ದು, ಅದನ್ನೇ ಮುಂದುವರೆಸಿದಲ್ಲಿ ಪ್ರಾಧಿಕಾರಕ್ಕೆ ಹೆಚ್ಚಿನ ಆರ್ಥಿಕ ಹೊರೆ ಬರುವುದಿಲ್ಲ. ಆದ್ದರಿಂದ ಸದರಿ ಸೇವೆಗಳನ್ನು ಹೊರಗುತ್ತಿಗೆಯಲ್ಲಿ ಪಡೆದಿರುವುದಕ್ಕೆ ಘಟನ್ನೋತ್ತರ ಮಂಜೂರಾತಿಯನ್ನು ನೀಡಬೇಕೆಂದು ಕೋರಲಾಗಿದೆ. ಅಲ್ಲದೆ, ದಿನಾಂಕ:14–06–2019 ರಂದು ಸರ್ಕಾರಕ್ಕೆ ಮತ್ತೊಮ್ಮೆ ಪತ್ರ ಬರೆದು ವಿವರಣೆಯನ್ನು ನೀಡಲಾಗಿದೆ.

ಸದರಿ ವಿಷಯದ ಬಗ್ಗೆ ಮತ್ತೊಮ್ಮೆ ದಿನಾಂಕ:05–02–2021 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿದ್ದು, ಸಭೆಯ ನಿರ್ಣಯದಂತೆ ದಿನಾಂಕ: 18–02–2021 ರಂದು ಸರ್ಕಾರಕ್ಕೆ ಪತ್ರ ಬರೆದು ಮೂರು ಹುದ್ದೆಗಳನ್ನು ಪ್ರಾಧಿಕಾರಕ್ಕೆ ಸೃಜಿಸಿಕೊಡುವಂತೆ ಹಾಗೂ ಅಲ್ಲಿಯವರೆಗೆ ಈಗ ಕಾರ್ಯನಿರ್ವಹಿಸುತ್ತಿರುವ ಖಾಸಗಿ ಸಂಸ್ಥೆಯಿಂದ ಪಡೆದ ಹೊರಗುತ್ತಿಗೆ ನೌಕರರ ಸೇವೆಗಳನ್ನು ಮುಂದುವರೆಸಿದ ಬಗ್ಗೆ ಘಟನ್ನೋತ್ತರ ಮಂಜೂರಾತಿ ನೀಡಬೇಕೆಂದು ವಿನಂತಿಸಲಾಗಿದೆ.

ಸರ್ಕಾರದ ಕಾರ್ಯದರ್ಶಿಗಳು ದಿನಾಂಕ:15–03–2023 ರ ಪತ್ರದಲ್ಲಿ ಸರ್ಕಾರದಿಂದ ಅನುಮೋದನೆ ಪಡೆಯದೆ ಸೃಜಿಸಲಾಗಿರುವ ಹುದ್ದೆಗಳ ವಿವರ ಹಾಗೂ ಸದರಿ ಹುದ್ದೆಗಳನ್ನು ಮುಂದುವರೆಸಿರುವ ಬಗ್ಗೆ ವಿವರ ಒದಗಿಸುವಂತೆ ತಿಳಿಸಿರುತ್ತಾರೆ. ಅದರಂತೆ ಪ್ರಾಧಿಕಾರದಿಂದ ದಿನಾಂಕ: 28–04–2023 ರಂದು ಮತ್ತೊಮ್ಮೆ ವಿವರಗಳನ್ನು ಸಲ್ಲಿಸಲಾಗಿದೆ. ಸರ್ಕಾರದ ಕಾರ್ಯದರ್ಶಿಗಳು ದಿನಾಂಕ:11–09–2023ರ ಪತ್ರದಲ್ಲಿ **"ರಾಜ್ಯದ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳಿಗೆ ಅನ್ವಯಿಸುವಂತೆ ಪ್ರಮಾಣಿತ ಸಿಬ್ಬಂದಿ ಮಾದರಿ (Standard Staffing Pattern) ರನ್ವಯ ಹುದ್ದೆಗಳನ್ನು ಗುರುತಿಸಿ, ಏಕರೂಪ ವೃಂದ ಮತ್ತು ನೇಮಕಾತಿ ವಿಧಾನವನ್ನು ಅಳವಡಿಸಿಕೊಳ್ಳುವ ಕುರಿತು ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿರುತ್ತದೆ. ಆದುದರಿಂದ ರಾಜ್ಯದ ಎಲ್ಲಾ ನಗರ ಯೋಜನಾ ಪ್ರಾಧಿಕಾರಗಳಿಗೆ ಅನ್ವಯಿಸುವಂತೆ ಏಕರೂಪ ವೃಂದ ಮತ್ತು ನೇಮಕಾತಿ ವಿಧಾನವನ್ನು ಅಳವಡಿಸಿಕೊಂಡ ನಂತರ ಪ್ರಸ್ತಾವನೆಯನ್ನು ಸಲ್ಲಿಸುವಂತೆ ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ"** ಎಂದು ತಿಳಿಸಿರುತ್ತಾರೆ.

ಸದಸ್ಯಕಾರ್ಯದರ್ಶಿ ಅಭಿಪ್ರಾಯ: ಟಿಪ್ಪಣಿಯಲ್ಲಿ ವಿವರಿಸಿರುವಂತೆ ಯೋಜನಾ ಪ್ರಾಧಿಕಾರದ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಖಾಸಗಿ ಸಂಸ್ಥೆಯಿಂದ ದರಪಟ್ಟಿಯ ಮೂಲಕ ಕಂಪ್ಯೂಟರ್ ಆಪರೇಟರ್, ಕಛೇರಿ ಸಹಾಯಕರು ಮತ್ತು 'ಡಿ' ದರ್ಜೆ ನೌಕರರನ್ನು ಪಡೆಯಲಾಗಿದ್ದು, ಸದರಿ ನೌಕರರ ಅವಧಿಯು 30–04–2024 ರಂದು ಮುಕ್ತಾಯಗೊಂಡಿರುತ್ತದೆ. ಲೋಕಸಭಾ ಚುನಾವಣೆ 2024ರ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಈ ಹಂತದಲ್ಲಿ ಹೊಸದಾಗಿ ದರಪಟ್ಟಿಯನ್ನು ಪಡೆಯಲು ಅವಕಾಶವಿಲ್ಲದಿರುವುದರಿಂದ ಕಂಪ್ಯೂಟರ್ ಆಪರೇಟರ್ ಮತ್ತು 'ಡಿ' ದರ್ಜೆ ಇಬ್ಬರು ಸಿಬ್ಬಂದಿಗಳನ್ನು ಮಾತ್ರ ಹೊರಗುತ್ತಿಗೆ ಸೇವೆಯಲ್ಲಿ ದಿನಾಂಕ: 30–06–2024 ರವರೆಗೆ ಮುಂದುವರೆಸಲಾಗಿದೆ. ದಿನಾಂಕ:01–07–2024 ರಿಂದ ಹೊಸದಾಗಿ ಹೊರಗುತ್ತಿಗೆಯಲ್ಲಿ ಸಿಬ್ಬಂದಿಗಳನ್ನು ಪಡೆಯಬೇಕಾಗಿರುತ್ತದೆ.

ಆದ್ದರಿಂದ ಕಾರ್ಮಿಕ ಇಲಾಖೆಯು ನಿಗಧಿಪಡಿಸಿರುವ ಕನಿಷ್ಠ ವೇತನ ಹಾಗೂ ಇಪಿಎಫ್ ಮತ್ತು ಇಎಸ್ಐ ಸೌಲಭ್ಯವನ್ನು ನೀಡಲು, ಕೆ.ಟಿ.ಪಿ.ಪಿ ಕಾಯ್ದೆ 1999ರ ಸೆಕ್ಷನ್ 4–ಇ(i) ರನ್ವಯ ಒಟ್ಟು ಮೂರು ಸಿಬ್ಬಂದಿಗಳನ್ನು ಪಡೆಯಲು ವಾರ್ಷಿಕ ರೂ. 5 ಲಕ್ಷ ರೂಪಾಯಿಗಳು ಮೀರುವುದರಿಂದ, ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಇ–ಟೆಂಡರ್ ನಲ್ಲಿ ಮಾನವಸಂಪನ್ಮೂಲ ಏಜೆನ್ಸಿಯ ಮುಖಾಂತರ ಹೊರಗುತ್ತಿಗೆಯಲ್ಲಿ ಕಂಪ್ಯೂಟರ್ ಆಪರೇಟರ್, ಕಛೇರಿ ಸಹಾಯಕರು ಮತ್ತು 'ಡಿ' ದರ್ಜೆ ನೌಕರರು ಒಟ್ಟು ಮೂರು ಸಿಬ್ಬಂದಿಗಳನ್ನು ಪಡೆಯಲು ಮಾನ್ಯ ಅಧ್ಯಕ್ಷರು/ಉಪವಿಭಾಗಾಧಿಕಾರಿಗಳು, ಕುಶಾಲನಗರ ಯೋಜನಾ ಪ್ರಾಧಿಕಾರ ಇವರಿಂದ ದಿನಾಂಕ: 10–06–2024 ರಂದು ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲಾಗಿದ್ದು, ಅದರಂತೆ, ಇ–ಟೆಂಡರ್ ಪ್ರಕಟಣೆಯನ್ನು ದಿನಾಂಕ:20–06–2024 ರಂದು www.kppp.karnataka.gov.in ಇ ಪೋರ್ಟಲ್‌ನಲ್ಲಿ ಮೂರು ಜನ ನೌಕರರನ್ನು ಪಡೆಯಲು ಇ–ಟೆಂಡರ್ ಕರೆಯಲಾಗಿತ್ತು. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ: ನಅಇ 41 ಬೆಮಪ್ರಾ 2017 ದಿನಾಂಕ:13–06–2019 ರನ್ವಯ ರಾಜ್ಯದ ಎಲ್ಲಾ ನಗರ

ಯೋಜನಾ ಪ್ರಾಧಿಕಾರಗಳಿಗೆ ಅನ್ವಯವಾಗುವಂತೆ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಟೆಂಡರ್ ಪರಿಶೀಲಿಸುವ ಪ್ರಾಧಿಕಾರ, ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಹಾಗೂ ಮೇಲ್ಮನವಿ ಪ್ರಾಧಿಕಾರಗಳನ್ನು ನೇಮಕ ಮಾಡಿ ಆದೇಶಿಸಲಾಗಿದ್ದು, ಆಯಾ ಜಿಲ್ಲೆಯ ನಗರಾಭಿವೃದ್ಧಿ ಕೋಶದ ಕಾರ್ಯಪಾಲಕ ಅಭಿಯಂತರರನ್ನು Tender Scrutinizing Committee ಅಧ್ಯಕ್ಷರನ್ನಾಗಿ ಮತ್ತು ಸಂಬಂಧಿಸಿದ ಜಿಲ್ಲಾ ಕಛೇರಿಯ ಸಹಾಯಕ ನಿರ್ದೇಶಕರನ್ನು ಸದಸ್ಯರನ್ನಾಗಿ ನೇಮಕ ಮಾಡಿ ಆದೇಶಿಸಲಾಗಿದ್ದು, ಸದರಿ ಸದಸ್ಯರುಗಳು ಸರ್ಕಾರದಿಂದ ಹುದ್ದೆ ಮಂಜೂರಾಗದೇ ಟೆಂಡರ್ ಪ್ರಕ್ರಿಯೆಯನ್ನು ಮಾಡುವುದು ಸರಿಯಾದ ಕ್ರಮವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ ಮತ್ತು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಮಡಿಕೇರಿ ಇವರು ಪ್ರಾಧಿಕಾರದ ಲೆಕ್ಕ ಪರಿಶೋಧನಾ ವರದಿಯಲ್ಲಿ ಸದಸ್ಯಕಾರ್ಯದರ್ಶಿಯ ಹುದ್ದೆಯನ್ನು ಮಾತ್ರ ಖಾಯಂ ಹುದ್ದೆಗೆ ನೇಮಕ ಮಾಡಲಾಗಿದ್ದು, ಉಳಿದ ಹುದ್ದೆಗಳು ತಾತ್ಕಾಲಿಕವಾಗಿದ್ದು ಪ್ರತಿ ವರ್ಷಕ್ಕೊಮ್ಮೆ ಮುಂದುವರಿಕೆ ಆದೇಶ ಪಡೆಯಬೇಕಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಅದರಂತೆ ಮತ್ತು ಸರ್ಕಾರದ ಸುತ್ತೋಲೆಯನ್ನು ಪರಿಗಣಿಸಿ ಇ–ಟೆಂಡರ್ ಪ್ರಕಟಣೆಯನ್ನು ರದ್ದುಪಡಿಸಲಾಗಿದೆ. ನಂತರ ಕಂಪ್ಯೂಟರ್ ಆಪರೇಟರ್ ಮತ್ತು 'ಡಿ' ದರ್ಜೆ ಇಬ್ಬರು ಸಿಬ್ಬಂದಿಗಳನ್ನು ಹೊರಗುತ್ತಿಗೆ ಸೇವೆಯಲ್ಲಿ ದಿನಾಂಕ: 30–12–2024 ರವರೆಗೆ ಮುಂದುವರೆಸಲಾಗಿದೆ.

ಆದ್ದರಿಂದ ಪ್ರಾಧಿಕಾರದ ದೈನಂದಿನ ಕೆಲಸ ಕಾರ್ಯಗಳಿಗೆ ಒಬ್ಬರು ಕಛೇರಿ ಸಹಾಯಕರು, ಒಬ್ಬರು ಟೈಪಿಸ್ಟ್ ಮತ್ತು ಒಬ್ಬರು 'ಡಿ' ದರ್ಜೆ ನೌಕರರು ಅತ್ಯಗತ್ಯವಾಗಿದ್ದು, ಮೂರು ಜನ ಸಿಬ್ಬಂದಿಗಳನ್ನು ಹೊರಗುತ್ತಿಗೆಯಲ್ಲಿ ಪಡೆಯಲು ಸರ್ಕಾರದಿಂದ ತಾತ್ಕಾಲಿಕ ಮಂಜೂರಾತಿಯನ್ನು ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬಹುದಾಗಿದ್ದು, ವಿಷಯವನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ವಿಷಯವನ್ನು ಸಭೆಯಲ್ಲಿ ಚರ್ಚಿಸಿ, ಪ್ರಾಧಿಕಾರದ ದೈನಂದಿನ ಕೆಲಸ ಕಾರ್ಯಗಳಿಗೆ ಒಬ್ಬರು ಕಛೇರಿ ಸಹಾಯಕರು, ಒಬ್ಬರು ಟೈಪಿಸ್ಟ್ ಮತ್ತು ಒಬ್ಬರು 'ಡಿ' ದರ್ಜೆ ನೌಕರ ಒಟ್ಟು ಮೂರು ಜನ ಸಿಬ್ಬಂದಿಗಳನ್ನು ಹೊರಗುತ್ತಿಗೆಯಲ್ಲಿ ಪಡೆಯಲು ಸರ್ಕಾರದಿಂದ ತಾತ್ಕಾಲಿಕ ಮಂಜೂರಾತಿಯನ್ನು ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಭೆಯಲ್ಲಿ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(07): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 21/35 ರಲ್ಲಿ 1.17 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ **(ಅರ್ಜಿದಾರರು:–ಶ್ರೀ ಪಿ.ಎಂ. ಮೋಹನ್ ಬಿನ್ ಪಿ.ಬಿ. ಮುದ್ದಪ್ಪ)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಮುಳ್ಳುಸೋಗೆ ಗ್ರಾಮದ ಸ.ನಂ. 21/35 ರಲ್ಲಿ 1.17 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 485971 ದಿನಾಂಕ: 29–11–2023 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ. ನಂತರ ಚೆಕ್ಕುಬಂದಿ ತಿದ್ದುಪಡಿ ಮಾಡಿ ದಿನಾಂಕ:23–04–2024 ರಂದು ತಿದ್ದುಪಡಿ ಆದೇಶವನ್ನು ಹೊರಡಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸದರಿ ಜಮೀನು ಉತ್ತರ ದಿಕ್ಕಿನಲ್ಲಿ 9.0ಮೀ ಅಗಲದ ರಸ್ತೆಯಿಂದ ಸಂಪರ್ಕಹೊಂದಿದ್ದು, ಮಹಾಯೋಜನೆಯಲ್ಲಿ 12.0ಮೀ ಅಗಲೀಕರಣಕ್ಕೆ ಪ್ರಸ್ತಾವಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ನಮೂನೆ 11(ಇ) ನಕ್ಷೆ, ಉತಾರು ನಕ್ಷೆ, ಕ್ರಯಪತ್ರ, ಇ.ಸಿ. ಪ್ರತಿ, ಮ್ಯುಟೇಷನ್ ಪ್ರತಿಗಳು ಅಫಿಡೆವಿಟ್, ಆಧಾರ್ ಕಾರ್ಡ್, ದಾಖಲಾತಿಗಳನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಸದರಿ ಜಮೀನಿನ ಸ್ಥಳಪರೀಲನೆಯನ್ನು ಮಾಡಲಾಗಿದೆ. ಪ್ರಶ್ನಿತ ಜಮೀನು ಅನುಮೋದಿತ ಮಹಾಯೋಜನೆಯಂತೆ ವಸತಿ ವಲಯದಲ್ಲಿದ್ದು, ಸದರಿ ಜಮೀನು ಉತ್ತರ ದಿಕ್ಕಿನಲ್ಲಿ 9.0ಮೀ ಅಗಲದ

ರಸ್ತೆಯಿಂದ ಸಂಪರ್ಕಹೊಂದಿದ್ದು, ಮಹಾಯೋಜನೆಯಲ್ಲಿ 12.0ಮೀ ಅಗಲೀಕರಣಕ್ಕೆ ಪ್ರಸ್ತಾವಿಸಲಾಗಿದೆ. ಪ್ರಶ್ನಿತ ಜಮೀನಿನ ದಕ್ಷಿಣ ದಿಕ್ಕಿನಲ್ಲಿ ಕೆರೆ ಇದ್ದು ಮಹಾಯೋಜನೆಯಂತೆ 30.0ಮೀ ಅಗಲದ ಬಫರ್ ಕಾಯ್ದಿರಿಸಲಾಗಿದೆ. ಅರ್ಜಿದಾರರು ಸಲ್ಲಿಸಿರುವ MRT50 ಯಲ್ಲಿ ಆಧಾರ/ಭೋಗ್ಯ ಪಡೆದವರು ಸದರಿ ಜಮೀನಿನ ಮಾಲೀಕರಾದ ಪಿ.ಎಂ. ಮೋಹನ್ ರಾವಾಗಿದ್ದು, ಸ್ವಾಧೀನತೆ ರೀಯ ಸ್ಥಿತಿಯಲ್ಲಿ **"ಬಿಡುಗಡೆ"** ಎಂದು ನಮೂದಾಗಿರುತ್ತದೆ. ಸಲ್ಲಿಸಿರುವ ನಮೂನೆ–15 ರಲ್ಲಿ ದಿನಾಂಕ: 12–03–2014 ರಂದು ಪ್ರಾ.ಕೃ.ಪ.ಸ.ಸಂಘ ನಿ.ಕುಶಾಲನಗರ ಇವರೊಂದಿಗೆ SMP 102497 2013-14 ರನ್ವಯ **"Cancellation Deed"** ಅನ್ನು ಪಡೆದು ಆಧಾರ ಮುಕ್ತರಾಗಿರುತ್ತಾರೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ಏಕವಿನ್ಯಾಸದಲ್ಲಿ ಸುತ್ತಳತೆ ಹಾಗೂ ಎಲ್ಲೆಯನ್ನು ನಿಗಧಿಪಡಿಸಿ, 30.0ಮೀ ಅಗಲದ ಬಫರ್ ಜಾಗವನ್ನು ಕಾಯ್ದಿರಿಸಿ ಅರ್ಜಿದಾರರು ಏಕ–ವಿನ್ಯಾಸ ನಕ್ಷೆಯನ್ನು ಸಲ್ಲಿಸಿರುತ್ತಾರೆ.

ಏಕ–ವಿನ್ಯಾಸ ನಕ್ಷೆಯಲ್ಲಿ ಈ ಕೆಳಕಂಡಂತೆ ಭೂಉಪಯೋಗಗಳನ್ನು ನಿಗಧಿಪಡಿಸಲಾಗಿದೆ.

ಭೂಉಪಯೋಗ ವಿಶ್ಲೇಷಣೆ			
ಕ್ರ. ಸಂ	**ಭೂಉಪಯೋಗ**	**ವಿಸ್ತೀರ್ಣ (ಚ.ಮೀ ಗಳಲ್ಲಿ)**	**ಶೇಕಡ (%)**
1	ವಸತಿಗಾಗಿ	2943.56	57.19
2	ಖರಾಬು ಭೂಮಿ	173.48	3.01
3	ಬಫರ್ ವಲಯ	2520.17	43.75
4	ರಸ್ತೆಗಾಗಿ	123.14	2.14
5	ಹೆಚ್ಚುವರಿ ಭೂಮಿ	901.38	
	ಒಟ್ಟು	5760.35	100.00

ಸಲ್ಲಿಸಿರುವ ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿ ನೀಡಿರುವ ಸರ್ವೆ ನಕ್ಷೆಯಂತೆ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ಸದರಿ ಜಮೀನಿನ ಒಟ್ಟಾರೆ ವಿಸ್ತೀರ್ಣಕ್ಕಿಂತ ಹೆಚ್ಚುವರಿ 0.22 ಎಕರೆಯನ್ನು ಒಳಗೊಂಡಂತೆ ಸರ್ವೆ ನಕಾಶೆಯನ್ನು ಸಿದ್ಧಪಡಿಸಿರುತ್ತಾರೆ. ಈ ಹೆಚ್ಚುವರಿ ವಿಸ್ತೀರ್ಣಕ್ಕೆ ಯಾವುದೇ ದಾಖಲಾತಿಗಳನ್ನು ಅರ್ಜಿದಾರರು ಸಲ್ಲಿಸಿರುವುದಿಲ್ಲ. ಆದ್ದರಿಂದ ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸುವುದು ಸೂಕ್ತವಾಗಿರುತ್ತದೆ. ವಿಷಯವನ್ನು ಸಭೆಗೆ ಮಂಡಿಸಿದೆ

ಸಭೆಯಲ್ಲಿ ಚರ್ಚೆ: ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಯಿತು. ಅಧ್ಯಕ್ಷರು ಮಾತನಾಡಿ ಸದರಿ ಜಮೀನಿನ ಮಾಲೀಕರ ಮಾಲೀಕತ್ವದಲ್ಲಿರುವ ವಿಸ್ತೀರ್ಣಕ್ಕೆ ಮಾತ್ರ ಅನುಮೋದನೆ ನೀಡಬೇಕೆಂದು ಸದಸ್ಯಕಾರ್ಯದರ್ಶಿಗಳಿಗೆ ತಿಳಿಸಿದರು. ಆಗ ಸದಸ್ಯಕಾರ್ಯದರ್ಶಿಗಳು ಅರ್ಜಿದಾರರ ಮಾಲೀಕತ್ವದಲ್ಲಿರುವ ವಿಸ್ತೀರ್ಣಕ್ಕೆ ಅನುಗುಣವಾಗಿ ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿ ನೀಡಿರುವ ಸರ್ವೆ ನಕ್ಷೆಯನ್ನು ಸಲ್ಲಿಸಿರುವ ದಾಖಲಾತಿಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಸರಿಪಡಿಸಿಕೊಂಡು, ಅದರಂತೆ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿ ಸಲ್ಲಿಸಿದ್ದಲ್ಲಿ, ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಅನುಮೋದನೆಯನ್ನು ನೀಡಬಹುದೆಂದು ತಿಳಿಸಿದರು. ಆದ್ದರಿಂದ ಅಧ್ಯಕ್ಷರು ಹಾಗೂ ಸದಸ್ಯಕಾರ್ಯದರ್ಶಿಗಳ ನಿರ್ಧಾರವನ್ನು ಎಲ್ಲಾ ಸದಸ್ಯರುಗಳು ಒಪ್ಪಿದರು.

ನಿರ್ಣಯ: ವಿಷಯವನ್ನು ಸಭೆಯಲ್ಲಿ ಚರ್ಚಿಸಿದಂತೆ, ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿ ನೀಡಿರುವ ಸರ್ವೆ ನಕ್ಷೆಯನ್ನು ಪ್ರಸ್ತಾಪಿತ ವಿಸ್ತೀರ್ಣಕ್ಕೆ ಅನುಗುಣವಾಗಿ ಹಾಗೂ ಸಲ್ಲಿಸಿರುವ ದಾಖಲಾತಿಗಳ ವಿಸ್ತೀರ್ಣಕ್ಕೆ ಅನುಗುಣವಾಗಿ ಸರಿಪಡಿಸಿಕೊಂಡು, ಅದರಂತೆ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿ ಸಲ್ಲಿಸಿದ್ದಲ್ಲಿ, ಸದರಿ ಪ್ರಸ್ತಾವನೆಯನ್ನು ಪರಿಗಣಿಸಿ ಅನುಮೋದನೆಯನ್ನು ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(08): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 97/3 ರಲ್ಲಿ 2.60 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ **(ಅರ್ಜಿದಾರರು:–ಶ್ರೀ ಮಂಜುನಾಥ್ ಜಿ.ಎ ಮತ್ತು ಹರೀಶ್ ಜಿ.ಎ)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 97/3 ರಲ್ಲಿ 2.60 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: 619998 ದಿನಾಂಕ: 26–03–2024 ರಲ್ಲಿ ಸ.ನಂ. 97/3 ರ 3.39.5 ಎಕರೆ ಪೈಕಿ 2.60 ಎಕರೆ ಜಮೀನನ್ನು ವಸತಿ (ಲೇಔಟ್) ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸದರಿ ಜಮೀನು ದಕ್ಷಿಣ ದಿಕ್ಕಿನಲ್ಲಿ ಮಹಾಯೋಜನೆಯನ್ವಯ ಹಾಲಿ 18.0ಮೀ ಅಗಲದ ಕುಶಾಲನಗರದಿಂದ ಹಾರಂಗಿಗೆ ಹೋಗುವ ರಸ್ತೆಯಿಂದ ಸಂಪರ್ಕಹೊಂದಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಸದರಿ ಜಮೀನಿನ ಕಾಂಟೂರ್ ನಕ್ಷೆ, ಟೋಟಲ್ ಸ್ಟೇಷನ್ ನಕ್ಷೆ, ಸಾಗುವಳಿ ಚೀಟಿ ಕೊಡುವ ಬಗೆಗಿನ ಪ್ರಮಾಣ ಪತ್ರ, ಅಲಿನೇಷನ್ ನಕ್ಷೆ, ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಆಕಾರ್ ಬಂದ್(ಉತಾರು), ಮ್ಯುಟೇಷನ್ ಪ್ರತಿಗಳು, ಇ.ಸಿ. ಪ್ರತಿ, ಇತ್ತೀಚಿನ ಆರ್.ಟಿ.ಸಿ, ಆಧಾರ್ ಪ್ರತಿ, ಗ್ರಾಮನಕ್ಷೆ ದಾಖಲಾತಿಗಳನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಸದರಿ ಜಮೀನಿನ ಸ್ಥಳಪರೀಲನೆಯನ್ನು ಮಾಡಲಾಗಿದೆ. ಪ್ರಶ್ನಿತ ಜಮೀನು ಅನುಮೋದಿತ ಮಹಾಯೋಜನೆಯಂತೆ ವಸತಿ ವಲಯದಲ್ಲಿದ್ದು, ದಕ್ಷಿಣ ದಿಕ್ಕಿನಲ್ಲಿ ಮಹಾಯೋಜನೆಯನ್ವಯ ಹಾಲಿ 18.0ಮೀ ಅಗಲದ ಕುಶಾಲನಗರದಿಂದ ಹಾರಂಗಿಗೆ ಹೋಗುವ ರಸ್ತೆಯಿಂದ ಸಂಪರ್ಕಹೊಂದಿರುತ್ತದೆ. ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಇತ್ತೀಚಿನ ಆರ್.ಟಿ.ಸಿ ಯಂತೆ ಪ್ರಸ್ತಾಪಿತ ಸರ್ವೆ ನಂಬರ್, ಸ.ನಂ.97/1, 97/1ಎ4 ಹಾಗೂ 97/3 ರ ನಂತರ 97/21 ಆಗಿ ಬದಲಾವಣೆಗೊಂಡಿರುತ್ತದೆ. ಅರ್ಜಿದಾರರು ಸದರಿ ಜಮೀನು ಭೂಪರಿವರ್ತನೆಗೊಂಡ ದಿನಾಂಕದ ಮಾರನೇ ದಿನದ ಮ್ಯುಟೇಷನ್ ಪ್ರತಿ (ದಿನಾಂಕ:17–05–2024) MR T 101/23-24 ಸಲ್ಲಿಸಿದ್ದು, ಅದರಲ್ಲಿ ಈಗಿನ ಸರ್ವೆ ನಂಬರಿನ ವಿವರದಲ್ಲಿ ಸ.ನಂ. 97/3 ರಲ್ಲಿ ಒಟ್ಟಾರೆ ವಿಸ್ತೀರ್ಣ 2.69 ಎಕರೆಯಿದ್ದು, ಹೊಸ ಸರ್ವೆ ನಂಬರಿನ ವಿವರದಲ್ಲಿ ಸ.ನಂ. 97/21 ರಲ್ಲಿ 2.60 ಎಕರೆ ಮತ್ತು ಸ.ನಂ. 97/3 ರಲ್ಲಿ 0.09 ಎಕರೆ ಎಂದು ದಾಖಲಾಗಿರುತ್ತದೆ. ಆದರೆ ಹೊಸದಾಗಿ ಸಲ್ಲಿಸಿರುವ ಆರ್.ಟಿ.ಸಿ ಯಲ್ಲಿ (ದಿನಾಂಕ:7–03–2024ರ ಆರ್.ಟಿ.ಸಿ ಯಂತೆ) ಸ.ನಂ. 97/3 ರಲ್ಲಿ ಒಟ್ಟಾರೆ ವಿಸ್ತೀರ್ಣ 2.69 ಎಂದು ನಮೂದಾಗಿರುತ್ತದೆ ಇದನ್ನು ಪರ್ಯಾವೇಕ್ಷಕರು, ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ, ಸೋಮವಾರಪೇಟೆ ತಾಲ್ಲೂಕು ಇವರು ದೃಢೀಕರಿಸಿರುವ ಪಿ.ಟಿ. ಶೀಟ್‌ನ ಪ್ರತಿಯಲ್ಲಿ ಸ.ನಂ. 97/3 ರ I ನೇ ಭಾಗದ ವಿಸ್ತೀರ್ಣ ಹಾಗೂ 97/3 II ನೇ ಭಾಗದ ವಿಸ್ತೀರ್ಣ ಹಾಗೂ ಒಟ್ಟಾರೆ ವಿಸ್ತೀರ್ಣಗಳನ್ನು ಗುರುತು ಮಾಡಿ ತಿದ್ದುಪಡಿ ಮಾಡಿರುವುದು ಕಂಡುಬಂದಿರುತ್ತದೆ.

ಅರ್ಜಿದಾರರು ಸ.ನಂ. 97/3 ಮತ್ತು 97/21 ರ ದಿನಾಂಕ:01–04–2004 ರಿಂದ 15–05–2024 ರವರೆಗಿನ ಇ.ಸಿ. ಪ್ರತಿ (ನಮೂನೆ–15) ಅನ್ನು ಸಲ್ಲಿಸಿದ್ದು, ಸ.ನಂ. 97/3 ರಲ್ಲಿ ವಹಿವಾಟುಗಳು ನಡೆದಿರುವುದು ಕಂಡುಬಂದಿದ್ದು, 97/3 ರ ಒಟ್ಟಾರೆ ವಿಸ್ತೀರ್ಣದಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ, ಅಲ್ಲದೆ, ಈ ವಿಸ್ತೀರ್ಣಗಳಿಗೆ 11ಇ ನಕ್ಷೆ ವಿತರಣೆಗೊಂಡಿರುವುದು ಕಂಡುಬಂದಿರುತ್ತದೆ.

ಆದ್ದರಿಂದ 11ಎ ನಕ್ಷೆಗಳನ್ನು ಹಾಗೂ ಸ.ನಂ. 97/3 ರ ಪಿ.ಟಿ. ಶೀಟ್ ಅನ್ನು ಪರಿಶೀಲಿಸಬೇಕಾಗಿರುವುದರಿಂದ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಸೋಮವಾರಪೇಟೆ ತಾಲ್ಲೂಕು ಇವರಿಗೆ ದಿನಾಂಕ:29–06–2024 ರಂದು ಪತ್ರ ಬರೆದು ಸದರಿ ಸರ್ವೆ ನಂಬರ್‌ಗಳ 11ಇ ನಕ್ಷೆಯನ್ನು ಈ ಕಛೇರಿಯ ಉಪಯೋಗಕ್ಕಾಗಿ ನೀಡಬೇಕೆಂದು ಕೋರಲಾಗಿದೆ. ಅವರಿಂದ ಸದರಿ ಮಾಹಿತಿಗಳು ಇನ್ನೂ ದೊರೆತಿರುವುದಿಲ್ಲ. ಅರ್ಜಿದಾರರು ದಿನಾಂಕ:04–04–2017ರ ಸಾಲ ತೀರುವಳಿ ಪತ್ರದ ಕೇವಲ ಮೊದಲನೇ ಪುಟದ ಪ್ರತಿಯನ್ನು ಮಾತ್ರ ಸಲ್ಲಿಸಿರುತ್ತಾರೆ. ಸದರಿ ದಾಖಲಾತಿಯನ್ನು ಸಲ್ಲಿಸಲು ತಿಳಿಸಲಾಗಿದೆ.

ಕರಡು ವಿನ್ಯಾಸ ನಕ್ಷೆಯಲ್ಲಿ ನಾಗರೀಕ ಸೌಲಭ್ಯಕ್ಕೆ ಸಂಪರ್ಕ ರಸ್ತೆಯು ಕೇವಲ 9.0ಮೀ ಆಗಿದ್ದು, ವಲಯ ನಿಯಮಾವಳಿಯನ್ವಯ ಖಾಸಗಿ ಬಡಾವಣೆಗಳಲ್ಲಿ 9.00 X 15.0 ಮೀಟರ್‌ಗಿಂತ ಮೇಲ್ಪಟ್ಟ

ವಿಸ್ತೀರ್ಣದ ನಿವೇಶನಗಳಿಗೆ ಕನಿಷ್ಟ 12.0ಮೀ ಅಗಲದ ರಸ್ತೆ ಸಂಪರ್ಕವನ್ನು ನೀಡಬೇಕಾಗಿರುತ್ತದೆ. ಸದರಿ ಜಮೀನಿನಲ್ಲಿ ಈಗಾಗಲೇ ಮೂರು ಕಟ್ಟಡಗಳಿದ್ದು, ಭೂಪರಿವರ್ತನೆಯ ಸಮಯದಲ್ಲಿ ದಂಡ ಪಾವತಿಸಿರುತ್ತಾರೆ. ಈ ಮೂರು ಕಟ್ಟಡಗಳ ಪೈಕಿ ಒಂದು ಕಟ್ಟಡವನ್ನು ತೆರವುಗೊಳಿಸದೇ ಸ್ಥಳದಲ್ಲಿ ಉಳಿಸಿಕೊಳ್ಳುವ ಕಾರಣ ಸದರಿ ಕಟ್ಟಡವನ್ನು ವಿನ್ಯಾಸ ನಕ್ಷೆಯಲ್ಲಿ ಗುರುತಿಸುವುದು ಸೂಕ್ತವಾಗಿರುತ್ತದೆ.

ವಲಯ ನಿಯಮಾವಳಿಯನ್ವಯ ಬಹು–ನಿವೇಶನ ವಸತಿ ವಿನ್ಯಾಸ ನಕ್ಷೆಯಲ್ಲಿ ಉದ್ಯಾನವನಕ್ಕಾಗಿ ಕನಿಷ್ಟ ಶೇ. 10% ರಷ್ಟು ಮತ್ತು ನಾಗರೀಕ ಸೌಲಭ್ಯಕ್ಕಾಗಿ ಕನಿಷ್ಟ ಶೇ. 5% ರಷ್ಟು ಭೂಉಪಯೋಗಗಳನ್ನು ನಿಗಧಿಪಡಿಸಬೇಕಾಗಿರುತ್ತದೆ. ಕರಡು ವಿನ್ಯಾಸ ನಕ್ಷೆಯಲ್ಲಿ ಈ ಕೆಳಕಂಡಂತೆ ಭೂಉಪಯೋಗಗಳನ್ನು ನಿಗಧಿಪಡಿಸಲಾಗಿದೆ.

ಭೂಉಪಯೋಗ ವಿಶ್ಲೇಷಣೆ			
ಕ್ರ. ಸಂ	ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ (%)
1	ವಸತಿ	5760.79	54.75
2	ಉದ್ಯಾನವನ ಮತ್ತು ಆಟದ ಮೈದಾನ	1113.55	10.58
3	ನಾಗರೀಕ ಸೌಲಭ್ಯ	526.16	05.00
4	ರಸ್ತೆಗಾಗಿ	3121.28	29.16
	ಒಟ್ಟು	10521.82	100.00

ನಿವೇಶನಗಳ ವಿವರ		
ಕ್ರ. ಸಂ	ನಿವೇಶನದ ಅಳತೆ (ಮೀಟರ್ ಗಳಲ್ಲಿ)	ನಿವೇಶನಗಳ ಸಂಖ್ಯೆ
1	9.14 X 15.24	22
2	9.14 X 12.20	04
3	9.14 ಅನಿಯತ	01
4	ಅನಿಯತ ನಿವೇಶನಗಳು	14
	ಒಟ್ಟು	41

ಭೂದಾಖಲೆಗಳ ಸಹಾಯಕ ನಿರ್ದೇಶಕರು, ಸೋಮವಾರಪೇಟೆ ತಾಲ್ಲೂಕು ಇವರಿಂದ ಸದರಿ ಸರ್ವೆ ನಂಬರ್‌ಗಳ 11ಇ ನಕ್ಷೆಯನ್ನು ಪಡೆದ ನಂತರ ಪರಿಶೀಲಿಸಿ, ಸದರಿ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಬಹುದಾಗಿದ್ದು, ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ನಿರ್ಣಯ: ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ಅರ್ಜಿದಾರರಿಂದ ಸಾಲ ತೀರುವಳಿ ಪತ್ರದ ಪೂರ್ಣ ಪುಟಗಳನ್ನು ಪಡೆದುಕೊಂಡು, ಪರಿಶೀಲಿಸಿಕೊಂಡ ನಂತರ ಒಂದು ಕಟ್ಟಡವನ್ನು ತೆರವುಗೊಳಿಸದೇ ಸ್ಥಳದಲ್ಲಿ ಉಳಿಸಿಕೊಳ್ಳುವ ಕಾರಣ ಸದರಿ ಕಟ್ಟಡವನ್ನು ವಿನ್ಯಾಸ ನಕ್ಷೆಯಲ್ಲಿ ಗುರುತಿಸಿಕೊಂಡು ವಿನ್ಯಾಸ ನಕ್ಷೆಯನ್ನು ಸರಿಪಡಿಸಿಕೊಂಡು ಸಲ್ಲಿಸಿದಲ್ಲಿ, ಸದರಿ ಪ್ರಸ್ತಾವನೆಗೆ ಅನುಮೋದನೆಯನ್ನು ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(09): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 142/1, 139, 143/1ಪಿ2, 143/1ಪಿ1 ರಲ್ಲಿನ ಒಟ್ಟು 4.99 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ **(ಅರ್ಜಿದಾರರು;– ಟಿ.ಟಿ. ಅಬ್ದುಲ್ ರಫೀಕ್, ಕೆ. ಮೊಹಮ್ಮದ್ ಹಾಜಿ ಮತ್ತು ಇತರರು)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಪ್ರಶ್ನಿತ ಸ್ಥಳದಲ್ಲಿ ವಾಣಿಜ್ಯ ವಿನ್ಯಾಸ ನಕ್ಷೆ ಪ್ರಕಾರ ಅಭಿವೃದ್ಧಿಗೊಳಿಸಿದ್ದು, ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ತಿದ್ದುಪಡಿ ಆದೇಶ ಪತ್ರ ಸಂಖ್ಯೆ: ಭೂಪರಿ/120/11–12 ದಿನಾಂಕ:08–12–2011 ರಂದು ಪ್ರಶ್ನಿತ ಜಮೀನನ್ನು ವಸತಿ ಉದ್ದೇಶದಿಂದ ವಾಣಿಜ್ಯ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಾಣಿಜ್ಯ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸದರಿ ಜಮೀನು ಪಶ್ಚಿಮ ದಿಕ್ಕಿನಲ್ಲಿ 9.0ಮೀ ಅಗಲದ ಪಟ್ಟಣಪಂಚಾಯಿತಿ ರಸ್ತೆಯಿಂದ ಸಂಪರ್ಕಹೊಂದಿದೆ.

ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ ನೀಡುವಾಗ ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಉಪವಿಭಾಗಾಧಿಕಾರಿ, ಮಡಿಕೇರಿ ಇವರು ವಾಸೋಪಯೋಗಕ್ಕಾಗಿ ಭೂಪರಿತಿಸಿರುವ ಆದೇಶದ ಪ್ರತಿ ಮತ್ತು ಮಾನ್ಯ ಜಿಲ್ಲಾಧಿಕಾರಿಗಳು ವಸತಿ ಉದ್ದೇಶದಿಂದ ವಾಣಿಜ್ಯ ಉದ್ದೇಶಕ್ಕೆ ಬದಲಿಸಿ ಆದೇಶ ನೀಡಿರುವ ತಿದ್ದುಪಡಿ ಆದೇಶದ ಪ್ರತಿ, ಆಸ್ತಿ ತೆರೆಗೆ ರಿಜಿಸ್ಟರ್, ಕ್ರಯಪತ್ರ, ಸರ್ವೆ ನಕ್ಷೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ತಾತ್ಕಾಲಿಕ ವಿನ್ಯಾಸ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ತಾತ್ಕಾಲಿಕ ವಿನ್ಯಾಸ ನಕ್ಷೆಗೆ ಪ್ರಾಧಿಕಾರ ಸಭೆ ದಿನಾಂಕ:21–05–2014 ರ ನಡವಳಿಗಳ ವಿಷಯಸಂಖ್ಯೆ(02)ರ ನಿರ್ಣಯದನ್ವಯ ದಿನಾಂಕ: 20–06–2014 ರಂದು ಅನುಮೋದನೆ ನೀಡಲಾಗಿದೆ ಮತ್ತು ಮೊದಲನೇ ಹಂತದಲ್ಲಿ ಶೇಕಡ 40% ರಂತೆ 19 ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ.

ತಾತ್ಕಾಲಿಕ ವಾಣಿಜ್ಯ ವಿನ್ಯಾಸ ನಕ್ಷೆಯಲ್ಲಿ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ.

ಭೂಉಪಯೋಗ ವಿಶ್ಲೇಷಣೆ			
ಕ್ರ. ಸಂ	ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ (%)
1	ವಾಣಿಜ್ಯಕ್ಕಾಗಿ	12430.87	61.56
3	ಉದ್ಯಾನವನ	2028.01	10.04
4	ವಾಹನನಿಲುಗಡೆ	1019.98	05.05
5	ರಸ್ತೆ ವಿಸ್ತರಣೆಗಾಗಿ	4714.77	23.35
	ಒಟ್ಟು	20193.63	100.00

ನಿವೇಶನಗಳ ವಿವರ		
ಕ್ರ. ಸಂ	ನಿವೆಶನದ ಅಳತೆ (ಮೀಟರ್ ಗಳಲ್ಲಿ)	ನಿವೇಶನಗಳ ಸಂಖ್ಯೆ
1	15.00 X 21.00	02
2	15.00 X 18.00	01
3	12.00 X 20.00	06
4	12.00 X 12.00	03
5	ಅನಿಯತ ನಿವೇಶನ	36
	ಒಟ್ಟು	48

ಮಾರ್ಪಡಿತ ವಿನ್ಯಾಸ ನಕ್ಷೆ ಅನುಮೋದನೆ: ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಇವರು ದಿನಾಂಕ: 08–08–2016 ರ ಪತ್ರದಲ್ಲಿ ಅರ್ಜಿದಾರರ ಮನವಿಯ ಮೇರಿಗೆ ಸದರಿ ಅನುಮೋದಿತ ನಕ್ಷೆಯಲ್ಲಿ ಸ.ನಂ. 140/2ರ ರಸ್ತೆಯು ಒತ್ತುವರಿಯಾಗಿರುವುದರಿಂದ ಸಂಪರ್ಕ ಕಲ್ಪಿಸುವ ಸಲುವಾಗಿ ಮಾರ್ಪಡಿತ ನಕಾಶೆಯನ್ನು ಅನುಮೋದನಿಸಿಕೊಡಬೇಕೆಂದು ಕೋರಿರುತ್ತಾರೆ. ಅದರಂತೆ ಪ್ರಾಧಿಕಾರ ಸಭೆ ದಿನಾಂಕ:23–08–2016 ರ ನಡವಳಿಗಳ ವಿಷಯಸಂಖ್ಯೆ(06) ರ ನಿರ್ಣಯದನ್ವಯ ದಿನಾಂಕ:08–11–2016 ರಂದು ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

ಮಾರ್ಪಡಿತ ವಾಣಿಜ್ಯ ವಿನ್ಯಾಸ ನಕ್ಷೆಯಲ್ಲಿ ಭೂಉಪಯೋಗ ವಿಶ್ಲೇಷಣೆ ಈ ಕೆಳಕಂಡಂತೆ ಇರುತ್ತದೆ.

ಭೂಉಪಯೋಗ ವಿಶ್ಲೇಷಣೆ			
ಕ್ರ. ಸಂ	ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ (%)
1	ವಾಣಿಜ್ಯಕ್ಕಾಗಿ	12461.83	61.71
3	ವಾಹನನಿಲುಗಡೆ	971.65	4.81
	ಉದ್ಯಾನವನ	2020.91	10.00
4	ರಸ್ತೆ	4739.22	23.48
	ಒಟ್ಟು	20193.63	100.00

ನಿವೇಶನಗಳ ವಿವರ		
ಕ್ರ. ಸಂ	ನಿವೆಶನದ ಅಳತೆ (ಮೀಟರ್ ಗಳಲ್ಲಿ)	ನಿವೇಶನಗಳ ಸಂಖ್ಯೆ
1	12.00 X 12.00	03
2	12.00 X 20.00	06
3	15.00 X 21.00	02
5	ಅನಿಯತ ನಿವೇಶನ	37
	ಒಟ್ಟು	48

ದಿನಾಂಕ: 16–05–2017 ರಂದು ಈ ಕಛೇರಿಯಿಂದ ಸದರಿ ಜಮೀನಿನ ಮಾಲೀಕರಿಗೆ ಪತ್ರ ಬರೆದು, ಈ ಕಛೇರಿಯ ತಾಂತ್ರಿಕ ಸಿಬ್ಬಂದಿಯವರು ಸದರಿ ಜಮೀನಿನ ಸ್ಥಳ ಪರಿಶೀಲನೆ ಮಾಡಿದಾಗ ಇದುವರೆವಿಗೂ ವಾಣಿಜ್ಯ ವಿನ್ಯಾಸ ನಕ್ಷೆಯನ್ನು ಅಭಿವೃದ್ಧಿಪಡಿಸದೇ ಇರುವುದು ಕಂಡುಬಂದಿರುತ್ತದೆ, ಅದು ಅಲ್ಲದೇ **ಸದರಿ ವಾಣಿಜ್ಯ ವಿನ್ಯಾಸ ನಕ್ಷೆಯ ನಿವೇಶನಗಳನ್ನು ಮಾರಾಟ ಮಾಡಿರುವುದು ಗಮನಕ್ಕೆ ಬಂದಿರುತ್ತದೆ, ಆದುದರಿಂದ ಕೂಡಲೇ ಈ ಕಛೇರಿಯಿಂದ ಅನುಮೋದನೆ ಮಾಡಿರುವ ಮಾರ್ಪಡಿತ ವಿನ್ಯಾಸ ನಕ್ಷೆಗೆ ತಕ್ಕಂತೆ ಅಭಿವೃದ್ಧಿಪಡಿಸಿ ಈ ಕಛೇರಿಗೆ ಮಾಹಿತಿ ನೀಡುವಂತೆ, ತಪ್ಪಿದಲ್ಲಿ ಪ್ರಾಧಿಕಾರದಿಂದ ಮುಂದಿನ ಸೂಕ್ತ ಕ್ರಮಕೈಗೊಳ್ಳಲಾಗುವುದು ಎಂದು ಸೂಚಿಸಲಾಗಿದೆ.** ಇದಕ್ಕೆ ಜಮೀನಿನ ಮಾಲೀಕರಿಂದ ಯಾವುದೇ ಉತ್ತರ ಬಂದಿರುವುದಿಲ್ಲ.

ದಿನಾಂಕ: 29–09–2020 ರಂದು ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಸದರಿ ವಿನ್ಯಾಸ ನಕ್ಷೆಯು ಅವಧಿಯು ಮುಕ್ತಾಯಗೊಂಡಿರುವುದರಿಂದ ಮುಂದಿನ ಕಾಮಗಾರಿ ನಿರ್ವಹಿಸಲು ನಕ್ಷೆಯನ್ನು ನವೀಕರಿಸಿಕೊಡುವಂತೆ ಅರ್ಜಿದಾರರು ಕೋರಿರುವ ಮೇರೆಗೆ ನಕ್ಷೆಯನ್ನು ನವೀಕರಿಸಿಕೊಡುವಂತೆ ಕೋರಿರುತ್ತಾರೆ.

ದಿನಾಂಕ: 24–11–2020 ರಂದು ಈ ಕಛೇರಿಯಿಂದ ಮುಖ್ಯಾಧಿಕಾರಿಗಳಿಗೆ ಪತ್ರ ಬರೆದು, ಪ್ರಶ್ನಿತ ಜಮೀನಿನ ಸ್ಥಳ ಪರಿಶೀಲನೆ ಮಾಡಲಾಗಿ, ಪ್ರಾಧಿಕಾರದಿಂದ ಈ ಹಿಂದೆ ಅನುಮೋದನೆ ನೀಡಿರುವ ವಾಣಿಜ್ಯ ಉದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಯಲ್ಲಿರುವಂತೆ ಜಮೀನಿನ ಎಲ್ಲೆಯ ಸ್ವರೂಪ ಮತ್ತು ಅಳತೆಗಳು ಹಾಗೂ ಹಾಲಿ ಸ್ಥಳದಲ್ಲಿರುವಂತೆ ಜಮೀನಿನ ಎಲ್ಲೆಗಳ ಸ್ವರೂಪ ಮತ್ತು ಅಳತೆಗಳು ಒಂದಂಕ್ಕೊಂದು ತಾಳೆಹೊಂದುತ್ತಿಲ್ಲ. ಈ ಹಿನ್ನಲೆಯಲ್ಲಿ, ಈ ರೀತಿ ಅನುಮೋದಿತ ವಿನ್ಯಾಸ ನಕ್ಷೆ ಮತ್ತು ಸ್ಥಳದಲ್ಲಿ ಅಭಿವೃದ್ಧಿಪಡಿಸಿರುವ ಸಂದರ್ಭ ಅಳತೆಗಳಲ್ಲಿ ಉಂಟಾಗಿರುವ ವ್ಯತ್ಯಾಸಕ್ಕೆ ಕಾರಣವೇನು ಎಂಬುದರ ಬಗ್ಗೆ ಸೂಕ್ತ ವಿವರಣೆಯನ್ನು ನೀಡಲು ಸೂಚಿಸಲಾಗಿದೆ, ಅಲ್ಲದೆ, ಪ್ರಶ್ನಿತ ಜಮೀನಿನ ಎಲ್ಲೆಗಳನ್ನು ಗುರುತಿಸಿರುವ, ಕಂದಾಯ ಇಲಾಖೆಯಿಂದ ದೃಢೀಕೃತ ಸರ್ವೆ ನಕ್ಷೆ ಮತ್ತು ಹಾಲಿ ಸ್ಥಳದಲ್ಲಿ ಅಭಿವೃದ್ಧಿಪಡಿಸಿರುವಂತೆ ಜಮೀನಿನ ವಿವರಗಳನ್ನೊಳಗೊಂಡ ಗಣಕೀಕೃತ ನಕ್ಷೆ (ಕಾಂಟೂರ್ ಮ್ಯಾಪ್) ಯನ್ನು ಸಿದ್ಧಪಡಿಸಿಕೊಂಡು, ಸದರಿ ನಕ್ಷೆಗಳನ್ನು ಒಂದೇ ನಕ್ಷೆಯಲ್ಲಿ ಅಳವಡಿಸಿ (Over Lap) ಈ ಕಛೇರಿಗೆ ಸಲ್ಲಿಸಿದಲ್ಲಿ, ಪರಿಶೀಲಿಸಿ ಮುಂದಿನ ಕ್ರಮವಹಿಸಲಾಗುವುದು ಎಂದು ತಿಳಿಸಲಾಗಿದ್ದು, ಪ್ರತಿಯನ್ನು ಜಮೀನಿನ ಮಾಲೀಕರಿಗೆ ಕಳುಹಿಸಲಾಗಿದೆ. ಸದರಿ ಪತ್ರಕ್ಕೆ ಜಮೀನಿನ ಮಾಲೀಕರಿಂದಾಗಲೀ, ಮುಖ್ಯಾಧಿಕಾರಿಗಳಿಂದಾಗಲೀ ಉತ್ತರ ಬಂದಿರುವುದಿಲ್ಲ.

ದಿನಾಂಕ: 28–09–2022 ರಂದು ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಇವರು ಈ ಕಛೇರಿಗೆ ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸಿ, ಅರ್ಜಿದಾರರು ಪರಿಷ್ಕೃತ ವಿನ್ಯಾಸ ನಕ್ಷೆಯ ಅವಶ್ಯಕತೆ ಇರುವುದರಿಂದ ಮರು ಅನುಮತಿ ನೀಡುವಂತೆ ಕೋರಿಕೊಂಡಿರುತ್ತಾರೆ, ಆದ್ದರಿಂದ ಪರಿಷ್ಕೃತ ವಿನ್ಯಾಸ ನಕ್ಷೆಗೆ ಮರು ಅನುಮತಿ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ದಿನಾಂಕ: 28–11–2022 ರಂದು ಈ ಕಛೇರಿಯಿಂದ ಜಮೀನಿನ ಮಾಲೀಕರಿಗೆ ಪತ್ರ ಬರೆದು ಸದರಿ ಜಮೀನಿನ ಇ.ಸಿ ಪ್ರತಿ, ಟೋಟಲ್ ಸ್ಟೇಷನ್ ನಕ್ಷೆ ಸಲ್ಲಿಸುವಂತೆ ಮತ್ತು ಯಾವ ಕಾರಣಕ್ಕಾಗಿ ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಬೇಕು ಎಂಬ ಬಗ್ಗೆ ಸ್ಪಷ್ಟ ವಿವರಣೆ ನೀಡಬೇಕೆಂದು ತಿಳಿಸಲಾಗಿದೆ ಮತ್ತು ಪ್ರತಿಯನ್ನು ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ ಇವರಿಗೆ ಮಾಹಿತಿಗಾಗಿ ಕಳುಹಿಸಲಾಗಿದೆ.

ದಿನಾಂಕ:03–01–2023 ರಂದು ಜಮೀನಿನ ಮಾಲೀಕರಲ್ಲಿ ಒಬ್ಬರಾದ ಟಿ.ಟಿ. ಅಬ್ದುಲ್ ರಫೀಕ್ ಇವರು ಈ ಕಚೇರಿಗೆ ಮನವಿ ಸಲ್ಲಿಸಿ, ಸದ್ಯಕ್ಕೆ ಯಾವುದೇ ಬದಲಾವಣೆಗಳು ಅವಶ್ಯಕತೆ ಇಲ್ಲದ ಕಾರಣ ಅನುಮೋದಿತ ನಕ್ಷೆಯಂತೆ ಬಡಾವಣೆಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿರುತ್ತೇವೆ, ಆದ್ದರಿಂದ ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆದು ಪ್ರಾದಿಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ಸದರಿ ಇಲಾಖೆಗಳಿಗೆ ಪ್ರಾಧಿಕಾರದಿಂದ ಕಾಮಗಾರಿ ಮುಕ್ತಾಯ ಪ್ರಮಾಣಪತ್ರ ನೀಡುವಂತೆ ಕೋರಿರುತ್ತಾರೆ.

ಈ ಕಛೇರಿಯಿಂದ ದಿನಾಂಕ:10–01–2023 ರಂದು ಸಂಬಂಧಪಟ್ಟ ಇಲಾಖೆಗಳಾದ ಪುರಸಭೆ, ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮತ್ತು ತೋಟಗಾರಿಕೆ ಇಲಾಖೆಗಳಿಗೆ ಪತ್ರ ಬರೆದು ಸದರಿ ವಾಣಿಜ್ಯ ಬಡಾವಣೆಯಲ್ಲಿ ತಮ್ಮ ಇಲಾಖೆಗೆ ಸಂಬಂಧಿಸಿದ ಕಾಮಗಾರಿಗಳನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರುವ ಬಗ್ಗೆ ಪರಿಶೀಲಿಸಿ, ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರವನ್ನು ಈ ಕಚೇರಿಗೆ ಕಳುಹಿಸುವಂತೆ ಕೋರಲಾಗಿದೆ.

ದಿನಾಂಕ:01–03–2024 ರಂದು ಅರ್ಜಿದಾರರು ಈ ಕಛೇರಿಗೆ ಮನವಿ ಸಲ್ಲಿಸಿ, ಸಂಬಂಧಪಟ್ಟ ಇಲಾಖೆಗಳಿಂದ ಕಾಮಗಾರಿ ಮುಕ್ತಾಯ ಪ್ರಮಾಣ ಪತ್ರವನ್ನು ಪಡೆದು ಸಲ್ಲಿಸುತ್ತಿದ್ದು, ಸದರಿ ವಾಣಿಜ್ಯ ಬಹುನಿವೇಶನ ವಿನ್ಯಾಸ ನಕ್ಷೆಯಲ್ಲಿ ಉಳಿದ 60% ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

ದಿನಾಂಕ: 22–03–2024, ದಿನಾಂಕ: 06–06–2024 ಹಾಗೂ ದಿನಾಂಕ: 10–07–2024 ರಂದು ಈ ಕಚೇರಿಯಿಂದ ಅರ್ಜಿದಾರರಿಗೆ ಹಿಂಬರಹ ನೀಡಿದ್ದು, ವಾಣಿಜ್ಯ ಉದ್ದೇಶದ ವಿನ್ಯಾಸ ನಕ್ಷೆಯಾಗಿರುವುದರಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ನಿರಾಕ್ಷೇಪಣಾ ಪತ್ರ,

ಅಫಿಡೆವಿಟ್ (ಉಪಉದ್ದೇಶ ನಮೂದಿಸಿರುವುದು), ಅಂತಿಮ ವಿನ್ಯಾಸ ನಕ್ಷೆಯ ಕರಡು ಪ್ರತಿ ಹಾಗೂ ಸಾಫ್ಟ್ ಕಾಪಿ, ರೇರಾ ಪ್ರಾಧಿಕಾರದಿಂದ ಪಡೆದಿರುವ ನೋಂದಣಿ ಪತ್ರ ದಾಖಲಾತಿಗಳನ್ನು ಸಲ್ಲಿಸಲು ಸೂಚಿಸಲಾಗಿರುತ್ತದೆ. ಅದಲ್ಲದೆ, ದಿನಾಂಕ: 10–07–2024 ರಂದು ನಮ್ಮ ಕಛೇರಿಯಿಂದ ಹಿಂಬರಹ ನೀಡಿದ್ದು, ಜಂಟಿ ಅಭಿವೃದ್ಧಿ ಕಾರಾರು ಪತ್ರ ಇದ್ದಲ್ಲಿ ಸಲ್ಲಿಸಲು ಹಾಗೂ ಸದರಿ ಮಂಜೂರಾತಿಯು ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿದ್ದು, ವಿನ್ಯಾಸವನ್ನು ನವೀಕರಿಸಿಕೊಳ್ಳುವ ಬಗ್ಗೆ, ಸದರಿ ವಾಣಿಜ್ಯ ವಿನ್ಯಾಸ ನಕ್ಷೆಯ ನಿವೇಶನಗಳನ್ನು ಮಾರಾಟ ಮಾಡಿರುವುದು ಗಮನಕ್ಕೆ ಬಂದಿರುವ ಕಾರಣ, ಅನುಮೋದನೆ ಮಾಡಿರುವ ಮಾರ್ಪಡಿತ ವಿನ್ಯಾಸ ನಕ್ಷೆಗೆ ತಕ್ಕಂತೆ ಅಭಿವೃದ್ಧಿಪಡಿಸಿ ಈ ಕಛೇರಿಗೆ ಮಾಹಿತಿ ನೀಡುವಂತೆ ಸೂಚಿಸಲಾಗಿರುತ್ತದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ ಸಲ್ಲಿಸಿರುವ ಇ.ಸಿ. (ನಮೂನೆ–15) ಯಲ್ಲಿ ಉಳಿಕೆ ಶೇ.60% ನಿವೇಶನಗಳ ಪೈಕಿ ನಿ.ಸಂ. 20, 23, 46 ಮತ್ತು 48 ನಿವೇಶನಗಳನ್ನು ವಹಿವಾಟು (Transaction) ಮಾಡಿರುವುದು ಕಂಡುಬಂದಿರುತ್ತದೆ. ಸದರಿ ವಹಿವಾಟು ನಡೆದಿರುವ ನಿವೇಶನ ಸಂಖ್ಯೆಗಳ ದಾಖಲಾತಿಗಳನ್ನು ಸಲ್ಲಿಸಲು ತಿಳಿಸಿದ್ದು, ನಿವೇಶನ ಸಂಖ್ಯೆ 20, 23 ಹಾಗೂ 48 ರಲ್ಲಿ Deposit of Title Deed ಕಂಡುಬಂದಿದ್ದು, ಅದನ್ನು ದಿನಾಂಕ: 04–10–2023 ರಂದು Discharge Receipt ಮುಖಾಂತರ South Indian Bank Madikeri ಇವರಿಂದ ಋಣಮುಕ್ತರಾಗಿರುತ್ತಾರೆ. ಆದರೆ, ನಿವೇಶನ ಸಂಖ್ಯೆ 46 ರ ದಿನಾಂಕ: 15–06–2021 ರ ಬಿಡುಗಡೆ ಪತ್ರ KUS-1-00178 2021-22 (KUSD 580) ಅನ್ನು ಸಲ್ಲಿಸಿರುವುದಿಲ್ಲ. ಅದರ ಬದಲಾಗಿ ದಿನಾಂಕ: 30–03–2017 ರಂದು ಶ್ರೀಮತಿ ಬಿ.ಪಿ. ಕಮಲಾಕ್ಷಿ ಹಾಗೂ ಶ್ರೀಯುತ ಎಂ.ಎಸ್. ಕೌಶಿಕ್ ರವರ ಹೆಸರಿಗೆ ಕ್ರಯಮಾಡಿರುವ ದಾಖಲಾತಿಯನ್ನು ಸಲ್ಲಿಸಿರುತ್ತಾರೆ. ಈ ವಹಿವಾಟು ಸಲ್ಲಿಸಿರುವ ಇ.ಸಿ. ಪ್ರತಿಯಲ್ಲಿ ನಮೂದಾಗಿರುವುದಿಲ್ಲ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಸದರಿ ಜಮೀನಿನ ಸ್ಥಳಪರಿಶೀಲನೆಯನ್ನು ದಿನಾಂಕ: 04–06–2024 ರಂದು ಮಾಡಲಾಗಿದೆ. ಸ್ಥಳಪರಿಶೀಲನೆ ವೇಳೆ ನಿವೇಶನಗಳ ಅಳತೆಗಳಲ್ಲಿ ವ್ಯತ್ಯಾಸ ಕಂಡುಬಂದಿದ್ದು, ಅನುಮೋದಿತ ಮಾರ್ಪಡಿತ ನಕ್ಷೆಯಲ್ಲಿರುವ ಅಳತೆಗಳು ಹಾಗೂ ಹಾಲಿ ಸ್ಥಳದಲ್ಲಿರುವಂತೆ ನಿವೇಶನಗಳ ಅಳತೆಗಳು ಒಂದಕ್ಕೊಂದು ತಾಳೆ ಹೊಂದುತ್ತಿರುವುದಿಲ್ಲ. ಅನುಮೋದಿತ ಕರಡು ವಿನ್ಯಾಸ ನಕ್ಷೆಯಲ್ಲಿರುವಂತೆ ವಾಹನನಿಲುಗಡೆ ಜಾಗವನ್ನು ಅಭಿವೃದ್ಧಿಗೊಳಿಸಿರುವುದಿಲ್ಲ. ಉದ್ಯಾನವನದ ಸ್ಥಳದಲ್ಲಿ ಅನಗತ್ಯ ಗಿಡಗಳು ಬೆಳೆದಿದ್ದು, ಸರಿಯಾದ ರೀತಿಯಲ್ಲಿ ನಿರ್ವಹಣೆಯಾಗಿರುವುದಿಲ್ಲ. ನಿವೇಶನಗಳ ಜಾಗವನ್ನು ಸಮತಟ್ಟು ಮಾಡಿ ಸ್ವಚ್ಛಗೊಳಿಸಿರುವುದಿಲ್ಲ. ಆದ್ದರಿಂದ ಅರ್ಜಿದಾರರಿಗೆ ಮತ್ತೊಮ್ಮೆ ಹಿಂಬರಹ ನೀಡಿ ಅಭಿವೃದ್ಧಿ ಕಾರ್ಯಗಳನ್ನು ಸರಿಯಾದ ರೀತಿಯಲ್ಲಿ ಕೈಗೊಂಡು ನಂತರ ಮರುಸ್ಥಳಪರಿಶೀಲನೆಗೆ ಅನುವು ಮಾಡಿಕೊಡಬೇಕೆಂದು ತಿಳಿಸಲಾಗಿರುತ್ತದೆ.

ದಿನಾಂಕ: 19–07–2024 ರಂದು ಮತ್ತೊಮ್ಮೆ ಸ್ಥಳಪರಿಶೀಲಿಸಿದ್ದು, ಅದರಂತೆ ಅರ್ಜಿದಾರರು ಅಭಿವೃದ್ಧಿ ಕಾರ್ಯಗಳಾದ ವಾಹನ ನಿಲುಗಡೆ ಅಭಿವೃದ್ಧಿ, ಉದ್ಯಾನವನ ನಿರ್ವಹಣೆ ಕಾರ್ಯಗಳನ್ನು ಕೈಗೊಂಡಿರುತ್ತಾರೆ. ನಿವೇಶನಗಳ ಅಳತೆಗಳಲ್ಲಿ ವ್ಯತ್ಯಾಸ ಕಂಡುಬಂದಿದ್ದು, ಅನುಮೋದಿತ ಮಾರ್ಪಡಿತ ನಕ್ಷೆಯಲ್ಲಿರುವ ಅಳತೆಗಳು ಹಾಗೂ ಹಾಲಿ ಸ್ಥಳದಲ್ಲಿರುವಂತೆ ನಿವೇಶನಗಳ ಅಳತೆಗಳು ಒಂದಕ್ಕೊಂದು ತಾಳೆ ಹೊಂದುತ್ತಿರುವುದಿಲ್ಲ. ಅರ್ಜಿದಾರರು ಸ್ಥಳದಲ್ಲಿ ಮಾರ್ಪಡಿತ ವಿನ್ಯಾಸ ನಕ್ಷೆಯಂತೆ ನಿವೇಶನಗಳ ಗಡಿಕಲ್ಲುಗಳನ್ನು ಸರಿಪಡಿಸಿಕೊಳ್ಳಬೇಕಾಗಿರುತ್ತದೆ. ತಪ್ಪಿದ್ದಲ್ಲಿ ಎಲ್ಲಾ ನಿವೇಶನಗಳಲ್ಲಿ ಹೆಚ್ಚು ವ್ಯತ್ಯಾಸ ಕಂಡುಬಂದಲ್ಲಿ ಮತ್ತೊಮ್ಮೆ ನಕ್ಷೆಯನ್ನು ಮಾರ್ಪಡಿಸಿಕೊಳ್ಳುವುದು ಸೂಕ್ತವಾಗಿರುತ್ತದೆ. ನಿವೇಶನ ಸಂಖ್ಯೆ 46 ಈ ಹಿಂದೆ ಬಿಡುಗಡೆಗೊಳ್ಳದೇ ಇದ್ದರೂ ಸಹ ಅದನ್ನು ದಿನಾಂಕ: 30–03–2017 ರಂದು ಶ್ರೀಮತಿ ಬಿ.ಪಿ. ಕಮಲಾಕ್ಷಿ ಹಾಗೂ ಶ್ರೀಯುತ ಎಂ.ಎಸ್. ಕೌಶಿಕ್ ರವರ ಹೆಸರಿಗೆ ಕ್ರಯಮಾಡಿರುವುದು ನಿಯಮಬಾಹಿರವಾಗಿರುತ್ತದೆ. ದಿನಾಂಕ: 01–01–2023 ರಿಂದ 12–06–2024 ರವರೆಗಿನ ಸದರಿ ಬಡಾವಣೆಗೆ ಸಂಬಂಧಿಸಿದ ಎಲ್ಲಾ ವಹಿವಾಟುಗಳು ಸರಿಯಾಗಿ ನಮೂದಾಗಿರುವಂತೆ ಮತ್ತೊಮ್ಮೆ ಇ.ಸಿ. ಪ್ರತಿಯನ್ನು ಸಲ್ಲಿಸುವುದು ಅವಶ್ಯವಾಗಿರುತ್ತದೆ. ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ಚರ್ಚೆ: ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಅಧ್ಯಕ್ಷರು ಮಾತನಾಡಿ ಬಿಡುಗಡೆಗೆ ಉಳಿದಿರುವ ಶೇ. 60% ನಿವೇಶನಗಳನ್ನು ಮಾರ್ಪಾಡಿತ ವಿನ್ಯಾಸ ನಕ್ಷೆಯ ಅಳತೆಗಳೊಂದಿಗೆ ಖಚಿತಪಡಿಸಿಕೊಂಡು ನಂತರ ಅನುಮೋದನೆ ನೀಡಬೇಕೆಂದು ತಿಳಿಸಿದರು. ಮುಖ್ಯಾಧಿಕಾರಿಗಳು ಮಾತನಾಡಿ ಬಡಾವಣೆ ಮಾಲೀಕರಿಂದ

ಹಾಗೂ ನಿವೇಶನ ಸಂಖ್ಯೆ 46 ರ ಮಾಲೀಕರಿಂದ ಪ್ರಮಾಣ ಪತ್ರವನ್ನು ಪಡೆದು, ಸದರಿ ಬಡಾವಣೆಯ ನಿವೇಶನಗಳನ್ನು ಬಿಡುಗಡೆಗೊಳಿಸಿದ ನಂತರ ನಿವೇಶನ ಸಂಖ್ಯೆ 46 ಅನ್ನು ಶ್ರೀಮತಿ ಬಿ.ಪಿ. ಕಮಲಾಕ್ಷಿ ಹಾಗೂ ಶ್ರೀಯುತ ಎಂ.ಎಸ್. ಕೌಶಿಕ್ ರವರ ಹೆಸರಿಗೆ ಕ್ರಯಮಾಡಿರುವುದರಿಂದ, ಸದರಿಯವರುಗಳಿಗೆ ಬಡಾವಣೆ ಮಾಲೀಕರು ಅಂತಿಮ ಅನುಮೋದಿತ ನಕ್ಷೆಯಲ್ಲಿರುವ ಅಳತೆಗಳಿಗೆ ಅನುಗುಣವಾಗಿ ನಿವೇಶನ ಸಂಖ್ಯೆ ಹಾಗೂ ವಿಸ್ತೀರ್ಣಗಳನ್ನು ಅವರ ಹೆಸರುಗಳಿಗೇ ಬರೆದುಕೊಡಬೇಕೆಂದು ಷರತ್ತಿಗೊಳಪಡಿಸಿ ಎಂದು ತಿಳಿಸಿದರು ಹಾಗೂ ಈ ಹಿಂದೆ ಬಿಡುಗಡೆಗೊಂಡಿರುವ ಶೇ. 40% ರಷ್ಟು ನಿವೇಶನಗಳನ್ನು ಸಹ ಪರಿಶೀಲಿಸಿಕೊಳ್ಳುವುದು ಸೂಕ್ತಾವಾಗಿರುತ್ತದೆ ಏಕೆಂದರೆ ಈ 40% ರಷ್ಟು ನಿವೇಶನಗಳನ್ನು ಖರೀದಿ ಮಾಡುವಾಗ ವಿಸ್ತೀರ್ಣಗಳಲ್ಲಿ ವ್ಯತ್ಯಾಸ ಉಂಟಾಗಿ ಖರೀದಿದಾರರಿಗೆ ಗೊಂದಲ ಉಂಟಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಈಗಾಗಲೇ ಬಿಡುಗಡೆಗೊಳಿಸಿರುವ 40% ನಿವೇಶನಗಳನ್ನು ಮಾರಾಟ ಮಾಡಿದ್ದಲ್ಲಿ ಬಿಡುಗಡೆಗೊಳಿಸುವ ಸಮಯದಲ್ಲಿ ನಮೂದಾಗಿದ್ದ ವಿಸ್ತೀರ್ಣದನ್ವಯ ಕ್ರಯ ಮಾಡಿದ್ದಲ್ಲಿ ಅದೇ ವಿಸ್ತೀರ್ಣಕ್ಕೆ ಮುಂದೆ ಅಂತಿಮ ವಿನ್ಯಾಸ ನಕ್ಷೆ ಅನುಮೋದನೆ ಸಮಯದಲ್ಲಿ ಈ ಹಿಂದಿನ ವಿಸ್ತೀರ್ಣವನ್ನೇ ಕಾಯ್ದಿರಿಸಿಕೊಂಡು ಕ್ರಯಮಾಡಲು ಷರತ್ತುವಿಧಿಸಬೇಕೆಂದು ಮುಖ್ಯಾಧಿಕಾರಿಗಳು ತಿಳಿಸುತ್ತಾರೆ ಹಾಗೂ ಹಿಂದಿನ ನಿವೇಶನ ಸಂಖ್ಯೆಗಳನ್ನೇ ಕಾಯ್ದಿರಿಸಿಕೊಳ್ಳಬೇಕೆಂದು ತಿಳಿಸುತ್ತಾರೆ. ಆಗ ಅಧ್ಯಕ್ಷರು ಮತ್ತೊಮ್ಮೆ ಸ್ಥಳಪರಿಶೀಲಿಸಿ ನಿವೇಶನಗಳ ಅಳತೆಗಳನ್ನು ಮಾಡಲು ಸದಸ್ಯಕಾರ್ಯದರ್ಶಿಗಳಿಗೆ ತಿಳಿಸಿರುತ್ತಾರೆ.

ನಿರ್ಣಯ: ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು. ನಿವೇಶನಗಳ ಅಳತೆಗಳಲ್ಲಿ ಕಡಿಮೆ ವ್ಯತ್ಯಾಸ ಕಂಡುಬಂದಲ್ಲಿ ಅರ್ಜಿದಾರರು ಸ್ಥಳದಲ್ಲಿ ಮಾರ್ಪಡಿತ ವಿನ್ಯಾಸ ನಕ್ಷೆಯಂತೆ ನಿವೇಶನಗಳ ಗಡಿಕಲ್ಲುಗಳನ್ನು ಸರಿಪಡಿಸಿಕೊಳ್ಳಬೇಕು. ಎಲ್ಲಾ ನಿವೇಶನಗಳನ್ನು ಅಳತೆ ಮಾಡಿದಾಗ ಹೆಚ್ಚು ವ್ಯತ್ಯಾಸ ಕಂಡುಬಂದಲ್ಲಿ ಮತ್ತೊಮ್ಮೆ ನಕ್ಷೆಯನ್ನು ಮಾರ್ಪಡಿಸಿಕೊಳ್ಳಬೇಕೆಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ನಿವೇಶನ ಸಂಖ್ಯೆ 46 ಅನ್ನು ಶ್ರೀಮತಿ ಬಿ.ಪಿ. ಕಮಲಾಕ್ಷಿ ಹಾಗೂ ಶ್ರೀಯುತ ಎಂ.ಎಸ್. ಕೌಶಿಕ್ ರವರ ಹೆಸರಿಗೆ ಕ್ರಯಮಾಡಿರುವುದರಿಂದ, ಸದರಿಯವರುಗಳಿಗೆ ಬಡಾವಣೆ ಮಾಲೀಕರು ಅಂತಿಮ ಅನುಮೋದಿತ ನಕ್ಷೆಯಲ್ಲಿರುವ ಅಳತೆಗಳಿಗೆ ಅನುಗುಣವಾಗಿ ನಿವೇಶನ ಸಂಖ್ಯೆ ಹಾಗೂ ವಿಸ್ತೀರ್ಣಗಳನ್ನು ಅವರ ಹೆಸರುಗಳಿಗೇ ಖಾತೆ ಮಾಡಿಸಿಕೊಡಬೇಕೆಂದು ಹಾಗೂ ಕ್ರಯಪತ್ರಗಳಲ್ಲಿ ತಿದ್ದುಪಡಿ ಮಾಡಿಸಿಕೊಡಬೇಕೆಂಬ ಷರತ್ತಿಗೊಳಪಡಿಸಿ, ಯಾವುದೇ ತಂಟೆ ತಕರಾರು ಉದ್ಭವಿಸಿದಲ್ಲಿ ಅವರುಗಳೇ ಜವಾಬ್ದಾರರೆಂದು (ಬಡಾವಣೆ ಮಾಲೀಕರುಗಳು ಹಾಗೂ ನಿವೇಶನದ ಮಾಲೀಕರುಗಳು) ಪ್ರಮಾಣ ಪತ್ರ ಪಡೆದ ನಂತರ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡಬಹುದೆಂದು ಉಳಿಕೆ ಶೇ 60% ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ(10): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 21/1 ಮತ್ತು ಹಿಸ್ಸಾಗಳು ಹಾಗೂ 11/6 ರ ಒಟ್ಟು 9.41 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುವ ಬಗ್ಗೆ (**ಅರ್ಜಿದಾರರು;– ಶ್ರೀ ಎಂ.ಕೆ. ರಾಜು ಮತ್ತು ಇತರರು**)

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರು ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಮುಳ್ಳುಸೋಗೆ ಗ್ರಾಮದ ಸ.ನಂ. 21/1 ಮತ್ತು ಹಿಸ್ಸಾಗಳು ಹಾಗೂ 11/6 ರ ಒಟ್ಟು 9.41 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರಗಳು: ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಪ್ರಶ್ನಿತ ಜಮೀನುಗಳನ್ನು ಕೆಳಕಂಡಂತೆ ಅಧಿಕೃತ ಜ್ಞಾಪನ ಪತ್ರಗಳಲ್ಲಿ ವಸತಿ (ಲೇಔಟ್) ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ.

ಕ್ರ. ಸಂ.	ಸರ್ವೆ ನಂಬರ್ (ಮುಳ್ಳುಸೋಗೆ ಗ್ರಾಮ)	ವಿಸ್ತೀರ್ಣ (ಎಕರೆಗಳಲ್ಲಿ)	ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:	ಉದ್ದೇಶ
1	21/83	0.48.75	625888 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
2	21/71	0.58	625899 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
3	21/80	1.22.25	625908 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
4	21/85	0.04	625919 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
5	21/77	0.76.50	625928 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
6	21/79	0.04.50	625936 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
7	21/87	0.12	626189 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
8	21/82	0.05.50	626199 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
9	21/86	0.04	626203 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
10	21/81	0.40	626213 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
11	21/1	0.39	626270 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
12	21/84	0.04.75	626194 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
13	21/78	0.42.50	626593 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
14	21/73	0.70	626603 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
15	21/76	0.58	626613 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
16	21/74	0.70	626617 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
17	21/70	0.42	626625 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
18	21/72	0.14	626715 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
19	21/75	1.10	626736 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.
20	11/16	1.15.50	626574 ದಿನಾಂಕ: 26–03–2024	Residential-Layout ಉದ್ದೇಶಕ್ಕಾಗಿ ಭೂಪರಿವರ್ತಿಸಿ ಆದೇಶಿಸಲಾಗಿದೆ.

ಮಹಾಯೊಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನುಗಳು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಸರ್ವೆ ನಂಬರ್ 11/6 ರ ಜಮೀನಿಗೆ ಬಡಾವಣೆ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಈ ಬಗ್ಗೆ ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ ಇವರು ಸ.ನಂ. 11/16 ರ ಜಾಗಕ್ಕೆ ಪ್ರಸ್ತಾಪಿತ ಬಡಾವಣೆ ಒಳಗಿಂದ ಸರ್ವೆ ನಂ. 11/1 ರ ಕಡೆಯಿಂದ ಸಂಪರ್ಕ ರಸ್ತೆ ಇರುತ್ತದೆ ಎಂಬುದಾಗಿ ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಸದರಿ ಜಮೀನುಗಳ ಸ್ಥಿರಾಸ್ತಿಗಳ ವಿಭಾಗ ಪತ್ರ, ಸದರಿ ಜಮೀನುಗಳ ಮಾಲೀಕರುಗಳು ಶ್ರೀ ಎಂ.ಕೆ ರಾಜು ಇವರಿಗೆ ಬರೆದುಕೊಟ್ಟಿರುವ ಸಾಮಾನ್ಯ ಅಧಿಕಾರ ಪತ್ರ, ಆರ್.ಟಿ.ಸಿ ಪ್ರತಿಗಳು, ಮ್ಯುಟೇಷನ್ ಪ್ರತಿಗಳು, 11ಇ ನಕ್ಷೆ, ಇ.ಸಿ (ನಮೂನೆ–15) ಪ್ರತಿಗಳು, ಅಫಿಡೆವಿಟ್, ಎಲ್ಲಾ ಮಾಲೀಕರುಗಳ ಆಧಾರ್ ಕಾರ್ಡ್‌ಗಳು ಮತ್ತು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಸದರಿ ಜಮೀನಿನ ಕಾಂಟೂರ್ ನಕ್ಷೆ, ಟೋಟಲ್ ಸ್ಟೇಷನ್ ನಕ್ಷೆ ದಾಖಲಾತಿಗಳನ್ನು ಅರ್ಜಿದಾರರು ಸಲ್ಲಿಸಿರುತ್ತಾರೆ.

ಸದಸ್ಯಕಾರ್ಯದರ್ಶಿಯವರ ಅಭಿಪ್ರಾಯ: ಸದರಿ ಜಮೀನಿನ ಸ್ಥಳಪರೀಲನೆಯನ್ನು ಮಾಡಲಾಗಿದೆ. ಪ್ರಶ್ನಿತ ಜಮೀನುಗಳು ಅನುಮೋದಿತ ಮಹಾಯೋಜನೆಯಂತೆ ವಸತಿ ವಲಯದಲ್ಲಿದ್ದು, ಸರ್ವೆ ನಂಬರ್ 11/6 ರ ಜಮೀನಿಗೆ ಬಡಾವಣೆ ರಸ್ತೆಯಿಂದ ಸಂಪರ್ಕ ಹೊಂದಿದ್ದು, ಈ ಬಗ್ಗೆ ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ ಇವರು ಸ.ನಂ. 11/16 ರ ಜಾಗಕ್ಕೆ ಪ್ರಸ್ತಾಪಿತ ಬಡಾವಣೆ ಒಳಗಿಂದ ಸರ್ವೆ ನಂ. 11/1 ರ ಕಡೆಯಿಂದ ಸಂಪರ್ಕ ರಸ್ತೆ ಇರುತ್ತದೆ ಎಂಬುದಾಗಿ ದೃಢೀಕರಣ ಪತ್ರವನ್ನು ನೀಡಿರುತ್ತಾರೆ. ಮಹಾಯೋಜನೆಯಂತೆ ಸ.ನಂ. 21/87, 21/71 ರ ಜಮೀನುಗಳ ಮೂಲಕ 9.0ಮೀ ಅಗಲದ ಪ್ರಸ್ತಾವಿತ ರಸ್ತೆಯು ಹಾದುಹೋಗಿರುತ್ತದೆ ಹಾಗೂ ಸ.ನಂ. 21/81 ರ ಮೂಲಕ 12.0ಮೀ ಅಗಲದ ಪ್ರಸ್ತಾವಿತ ರಸ್ತೆಯು ಹಾದುಹೋಗಿರುತ್ತದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಸುತ್ತಳತೆ ಹಾಗೂ ಎಲ್ಲೆಯನ್ನು ನಿಗಧಿಪಡಿಸಿ ಮತ್ತು ಮಹಾಯೋಜನೆಯಂತೆ ಪ್ರಸ್ತಾವಿತ 9.0ಮೀ ಹಾಗೂ 12.0ಮೀ ಅಗಲದ ರಸ್ತೆಯನ್ನು ಅಳವಡಿಸಿಕೊಂಡು ಅರ್ಜಿದಾರರು ಕರಡು ವಿನ್ಯಾಸ ನಕ್ಷೆಯನ್ನು ಸಲ್ಲಿಸಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಭೂಉಪಯೋಗ ವಿಶ್ಲೇಷಣೆ			
ಕ್ರ ಸಂ	ಭೂಉಪಯೋಗ	ವಿಸ್ತೀರ್ಣ (ಚ.ಮೀ ಗಳಲ್ಲಿ)	ಶೇಕಡ (%)
1	ವಸತಿ ಉದ್ದೇಶಕ್ಕೆ	18941.02	51.87
3	ಉದ್ಯಾನವನ	3656.19	10.01
4	ನಾಗರೀಕ ಸೌಲಭ್ಯ	1827.22	5.01
5	ರಸ್ತೆಗಾಗಿ	12089.50	33.11
	ಒಟ್ಟು	36513.93	100.00

ನಿವೇಶನಗಳ ವಿವರ		
ಕ್ರ ಸಂ	ನಿವೆಶನದ ಅಳತೆ (ಮೀಟರ್ ಗಳಲ್ಲಿ)	ನಿವೇಶನಗಳ ಸಂಖ್ಯೆ
1	9.00 X15.00	26
2	9.00 X 12.00	25
3	12.00 X ಅನಿಯತ ನಿವೇಶನ	09
4	9.00 X ಅನಿಯತ ನಿವೇಶನ	22
5	ಅನಿಯತ ನಿವೇಶನಗಳು	37
	ಒಟ್ಟು	119

ಅರ್ಜಿದಾರರು ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯ ವಿಸ್ತೀರ್ಣಗಳಲ್ಲಿ ವ್ಯತ್ಯಾಸ ಕಂಡುಬಂದಿರುತ್ತದೆ. ಅದಲ್ಲದೆ ಸದರಿ ಜಮೀನಿನ ಸ್ಥಳಪರೀಲನೆಯನ್ನು ಮಾಡಿದಾಗ ಸ್ಥಳದಲ್ಲಿ ಈಗಾಗಲೇ ಕಟ್ಟಡಗಳಿದ್ದು (ಕರಡು ವಿನ್ಯಾಸ ನಕ್ಷೆಯಲ್ಲಿ ನಿ.ಸಂ. 50 {ಸ.ನಂ, 21/73 ಮತ್ತು 21/74} ಹಾಗೂ ನಿ.ಸಂ. 08 {ಸ.ನಂ. 21/87} ರ ಸ್ಥಳದಲ್ಲಿ) ಸದರಿ ಕಟ್ಟಡಗಳು ಯಾರ ಮಾಲೀಕತ್ವದಲ್ಲಿರುತ್ತದೆ ಹಾಗೂ ಇದಕ್ಕೆ ಏಕನಿವೇಶನ ನಕ್ಷೆ ಅಥವಾ ಕಟ್ಟಡ ನಕ್ಷೆಗೆ ಅನುಮೋದನೆ ಪಡೆದಿರುತ್ತಾರೆಯೇ ಎಂಬುದರ ಬಗ್ಗೆ ಮಾಹಿತಿಯನ್ನು ಪಡೆಯಬೇಕಾಗಿರುತ್ತದೆ.

ಆದ್ದರಿಂದ ಸದರಿ ಮಾಹಿತಿಯನ್ನು ಪಡೆದ ನಂತರ ಹಾಗೂ ವಿನ್ಯಾಸ ನಕ್ಷೆಯನ್ನು ಸರಿಪಡಿಸಿ ಸಲ್ಲಿಸಿದ ನಂತರ ಪರಿಶೀಲಿಸಿ, ಅನುಮೋದಿತ ವಲಯ ನಿಯಮಾವಳಿಯಂತೆ ತಾಳೆ ಹೊಂದುತ್ತಿದ್ದಲ್ಲಿ, ವಲಯ ನಿಯಮಾವಳಿಯ ಅಧ್ಯಾಯ 34(ಎ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ

1961ರ ಕಲಂ 17(2ಎ) ರನ್ವಯ ಸದರಿ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಬಹುದಾಗಿದ್ದು, ವಿಷಯವನ್ನು ಸಭೆಯ ನಿರ್ಣಯಕ್ಕೆ ಮಂಡಿಸಿದೆ.

ಚರ್ಚೆ: ವಿಷಯವನ್ನು ಸಭೆಯಲ್ಲಿ ಚರ್ಚಿಸಲಾಗಿ, ಅಧ್ಯಕ್ಷರು ಮಾತನಾಡಿ ಸ್ಥಳದಲ್ಲಿ ಈಗಾಗಲೇ ಕಟ್ಟಡಗಳು ಇರುವ ಕಾರಣ ಈ ಕಟ್ಟಡಗಳಿಗೆ ಭೂಪರಿವರ್ತನೆ ಸಮಯದಲ್ಲಿ ದಂಡ ಶುಲ್ಕವನ್ನು ಪಾವತಿಸಿರುತ್ತಾರೆಯೇ ಎಂದು ಕೇಳಿದರು. ಸದಸ್ಯಕಾರ್ಯದರ್ಶಿಗಳು ದಂಡ ಪಾವತಿಸಿರುವುದಿಲ್ಲ ಎಂದು ತಿಳಿಸಿದರು. ಅಧ್ಯಕ್ಷರು ಹಾಗೂ ಸದಸ್ಯರುಗಳು ಸಭೆಯಲ್ಲಿ ಮಂಡಿಸಿರುವ ಇತರೆ ವಿನ್ಯಾಸ ನಕ್ಷೆಗಳಲ್ಲಿ ಕಟ್ಟಡ ಇರುವ ಬಗ್ಗೆ ಪರಿಶೀಲಿಸಿದರು. ನಂತರ ನಕ್ಷೆಯಲ್ಲಿ ಕಟ್ಟಡಗಳನ್ನು ಗುರುತು ಮಾಡದೇ ಇರುವುದನ್ನು ತಿಳಿಸಿ, ನಕ್ಷೆಯನ್ನು ಸರಿಪಡಿಸಿಕೊಳ್ಳುವಂತೆ ಸದಸ್ಯರುಗಳು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿದರು. ಅದಲ್ಲದೆ, ಸದರಿ ಕಟ್ಟಡಗಳಿಗೆ ಸಂಬಂಧಿಸಿದಂತೆ ಖಾತೆ/ಕ್ರಯಪತ್ರಗಳನ್ನು ಇದ್ದಲ್ಲಿ ಕಛೇರಿ ಉಪಯೋಗಕ್ಕಾಗಿ ಪಡೆದುಕೊಳ್ಳುವಂತೆ ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿದರು.

ನಿರ್ಣಯ: ವಿಷಯವನ್ನು ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಯಿತು ಅರ್ಜಿದಾರರು ಸಲ್ಲಿಸಿರುವ ಕರಡು ವಿನ್ಯಾಸ ನಕ್ಷೆಯಲ್ಲಿ ವಿಸ್ತೀರ್ಣಗಳಲ್ಲಿನ ವ್ಯತ್ಯಾಸವನ್ನು ಸರಿಪಡಿಸಿ ಸಲ್ಲಿಸಬೇಕೆಂದು ನಿರ್ಣಯಿಸಲಾಯಿತು. ಸ್ಥಳದಲ್ಲಿ ಈಗಾಗಲೇ ಕಟ್ಟಡಗಳು ಇರುವ ಕಾರಣ ಈ ಕಟ್ಟಡಗಳಿಗೆ ಭೂಪರಿವರ್ತನೆ ಸಮಯದಲ್ಲಿ ಪಾವತಿಸಬೇಕಾದ ದಂಡ ಶುಲ್ಕವನ್ನು ಪಾವತಿಸಿಕೊಂಡ ನಂತರ ರಸೀದಿಯನ್ನು ಪಡೆದು ಈ ಕಟ್ಟಡಗಳನ್ನು ವಿನ್ಯಾಸ ನಕ್ಷೆಯಲ್ಲಿ ಗುರುತಿಸಿಕೊಂಡು, ಕಟ್ಟಡಗಳ ಮಾಲೀಕರಿಂದ ಪ್ರಮಾಣ ಪತ್ರ ಪಡೆದ ನಂತರ ಅನುಮೋದಿತ ವಲಯ ನಿಯಮಾವಳಿಗಳಂತೆ ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 17(2ಎ) ರನ್ವಯ ಸದರಿ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ತಾತ್ಕಾಲಿಕ ಅನುಮೋದನೆ ನೀಡಬಹುದಾಗಿರುತ್ತದೆ ಎಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯಸಂಖ್ಯೆ(11): ಸಭೆಯ ಸ್ಥಿರೀಕರಣಕ್ಕಾಗಿ ಮಂಡಿಸಿರುವ ಪ್ರಸ್ತಾವನೆಗಳು:–

ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಲ್ಲಿ **"0.20 ಸೆಂಟ್ಸ್ ವರೆಗಿನ ವಿಸ್ತೀರ್ಣಕ್ಕೆ ಏಕ–ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಕೋರಿ ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ಮತ್ತು ನಿವೇಶನಗಳ ವಿಭಜನೆ/ಒಟ್ಟುಗೂಡಿಸುವಿಕೆಗೆ ಸಂಬಂಧಿಸಿದ ಕಡತಗಳನ್ನು ಪ್ರಾಧಿಕಾರದ ಅಧ್ಯಕ್ಷರಿಗೆ ಮಂಡಿಸಿ, ಕಡತದಲ್ಲಿ ಅನುಮೋದನೆ ಪಡೆದ ನಂತರ ಸದಸ್ಯ ಕಾರ್ಯದರ್ಶಿಗಳ ಹಂತದಲ್ಲಿ ಅನುಮೋದನೆ ನೀಡುವಂತೆ ಹಾಗೂ ಇಂತಹ ಪ್ರಕರಣಗಳನ್ನು ಮುಂದಿನ ಪ್ರಾಧಿಕಾರದ ಸಭೆಗೆ ಸ್ಥಿರೀಕರಣಕ್ಕಾಗಿ ಮಂಡಿಸಲು ಸದಸ್ಯ ಕಾರ್ಯದರ್ಶಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿರುತ್ತದೆ"**. ಅದರಂತೆ ಈ ಕೆಳಕಂಡ ಪ್ರಸ್ತಾವನೆಗಳಿಗೆ ಅನುಮೋದನೆ ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕೆ ಮಂಡಿಸಿದೆ.

i. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 44/6 ರಲ್ಲಿ 0.10 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಸೋಮಶೇಕರ್ ಮತ್ತು ಹೂವೇಗೌಡ**).

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂ: 579460 ದಿನಾಂಕ: 08–02–2024 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಜಮೀನು ಪಶ್ಚಿಮ ದಿಕ್ಕಿನಲ್ಲಿ ಹಾಲಿ 5.0ಮೀ ಅಗಲದ ರಸ್ತೆಯಿಂದ ಸಂಪರ್ಕ ಹೊಂದಿದ್ದು, 9.0ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರ ಪತ್ರ ಸಂಖ್ಯೆ: ಕೂ.ಮಂ/230/2023–24

ದಿನಾಂಕ:26–12–2023 ರಲ್ಲಿ ಸದರಿ ಜಾಗಕ್ಕೆ ರಸ್ತೆ ಸಂಪರ್ಕ ಇರುತ್ತದೆ ಎಂಬುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಇತ್ತೀಚಿನ ಇ.ಸಿ. ಪ್ರತಿ, ಕ್ರಯಪತ್ರ, ಇತ್ತೀಚಿನ ಆರ್.ಟಿ.ಸಿ, 11ಇ ನಕ್ಷೆ, ಆಧಾರ್‌ಕಾರ್ಡ್, ಮ್ಯುಟೇಷನ್ ಪ್ರತಿ, ಅಫಿಡೆವಿಟ್, ಆಕಾರ್‌ಬಂದ್(ಉತಾರು) ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 364.08 ಚ.ಮೀ (ಶೇ. 89.13%) ಮತ್ತು ರಸ್ತೆಗಾಗಿ 44.40 ಚ.ಮೀ (ಶೇ. 10.87%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಕೂಡ್ಲೂರು ಗ್ರಾಮದ ಸ.ನಂ. 44/6 ರಲ್ಲಿ 0.10 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 13–05–2024 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ii. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 3/18 ರಲ್ಲಿ 0.05 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀಮತಿ ಮಾದೇವಿ ಕೋಂ ಸಿದ್ದರಾಜು**).

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂ: 505159 ದಿನಾಂಕ: 31–10–2023 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಜಮೀನು ಪಶ್ಚಿಮ ದಿಕ್ಕಿನಲ್ಲಿ 9.0ಮೀ ಅಗಲದ ರಸ್ತೆಯಿಂದ ಸಂಪರ್ಕ ಹೊಂದಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಇ.ಸಿ. ಪ್ರತಿ, ಕ್ರಯಪತ್ರ, ಇತ್ತೀಚಿನ ಆರ್.ಟಿ.ಸಿ, 11ಇ ನಕ್ಷೆ, ಆಧಾರ್‌ಕಾರ್ಡ್, ಮ್ಯುಟೇಷನ್ ಪ್ರತಿಗಳು, ಅಫಿಡೆವಿಟ್ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 202.3435 ಚ.ಮೀ (ಶೇ. 100%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಕೂಡ್ಲೂರು ಗ್ರಾಮದ ಸ.ನಂ. 3/18 ರಲ್ಲಿ 0.05 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ದಿನಾಂಕ: 16–05–2024 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

iii. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಬೈಚನಹಳ್ಳಿ ಗ್ರಾಮದ ಸ.ನಂ. 51/11 ರಲ್ಲಿ 0.08.25 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಕೆ.ವಿ. ಶೇಖರ**).

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರು ಅಧಿಕೃತ ಜ್ಞಾಪನ ಪತ್ರ ಸಂ: 623820 ದಿನಾಂಕ: 03–04–2024 ರಲ್ಲಿ ವಸತಿ ಉದ್ದೇಶಕ್ಕೆ ಭೂ–ಪರಿವರ್ತಿಸಿ ಆದೇಶಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಾಣಿಜ್ಯ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಜಮೀನು ಉತ್ತರ ದಿಕ್ಕಿನಲ್ಲಿ ರಾಷ್ಟ್ರೀಯ ಹೆದ್ದಾರಿ 275ಕ್ಕೆ ಲಗತ್ತಾಗಿದ್ದು, ರಸ್ತೆ ಮಧ್ಯಭಾಗದಿಂದ 21.0ಮೀ ಅಗಲದ ಕಟ್ಟಡ ರೇಖೆಯನ್ನು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾವಿಸಲಾಗಿದೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಇ.ಸಿ. ಪ್ರತಿ, ಕ್ರಯಪತ್ರ, ಇತ್ತೀಚಿನ ಆರ್.ಟಿ.ಸಿ, 11ಇ ನಕ್ಷೆ, ಆಧಾರ್‌ಕಾರ್ಡ್, ಮ್ಯುಟೇಷನ್ ಪ್ರತಿ, ಅಫಿಡೆವಿಟ್ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಾಣಿಜ್ಯ ಉಪಯೋಗಕ್ಕಾಗಿ 229.60 ಚ.ಮೀ (ಶೇ. 68.78%), ಉದ್ಯಾನವನಕ್ಕಾಗಿ 33.80 ಚ.ಮೀ (ಶೇ. 10.12%), ವಾಹನ ನಿಲುಗಡೆಗಾಗಿ 16.90 ಚ.ಮೀ (ಶೇ. 5.06%) ಮತ್ತು ರಸ್ತೆಗಾಗಿ 53.50 ಚ.ಮೀ (ಶೇ. 16.04) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಬೈಚನಹಳ್ಳಿ ಗ್ರಾಮದ ಸ.ನಂ. 51/11 ರಲ್ಲಿ 0.08.25 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ (ಚಿಲ್ಲರೆ ಮಾರಾಟ ಮಳಿಗೆ) ಉದ್ದೇಶದ ವಿನ್ಯಾಸ ನಕ್ಷೆಗೆ ದಿನಾಂಕ: 06–06–2024 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

iv. ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಗುಮ್ಮನಕೊಲ್ಲಿ ಗ್ರಾಮದ ಸ.ನಂ. 5/10 ರಲ್ಲಿ 0.10 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಸಿ.ಎಂ. ಗಣಿಪ್ರಸಾದ್**).

ಟಿಪ್ಪಣಿ: ಸದರಿ ಜಮೀನಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ:

ಭೂಪರಿವರ್ತನೆ ಆದೇಶದ ವಿವರ: ಪ್ರಶ್ನಿತ ಜಮೀನನ್ನು ಉಪವಿಭಾಗಾಧಿಕಾರಿಗಳು, ಮಡಿಕೇರಿ ಉಪವಿಭಾಗ, ಕೊಡಗು ಜಿಲ್ಲೆ ಇವರ ಆದೇಶ ಸಂಖ್ಯೆ: ಪರಿವರ್ತನೆ 38:03–04 ದಿನಾಂಕ:28–06–2003 ರಂದು ಮನೆದಳ ಉದ್ದೇಶಕ್ಕೆ ಭೂಪರಿವರ್ತಿಸಿ ಆದೇಶಿಸಿರುತ್ತಾರೆ. ನಂತರ ಮಾನ್ಯ ಜಿಲ್ಲಾಧಿಕಾರಿಗಳು ಪತ್ರ ಸಂಖ್ಯೆ: LCRE10000597 ದಿನಾಂಕ: 26–10–2021 ರಂದು ಸದರಿ ಜಮೀನಿಗೆ ತಿದ್ದುಪಡಿ ಆದೇಶವನ್ನು ಹೊರಡಿಸಿರುತ್ತಾರೆ.

ಮಹಾಯೋಜನೆಯನ್ವಯ ಜಮೀನಿನ ಭೂಉಪಯೋಗ: ಪ್ರಶ್ನಿತ ಜಮೀನು ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆ–2031 ರಂತೆ ವಸತಿ ವಲಯದಲ್ಲಿದೆ.

ರಸ್ತೆ ಸಂಪರ್ಕ: ಪ್ರಸ್ತಾವಿತ ಜಮೀನು ಪಶ್ಚಿಮ ದಿಕ್ಕಿನಲ್ಲಿ 4.00ಮೀ ಅಗಲದ ಕಾಂಕ್ರೀಟ್ ರಸ್ತೆಯಿಂದ ಸಂಪರ್ಕ ಹೊಂದಿದ್ದು, 9.00ಮೀ ಅಗಲಕ್ಕೆ ವಿಸ್ತರಿಸಲು ವಿನ್ಯಾಸ ನಕ್ಷೆಯಲ್ಲಿ ಪ್ರಸ್ತಾಪಿಸಲಾಗಿದೆ. ಮುಖ್ಯಾಧಿಕಾರಿ, ಪುರಸಭೆ, ಕುಶಾಲನಗರ ಇವರ ಪತ್ರ ಸಂಖ್ಯೆ: ಪು.ಕು/ /2023–24 ದಿನಾಂಕ: 24–06–2024 ರಲ್ಲಿ ಸದರಿ ಜಾಗಕ್ಕೆ ರಸ್ತೆ ಸಂಪರ್ಕ ಇರುತ್ತದೆ ಎಂಬುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳು: ಅರ್ಜಿದಾರರು ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆ, ಮ್ಯುಟೇಷನ್ ಪ್ರತಿ, ಉತಾರು ನಕ್ಷೆ, ಆರ್.ಟಿ.ಸಿ, ಆಕಾರ್‌ಬಂದ್ (ಉತಾರು), ಸಾಗುವಳಿ ಚೀಟಿ ಕೊಡುವ ಬಗೆಗಿನ ಪ್ರಮಾಣ ಪತ್ರ, ಇ.ಸಿ. ಪ್ರತಿ, ನಮೂನೆ 12 Discharge Deed KUS-1-00006-2024-25, ಆಧಾರ್‌ಕಾರ್ಡ್, ಅಫಿಡೆವಿಟ್ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ.

ಏಕ–ನಿವೇಶನ ನಕ್ಷೆ ಅನುಮೋದನೆ: ಪ್ರಶ್ನಿತ ಜಮೀನಿನ ಸ್ಥಳಪರಿಶೀಲನೆ ನಡೆಸಲಾಗಿದೆ. ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರುವ ಸರ್ವೆ ನಕ್ಷೆಯಂತೆ ವಿನ್ಯಾಸದಲ್ಲಿ ಎಲ್ಲೆ/ಸುತ್ತಳತೆಯನ್ನು ನಿಗಧಿಪಡಿಸಿ ವಿನ್ಯಾಸ ನಕ್ಷೆಯನ್ನು ಸಿದ್ಧಪಡಿಸಿದ್ದು, ವಸತಿ ಉಪಯೋಗಕ್ಕಾಗಿ 404.52 ಚ.ಮೀ (ಶೇ. 100.0%) ವಿಸ್ತೀರ್ಣದ ಪ್ರದೇಶವನ್ನು ಕಾಯ್ದಿರಿಸಿ ದಿನಾಂಕ:17–03–2020 ರಂದು ನಡೆದ ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ, ಮಹಾಯೋಜನೆ–2031 ರ ವಲಯ ನಿಯಮಾವಳಿಯ ಅಧ್ಯಾಯ 34(ಬಿ) ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 17 ರನ್ವಯ ಗುಮ್ಮನಕೊಲ್ಲಿ ಗ್ರಾಮದ ಸ.ನಂ. 5/10 ರಲ್ಲಿ 0.10 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ದಿನಾಂಕ:29–06–2024 ರಂದು ತಾಂತ್ರಿಕ ಅನುಮೋದನೆಯನ್ನು ನೀಡಲಾಗಿದ್ದು, ಸಭೆಯ ಸ್ಥಿರೀಕರಣಕ್ಕಾಗಿ ಪ್ರಾಧಿಕಾರದ ಸಭೆಗೆ ಮಂಡಿಸಿದೆ.

ನಿರ್ಣಯ: ಪ್ರಾಧಿಕಾರದ 40ನೇ ಸಾಮಾನ್ಯ ಸಭೆಯ ವಿಷಯ ಸಂಖ್ಯೆ(16)ರ ನಿರ್ಣಯದಂತೆ ಮೇಲ್ಕಾಣಿಸಿದ ಏಕ ನಿವೇಶನದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಈಗಾಗಲೇ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡಿರುವುದನ್ನು ಸಭೆಯು ಸರ್ವಾನುಮತದಿಂದ ಒಪ್ಪಿ ಸ್ಥಿರೀಕರಿಸಲಾಯಿತು.

ವಿಷಯಸಂಖ್ಯೆ(12): ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ಹೆಚ್ಚುವರಿ ವಿಷಯಗಳು:

(ಅ): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಕೂಡ್ಲೂರು ಗ್ರಾಮದ ಸ.ನಂ. 3/16 ರಲ್ಲಿ 3.00 ಎಕರೆ ಮತ್ತು ಸ.ನಂ. 3/17 ರಲ್ಲಿ 2.85 ಎಕರೆ ಒಟ್ಟು 5.85 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವಂತೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ **(ಅರ್ಜಿದಾರರು:–ಶ್ರೀಮತಿ ಸುಬ್ಬಮ್ಮ ಮತ್ತು ಶ್ರೀಮತಿ ಲಲಿತ)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪ್ರಶ್ನಿತ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಪ್ರಾಧಿಕಾರದ 60ನೇ ಸಭೆಯ ವಿಷಯಸಂಖ್ಯೆ(6) ರಲ್ಲಿ ಮಂಡಿಸಿ ಚರ್ಚಿಸಲಾಗಿದ್ದು, ವಿನ್ಯಾಸ ನಕ್ಷೆಯಲ್ಲಿ ಪಶ್ಚಿಮ ದಿಕ್ಕಿನಲ್ಲಿರುವ ರಸ್ತೆಯನ್ನು ಸ್ಥಳದಲ್ಲಿ 9.0ಮೀ ಬದಲು ಕೇವಲ 6.0ಮೀ ಅಗಲಕ್ಕೆ ಅಭಿವೃದ್ಧಿಪಡಿಸಿರುವುದರಿಂದ ಮತ್ತು ಸದರಿ ಜಮೀನಿನ ಭೂಪರಿವರ್ತನೆ ಸಂದರ್ಭದಲ್ಲಿ ಜಮೀನಿನಲ್ಲಿ ಈಗಾಗಲೇ ಕಟ್ಟಡ ನಿರ್ಮಿಸಿರುವುದಕ್ಕೆ ಯಾವುದೇ ದಂಡ ಪಾವತಿಸದೇ ಇರುವುದರಿಂದ, ಭೂಪರಿವರ್ತನೆ ನಂತರ ಅನುಮತಿ ಪಡೆಯದೇ ನಿವೇಶನ ಸಂಖ್ಯೆ 55, 56 ಮತ್ತು 57 ರಲ್ಲಿ ಕಟ್ಟಡಗಳನ್ನು ನಿರ್ಮಿಸಿರುವುದರಿಂದ ಇಂತಹ ಸಂದರ್ಭದಲ್ಲಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವುದು ಸೂಕ್ತವಾಗಿರುವುದಿಲ್ಲವೆಂದು ಅಭಿಪ್ರಾಯಿಸಿ ಪ್ರಸ್ತಾವನೆಯನ್ನು ತಿರಸ್ಕರಿಸಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಗಿತ್ತು.

ದಿನಾಂಕ: 27–06–2024 ರಂದು ಜಮೀನಿನ ಮಾಲೀಕರು ಮನವಿ ಸಲ್ಲಿಸಿ, ಮರುಪರಿಶೀಲನೆ ಮಾಡಿ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ದಿನಾಂಕ: 16–07–2024 ರಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಕೂಡುಮಂಗಳೂರು ಗ್ರಾಮಪಂಚಾಯಿತಿ ಇವರು ಅರ್ಜಿದಾರರ ಕೋರಿಕೆಯಂತೆ ಈ ಕಛೇರಿಗೆ ಪ್ರಸ್ತಾವನೆ ಸಲ್ಲಿಸಿ, ಪರಿಷ್ಕೃತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

ಚರ್ಚೆ: ಸಭೆಯಲ್ಲಿ ಅಧ್ಯಕ್ಷರು ವಿನ್ಯಾಸ ನಕ್ಷೆ ಅನುಮೋದನೆ ಸಂದರ್ಭದಲ್ಲಿ ಸ್ಥಳದಲ್ಲಿ ಕಟ್ಟಡವಿದ್ದಲ್ಲಿ ದಂಡಪಾವತಿಸಿಕೊಳ್ಳುವ ಅವಕಾಶವಿದೆಯೇ ಎಂದು ಸದಸ್ಯಕಾರ್ಯದರ್ಶಿಗಳನ್ನು ಪ್ರಶ್ನಿಸಿದಾಗ ಯಾವುದೇ ಅವಕಾಶವಿರುವುದಿಲ್ಲವೆಂದು ತಿಳಿಸಿದರು. ಮುಖ್ಯಾಧಿಕಾರಿಗಳು ಅಂತಹ ಕಟ್ಟಡಗಳಿಗೆ ಸೆಕ್ಷನ್ 107 ಪ್ರಕಾರ ದುಪ್ಪಟ್ಟು ತೆರಿಗೆಯನ್ನು ವಿಧಿಸಬಹುದಾಗಿರುತ್ತದೆ ಹಾಗೂ ಅಕ್ರಮ ಸಕ್ರಮ ಯೋಜನೆಯಡಿ ಕ್ರಮವಹಿಸಬೇಕಾಗುತ್ತದೆ ಎಂದು ಅಭಿಪ್ರಾಯ ತಿಳಿಸಿದರು. ಅಧ್ಯಕ್ಷರು ಹಾಗೂ ಸದಸ್ಯರುಗಳು ಸದರಿ ಪ್ರಸ್ತಾವನೆಯನ್ನು ಪರಿಗಣಿಸಲು ಅಭಿಪ್ರಾಯಿಸಿ, 6.00ಮೀ ಅಗಲದ ರಸ್ತೆ ಹಾಗೂ ಈಗಾಗಲೇ ಕಟ್ಟಡ ನಿರ್ಮಿಸಿರುವ ನಿವೇಶನ ಸಂಖ್ಯೆ 55, 56 ಮತ್ತು 57 ಗಳನ್ನು ಹೊರತುಪಡಿಸಿ ಉಳಿಕೆ ಜಮೀನಿಗೆ ಮಾರ್ಪಡಿತ ವಿನ್ಯಾಸ ನಕ್ಷೆಯನ್ನು ಅರ್ಜಿದಾರರಿಂದ ಪಡೆದು ಅನುಮೋದನೆ ನೀಡುವಂತೆ ಸದಸ್ಯಕಾರ್ಯದರ್ಶಿಗಳಿಗೆ ಸೂಚಿಸಿದರು. ಸದಸ್ಯಕಾರ್ಯದರ್ಶಿಗಳು ಒತ್ತುವರಿ ಜಮೀನನ್ನು ಹಾಗೂ ಕಟ್ಟಡ ನಿರ್ಮಿಸಿರುವ ನಿವೇಶನಗಳನ್ನು ಬಿಟ್ಟು ಉಳಿಕೆ ಜಮೀನಿಗೆ ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ

ಸರ್ವೆ ನಕ್ಷೆಯನ್ನು ಮಾಡಿಸಿ ಸಲ್ಲಿಸಿದಲ್ಲಿ ಅದರಂತೆ ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ತಿಳಿಸಿದರು.

ನಿರ್ಣಯ: ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಸದರಿ ಜಮೀನಿನಲ್ಲಿ ಕಟ್ಟಡ ನಿರ್ಮಿಸಿರುವ ನಿವೇಶನಗಳನ್ನು ಮತ್ತು ಒತ್ತುವರಿ ಜಮೀನನ್ನು ಹೊರತುಪಡಿಸಿ, ಉಳಿಕೆ ಜಮೀನಿಗೆ ಭೂದಾಖಲೆಗಳ ಸಹಾಯಕ ನಿರ್ದೇಶಕರಿಂದ ಸರ್ವೆ ನಕ್ಷೆಯನ್ನು ಮಾಡಿಸಿ ಸಲ್ಲಿಸಿದಲ್ಲಿ, ಅದರಂತೆ ಮಾರ್ಪಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿ ತದನಂತರ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(ಆ): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 19/7 ರಲ್ಲಿ 0.90 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ **(ಅರ್ಜಿದಾರರು: ಶ್ರೀ ಪಿ.ಎಂ. ಕವಿತ)**

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪ್ರಶ್ನಿತ ಜಮೀನಿನ ವಾಣಿಜ್ಯ ಉದ್ದೇಶದ ಏಕ–ನಿವೇಶನ ನಕ್ಷೆಗೆ ಅನುಮೋದನೆ ನೀಡುವಂತೆ ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ ಇವರು ಪ್ರಸ್ತಾವನೆಯನ್ನು ದಿನಾಂಕ:10–07–2024 ರಂದು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಅರ್ಜಿದಾರರು 11ಈ ನಕ್ಷೆ, ಕ್ರಯಪತ್ರ, ನಮೂನೆ 16, MR, ಭೂಪರಿವರ್ತನೆ ಆದೇಶ ಪ್ರತಿಗಳೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರಿಗೆ ದಿನಾಂಕ: 19–07–2024 ರಂದು ಹಿಂಬರಹ ನೀಡಿ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸುವಂತೆ ತಿಳಿಸಲಾಗಿದೆ.

1. ಉಲ್ಲೇಖ(4) ರಂತೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆಯಲ್ಲಿ ಪ್ರಶ್ನಿತ ಜಮೀನನ್ನು ಸಾರ್ವಜನಿಕ/ಅರೆಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿರುವುದರಿಂದ ಸದರಿ ಭೂಪರಿವರ್ತನೆ ಆದೇಶವನ್ನು ವಾಣಿಜ್ಯ ಉದ್ದೇಶದಿಂದ ಸಾರ್ವಜನಿಕ ಮತ್ತು ಅರೆಸಾರ್ವಜನಿಕ (ಶೈಕ್ಷಣಿಕ) ಉದ್ದೇಶಕ್ಕೆ ಬದಲಾವಣೆ ಮಾಡಿ, ಮಾನ್ಯ ಜಿಲ್ಲಾಧಿಕಾರಿಗಳಿಂದ ಹೊಸದಾಗಿ ಭೂಪರಿವರ್ತನೆ ಆದೇಶವನ್ನು ಪಡೆಯುವುದು. (ಜಮೀನಿನಲ್ಲಿ ಕಟ್ಟಡಗಳಿದ್ದರೆ ದಂಡಪಾವತಿಸುವುದು).
2. ಸರ್ವೆ ನಕ್ಷೆ (ಸ.ನಂ. 19/7 ಹಾಗೂ ಸ.ನಂ. 19/9 ಎರಡು ಜಮೀನುಗಳನ್ನು ಒಳಗೊಂಡಂತೆ ಮತ್ತು ಸದರಿ ಜಮೀನುಗಳ ಭೂಪರಿವರ್ತನೆ ಆದೇಶವನ್ನು ನಮೂದಿಸಿ, ಪರವಾನಿಗೆ ಭೂಮಾಪಕರು ತಯಾರಿಸಿದ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರಬೇಕು, ಜಮೀನಿನ ಸುತ್ತಳತೆ, ವಿಸ್ತೀರ್ಣ, ಚೆಕ್ಕುಬಂದಿ, **ಬಫರ್, ಖರಾಬು** (ಹಳ್ಳ/ಕಾಲುವೆ/ಕಾಲುದಾರಿ/ ಬಂಡಿದಾರಿ), ಕೆರೆ, ಸರ್ಕಾರಿ ಜಮೀನು ಹಾಗೂ ಸಾರ್ವಜನಿಕ ರಸ್ತೆ ಸಂಪರ್ಕ ಇತ್ಯಾದಿ ಎಲ್ಲಾ ಅಳತೆಗಳನ್ನು ನಮೂದಿಸಿರಬೇಕು).
3. MR T 60/2010-11 ದಿನಾಂಕ: 29-06-2011
4. ಉಲ್ಲೇಖ(2) ರಂತೆ ಸ.ನಂ. 19/7 ರ 2.90 ಎಕರೆ ಪೈಕಿ 0.90 ಎಕರೆ ಜಮೀನು ಭೂಪರಿವರ್ತನೆಗೊಂಡಿದ್ದು, ಸದರಿ ಸರ್ವೆ ನಂಬರ್ ಪೋಡಿಗಳು ಆಗಿರುವ ಬಗ್ಗೆ ಸಂಬಂಧಪಟ್ಟ ಮ್ಯುಟೇಷನ್ ಪ್ರತಿಗಳನ್ನು ಸಲ್ಲಿಸುವುದು.
5. ಇ.ಸಿ. ಪ್ರತಿ (2004 ರಿಂದ ಇಲ್ಲಿಯವರೆಗೆ).
6. ಅಲಿನೇಷನ್ ನಕ್ಷೆ
7. ಅಫಿಡೆವಿಟ್
8. SMP 102496-2013-14 ರ ಹಕ್ಕು ಬಿಡುಗಡೆ ಪತ್ರ
9. ಕರಡು ವಿನ್ಯಾಸ ನಕ್ಷೆ ಮತ್ತು ಸಾಫ್
10. ಕಟ್ಟಡ ತೆರವುಗೊಳಿಸುವ ದೃಢೀಕರಣ ಪತ್ರ (Demolition Certificate)

ಸದಸ್ಯಕಾರ್ಯದರ್ಶಿಗಳು ಸರ್ಕಾರದ ಸುತ್ತೋಲೆ ಸಂಖ್ಯೆ: ನಇ 237 ಬೆಮಪ್ರಾ 2009 ದಿನಾಂಕ: 19–09–2009 ರನ್ನು ಸಭೆಗೆ ಹಾಜರುಪಡಿಸುತ್ತಾರೆ. ಅದರಲ್ಲಿ ಕಟ್ಟಡಗಳನ್ನು ನಿರ್ಮಿಸುವ ಮೊದಲು ಕನಿಷ್ಟ 15 ದಿನಗಳ ಕಲಾವಕಾಶ ನೀಡಿ ಸ್ಥಳೀಯ ಎರಡು ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ ಸಾರ್ವಜನಿಕರಿಂದ ಸ್ವೀಕರಿಸಿದ ಪ್ರತಿಕ್ರಿಯೆಯೊಂದಿಗೆ ಪ್ರಾಧಿಕಾರದ ಸಭೆಯಲ್ಲಿ ಪ್ರಸ್ತಾವನೆ ಇರಿಸಿ, ಸಭೆಯಲ್ಲಿ ಕೈಗೊಳ್ಳುವ ನಿರ್ಣಯಕ್ಕೆ ಅನುಗುಣವಾಗಿ ಕ್ರಮಜರುಗಿಸಬೇಕಾಗಿರುತ್ತದೆ.

ಚರ್ಚೆ: ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸದಸ್ಯಕಾರ್ಯದರ್ಶಿಗಳು ಸಭೆಯಲ್ಲಿ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ವಿವರಣೆ ನೀಡಿದರು. ಸದರಿ ಜಮೀನಿನ ಸ್ಥಳಪರಿಶೀಲನೆಯನ್ನು ಮಾಡಲಾಗಿರುತ್ತದೆ; ಜಮೀನಿಗೆ ನೇರ ರಸ್ತೆ ಸಂಪರ್ಕ ಇರುವುದಿಲ್ಲ. ಬದಲಾಗಿ, ಸದರಿ ಜಮೀನಿನ ಪೂರ್ವದಿಕ್ಕಿನಲ್ಲಿ ಸರ್ವೆ ನಂಬರ್ 19/7ರ ಉಳಿಕೆ ಜಮೀನಿದ್ದು, ಈ ಉಳಿಕೆ ಜಮೀನು ಪಡೆದಿರುವ ಹಾಲಿ ಅಂದಾಜು 6ಮೀ ಅಗಲದ ರಸ್ತೆಯ ಮುಖಾಂತರ ಸಂಪರ್ಕ ಪಡೆಯಬಹುದಾಗಿರುತ್ತದೆ. ಉಳಿಕೆ ಜಮೀನು ಕೃಷಿ ಜಮೀನಾಗಿದ್ದು ಭೂಪರಿವರ್ತನೆಗೊಂಡಿರುವುದಿಲ್ಲ. ಮಹಾಯೋಜನೆಯನ್ವಯ ಈ ಉಳಿಕೆ ಜಮೀನನ್ನು ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಉದ್ದೇಶಕ್ಕೆ ಭೂಪರಿವರ್ತಿಸಿಕೊಂಡ ನಂತರ ಇದರ ಮೂಲಕ ಪ್ರಸ್ತಾಪಿತ ಜಮೀನಿಗೆ ನಕಾಶೆಯಲ್ಲಿ 12 ಮೀ. ರಸ್ತೆಗಾಗಿ ಜಾಗವನ್ನು ಕಾಯ್ದಿರಿಸಿಕೊಂಡು ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ, ಪರಿಗಣಿಸಬಹುದಾಗಿರುತ್ತದೆ. ಸದರಿ ಜಮೀನಿಗೆ ನೇರ ರಸ್ತೆ ಸಂಪರ್ಕ ಇಲ್ಲದಿರುವ ಕಾರಣ, ಪ್ರಸ್ತುತ ಹಂತದಲ್ಲಿ ತಿರಸ್ಕರಿಸುವುದು ಸೂಕ್ತವಾಗಿರುತ್ತದೆ ಎಂದು ತಿಳಿಸಿದರು

ನಿರ್ಣಯ: ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಅರ್ಜಿದಾರರು ಟಿಪ್ಪಣಿಯಲ್ಲಿ ವಿವರಿಸಿರುವ ದಾಖಲಾತಿಗಳನ್ನು ಸಲ್ಲಿಸಿದ ನಂತರ ಪರಿಶೀಲಿಸಿ ದಾಖಲಾತಿಗಳು ಸರಿಯಾಗಿದ್ದಲ್ಲಿ ಮತ್ತು ಪ್ರಶ್ನಿತ ಜಮೀನಿಗೆ ಸಂಪರ್ಕ ರಸ್ತೆ ಇದ್ದಲ್ಲಿ ನಿಯಮಾನುಸಾರ ಸದರಿ ಜಮೀನಿಗೆ ವಾಣಿಜ್ಯ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(ಇ): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 19/9 ರಲ್ಲಿ 0.70 ಎಕರೆ ವಿಸ್ತೀರ್ಣದ ಜಮೀನಿನ ವಾಣಿಜ್ಯ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ (**ಅರ್ಜಿದಾರರು: ಶ್ರೀ ಪಿ.ಎಂ. ಮೋಹನ್**)

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪ್ರಶ್ನಿತ ಜಮೀನಿನ ವಾಣಿಜ್ಯ ಉದ್ದೇಶದ ಏಕ–ನಿವೇಶನ ನಕ್ಷೆಗೆ ಅನುಮೋದನೆ ನೀಡುವಂತೆ ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ ಇವರು ಪ್ರಸ್ತಾವನೆಯನ್ನು ದಿನಾಂಕ: 10–07–2024 ರಂದು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಅರ್ಜಿದಾರರಿಗೆ ದಿನಾಂಕ:19–07–2024 ರಂದು ಹಿಂಬರಹ ನೀಡಿ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸುವಂತೆ ತಿಳಿಸಲಾಗಿದೆ.

1. ಉಲ್ಲೇಖ(4) ರಂತೆ ಸರ್ಕಾರದಿಂದ ಅನುಮೋದನೆಗೊಂಡ ಮಹಾಯೋಜನೆಯಲ್ಲಿ ಪ್ರಶ್ನಿತ ಜಮೀನನ್ನು ಸಾರ್ವಜನಿಕ/ಅರೆಸಾರ್ವಜನಿಕ ಉದ್ದೇಶಕ್ಕೆ ಕಾಯ್ದಿರಿಸಿರುವುದರಿಂದ ಸದರಿ ಭೂಪರಿವರ್ತನೆ ಆದೇಶವನ್ನು ವಾಣಿಜ್ಯ ಉದ್ದೇಶದಿಂದ ಸಾರ್ವಜನಿಕ ಮತ್ತು ಅರೆಸಾರ್ವಜನಿಕ (ಶೈಕ್ಷಣಿಕ) ಉದ್ದೇಶಕ್ಕೆ ಬದಲಾವಣೆ ಮಾಡಿ, ಮಾನ್ಯ ಜಿಲ್ಲಾಧಿಕಾರಿಗಳಿಂದ ಹೊಸದಾಗಿ ಭೂಪರಿವರ್ತನೆ ಆದೇಶವನ್ನು ಪಡೆಯುವುದು. (ಜಮೀನಿನಲ್ಲಿ ಕಟ್ಟಡಗಳಿದ್ದರೆ ದಂಡಪಾವತಿಸುವುದು).
2. ಉಲ್ಲೇಖ(2) ರಂತೆ ಸ.ನಂ. 19/5 ರ 3.23 ಎಕರೆ ಪೈಕಿ 0.70 ಎಕರೆ ಜಮೀನು ಭೂಪರಿವರ್ತನೆಗೊಂಡಿದ್ದು, ಪ್ರಸ್ತಾವನೆಯನ್ನು 19/9 ರಲ್ಲಿ 0.70 ಎಕರೆಗೆ ಸಲ್ಲಿಸಿರುವುದರಿಂದ, ಸದರಿ ಸರ್ವೆ ನಂಬರ್ ಪೋಡಿಗಳು ಆಗಿರುವ ಬಗ್ಗೆ ಸಂಬಂಧಪಟ್ಟ ಮ್ಯುಟೇಷನ್ ಪ್ರತಿಗಳನ್ನು ಸಲ್ಲಿಸುವುದು.
3. ಸರ್ವೆ ನಕ್ಷೆ (ಸ.ನಂ. 19/9 ಹಾಗೂ ಸ.ನಂ. 19/7 ಎರಡು ಜಮೀನುಗಳನ್ನು ಒಳಗೊಂಡಂತೆ ಮತ್ತು ಸದರಿ ಜಮೀನುಗಳ ಭೂಪರಿವರ್ತನೆ ಆದೇಶವನ್ನು ನಮೂದಿಸಿ, ಪರವಾನಿಗೆ ಭೂಮಾಪಕರು ತಯಾರಿಸಿದ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರಬೇಕು, ಜಮೀನಿನ ಸುತ್ತಳತೆ, ವಿಸ್ತೀರ್ಣ, ಚೆಕ್ಕುಬಂದಿ, **ಬಫರ್, ಖರಾಬು** (ಹಳ್ಳ/ಕಾಲುವೆ/ಕಾಲುದಾರಿ/ ಬಂಡಿದಾರಿ), ಕೆರೆ, ಸರ್ಕಾರಿ ಜಮೀನು ಹಾಗೂ ಸಾರ್ವಜನಿಕ ರಸ್ತೆ ಸಂಪರ್ಕ ಇತ್ಯಾದಿ ಎಲ್ಲಾ ಅಳತೆಗಳನ್ನು ನಮೂದಿಸಿರಬೇಕು).
4. ಅಲಿನೇಷನ್ ನಕ್ಷೆ/11ಇ ನಕ್ಷೆ
5. ಅಫಿಡೆವಿಟ್

6. ಕರಡು ವಿನ್ಯಾಸ ನಕ್ಷೆ ಮತ್ತು ಸಾಫ್ಟ್ ಕಾಪಿ
7. ಕಟ್ಟಡ ತೆರವುಗೊಳಿಸುವ ದೃಢೀಕರಣ ಪತ್ರ (Demolition Certificate)

ಚರ್ಚೆ: ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಸದಸ್ಯಕಾರ್ಯದರ್ಶಿಗಳು ಸಭೆಯಲ್ಲಿ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ವಿವರಣೆ ನೀಡಿದರು. ಸದರಿ ಜಮೀನಿನ ಸ್ಥಳಪರಿಶೀಲನೆಯನ್ನು ಮಾಡಲಾಗಿರುತ್ತದೆ; ಜಮೀನಿಗೆ ನೇರ ರಸ್ತೆ ಸಂಪರ್ಕ ಇರುವುದಿಲ್ಲ. ಬದಲಾಗಿ, ಸದರಿ ಜಮೀನಿನ ಪೂರ್ವದಿಕ್ಕಿನಲ್ಲಿ ಸರ್ವೆ ನಂಬರ್ 19/7ರ ಜಮೀನಿದ್ದು, 19/7ರ ಜಮೀನು, 19/7ರ ಉಳಿಕೆ ಜಮೀನು ಪಡೆದಿರುವ ಹಾಲಿ ಅಂದಾಜು 6ಮೀ ಅಗಲದ ರಸ್ತೆಯ ಮುಖಾಂತರ ಸಂಪರ್ಕ ಪಡೆಯಬಹುದಾಗಿರುತ್ತದೆ. ಉಳಿಕೆ ಜಮೀನು ಕೃಷಿ ಜಮೀನಾಗಿದ್ದು ಭೂಪರಿವರ್ತನೆಗೊಂಡಿರುವುದಿಲ್ಲ. ಮಹಾಯೋಜನೆಯನ್ವಯ ಈ ಉಳಿಕೆ ಜಮೀನನ್ನು ಸಾರ್ವಜನಿಕ ಮತ್ತು ಅರೆಸಾರ್ವಜನಿಕ ಉದ್ದೇಶಕ್ಕೆ ಭೂಪರಿವರ್ತಿಸಿಕೊಂಡ ನಂತರ ಇದರ ಮೂಲಕ ಪ್ರಸ್ತಾಪಿತ ಜಮೀನಿಗೆ ನಕಾಶೆಯಲ್ಲಿ 12 ಮೀ. ರಸ್ತೆಗಾಗಿ ಜಾಗವನ್ನು ಕಾಯ್ದಿರಿಸಿಕೊಂಡು ಪ್ರಸ್ತಾವನೆಯನ್ನು ಸಲ್ಲಿಸಿದ್ದಲ್ಲಿ, ಪರಿಗಣಿಸಬಹುದಾಗಿರುತ್ತದೆ. ಸದರಿ ಜಮೀನಿಗೆ ನೇರ ರಸ್ತೆ ಸಂಪರ್ಕ ಇಲ್ಲದಿರುವ ಕಾರಣ, ಪ್ರಸ್ತುತ ಹಂತದಲ್ಲಿ ತಿರಸ್ಕರಿಸುವುದು ಸೂಕ್ತವಾಗಿರುತ್ತದೆ ಎಂದು ತಿಳಿಸಿದರು.

ನಿರ್ಣಯ: ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಅರ್ಜಿದಾರರು ಟಿಪ್ಪಟಿಯಲ್ಲಿ ವಿವರಿಸಿರುವ ದಾಖಲಾತಿಗಳನ್ನು ಸಲ್ಲಿಸಿದ ನಂತರ ಪರಿಶೀಲಿಸಿ ದಾಖಲಾತಿಗಳು ಸರಿಯಾಗಿದ್ದಲ್ಲಿ, ಪ್ರಶ್ನಿತ ಜಮೀನಿಗೆ ಸಂಪರ್ಕ ರಸ್ತೆ ಇದ್ದಲ್ಲಿ ನಿಯಮಾನುಸಾರ ಸದರಿ ಜಮೀನಿಗೆ ವಾಣಿಜ್ಯ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(ಊ): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮಾದಾಪಟ್ಟಣ ಗ್ರಾಮದ ಸ.ನಂ. 84/2 ರಲ್ಲಿ 0.26 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಏಕ–ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ಕೋರಿರುವ ಬಗ್ಗೆ (**ಅರ್ಜಿದಾರರು: ಶ್ರೀ ಪಿ.ಎಂ. ಮೋಹನ್**)

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪ್ರಶ್ನಿತ ಜಮೀನಿನ ವಸತಿ ಉದ್ದೇಶದ ಏಕ–ನಿವೇಶನ ನಕ್ಷೆಗೆ ಅನುಮೋದನೆ ನೀಡುವಂತೆ ಮುಖ್ಯಾಧಿಕಾರಿಗಳು, ಪುರಸಭೆ, ಕುಶಾಲನಗರ ಇವರು ಪ್ರಸ್ತಾವನೆಯನ್ನು ದಿನಾಂಕ: 10–07–2024 ರಂದು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ದಿನಾಂಕ:29–03–200ರ ಕ್ರಯಪತ್ರದಲ್ಲಿ ಸ.ನಂ. 84 ರ 1.4 ಎಕರೆ ವಿಸ್ತೀರ್ಣದ ಜಮೀನನ್ನು ಶ್ರೀಮತಿ ಪುಟ್ಟಮ್ಮ, ಬಿ.ಎಸ್. ಲೋಕೇಶ್ ಹಾಗೂ ಬಿ.ಎಸ್. ರಾಮೇಗೌಡರವರು ಪಿ.ಎಂ. ಮೋಹನ್ ರವರಿಗೆ ಬರೆದುಕೊಟ್ಟಿರುತ್ತಾರೆ. ದಿನಾಂಕ:20–12–2001 ರ ಕ್ರಯಪತ್ರದಲ್ಲಿ ಸ.ನಂ. 84 ರ $\frac{3.50}{7.0}$ ಎಕರೆ ಸಾಗು ಖುಷ್ಕಿ ಜಮೀನಿನ ಪೈಕಿ ಉಳಿಕೆ ಏರಿಯಾ $\frac{2.10}{3.5}$ ಎಕರೆಯಿಂದ 0.26 ಎಕರೆ ವಿಸ್ತೀರ್ಣದ ಜಮೀನನ್ನು ಬಿ.ಎಸ್. ಲೋಕೇಶ್, ಪ್ರಮೇಖ ಇವರು ಪಿ.ಎಂ. ಮೋಹನ್ ರವರಿಗೆ ಕ್ರಯಮಾಡಿರುತ್ತಾರೆ. ದಿನಾಂಕ:28–08–1999 ರಂದು ಸ.ನಂ. 84 ರ $\frac{6.74}{0.26}$ ಎಕರೆ ಪೈಕಿ 0.26 ಎಕರೆ ವಿಸ್ತೀರ್ಣದ ಜಮೀನನ್ನು ಬಿ.ಎಸ್. ಲೋಕೇಶ್ ಹಾಗೂ ಬಿ.ಎಸ್. ರಾಮೇಗೌಡ ಇವರು ಪಿ.ಎಂ. ಮೋಹನ್ ರವರಿಗೆ ಕ್ರಯಮಾಡಿರುತ್ತಾರೆ. ಈ ಮೂರು ಕ್ರಯಪತ್ರಗಳ ಪೈಕಿ ಎರಡು ಕ್ರಯಪತ್ರಗಳಲ್ಲಿ ಪ್ರಸ್ತಾಪಿತ 0.26 ಎಕರೆ ನಮೂದಿಸಿದ್ದು, ಭೂಪರಿವರ್ತನೆಗೊಂಡಿರುವ ವಿಸ್ತೀರ್ಣದ ಬಗ್ಗೆ ಸರಿಯಾದ ಮಾಹಿತಿ ಇರುವುದಿಲ್ಲ. ಇ.ಸಿ ಪ್ರತಿಯನ್ನು ದಿನಾಂಕ:01–04–2004 ರಿಂದ ಮಾತ್ರ ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ಪ್ರಸ್ತಾವನೆಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲಾತಿಗಳು ಅವಶ್ಯಕವಾಗಿರುತ್ತದೆ.

1. ಹಕ್ಕು ಬಿಡುಗಡೆ ಪತ್ರ (SMP 102497 2013-14)

2. ಇ.ಸಿ. ಪ್ರತಿ (ನಮೂನೆ–15 ದಿನಾಂಕ: 01–01–1999 ರಿಂದ 01–01–2004 ರವರೆಗೆ)
3. ಸರ್ವೆ ನಕ್ಷೆ (ಸರ್ವೆ ನಕ್ಷೆಯಲ್ಲಿ ಭೂಪರಿವರ್ತನೆಗೊಂಡ ವಿಸ್ತೀರ್ಣವನ್ನು ಗುರುತಿಸಿ, ಪರವಾನಿಗೆ ಭೂಮಾಪಕರು ತಯಾರಿಸಿದ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರು ದೃಢೀಕರಿಸಿರಬೇಕು, ಜಮೀನಿನ ಸುತ್ತಳತೆ, ವಿಸ್ತೀರ್ಣ, ಚೆಕ್ಕುಬಂದಿ, **ಬಫರ್, ಖರಾಬು** (ಹಳ್ಳ/ಕಾಲುವೆ/ಕಾಲುದಾರಿ/ ಬಂಡಿದಾರಿ), ಕೆರೆ, ಸರ್ಕಾರಿ ಜಮೀನು ಹಾಗೂ ಸಾರ್ವಜನಿಕ ರಸ್ತೆ ಸಂಪರ್ಕ ಇತ್ಯಾದಿ ಎಲ್ಲಾ ಅಳತೆಗಳನ್ನು ನಮೂದಿಸಿರಬೇಕು).
4. ಕರಡು ವಿನ್ಯಾಸ ನಕ್ಷೆ ಹಾಗೂ ಸಾಫ್ಟ್ ಕಾಪಿ.
5. ಅಫಿಡೆವಿಟ್
6. ಪಂಚಾಯಿತಿಯಿಂದ ಕಟ್ಟಡ ನಿರ್ಮಿಸಲು ಪಡೆದಿರುವ ಪ್ರಾರಂಭಿಕ ಪ್ರಮಾಣ ಪತ್ರ (ಭೂಪರಿವರ್ತನೆ ಆದೇಶದ ಷರತ್ತಿನ ಸಂಖ್ಯೆ (2) ರನ್ವಯ)
7. ಕಟ್ಟಡ ತೆರವುಗೊಳಿಸುವ ದೃಢೀಕರಣ ಪತ್ರ (Demolition Certificate)
8. ಅಲಿನೇಷನ್ ನಕ್ಷೆ/ 11ಇ ನಕ್ಷೆ
9. ಸದರಿ ಸರ್ವೆ ನಂಬರ್ ಪೋಡಿ ಆಗಿದ್ದಲ್ಲಿ ಸಂಬಂಧಪಟ್ಟ ಮ್ಯುಟೇಷನ್ ಪ್ರತಿ.

ನಿರ್ಣಯ: ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಟಿಪ್ಪಟಿಯಲ್ಲಿ ವಿವರಿಸಿರುವ ದಾಖಲಾತಿಗಳನ್ನು ಸಲ್ಲಿಸುವಂತೆ ಅರ್ಜಿದಾರರಿಗೆ ಹಿಂಬರಹ ನೀಡಿ, ಸದರಿ ದಾಖಲಾತಿಗಳನ್ನು ಅರ್ಜಿದಾರರು ಸಲ್ಲಿಸಿದ ನಂತರ ಪರಿಶೀಲಿಸಿ ಮುಂದಿನ ಕ್ರಮವಹಿಸುವಂತೆ ಸಭೆಯಲ್ಲಿ ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿ ನಿರ್ಣಯಿಸಲಾಯಿತು.

(ಊ): ಕುಶಾಲನಗರ ಸಂಚಾರಿ ಪೋಲೀಸ್ ಠಾಣೆಯ ನಿರ್ಮಾಣಕ್ಕಾಗಿ ಬದಲಿ ಜಾಗ ಮಂಜೂರು ಮಾಡುವಂತೆ ಕೋರಿರುವ ಬಗ್ಗೆ.

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪೋಲೀಸ್ ಅಧೀಕ್ಷಕರು, ಕೊಡಗು ಜಿಲ್ಲೆ, ಮಡಿಕೇರಿ ಇವರು ಮುಖ್ಯಾಧಿಕಾರಿಗಳು, ಪುರಸಭೆ ಇವರಿಗೆ ದಿನಾಂಕ: 28–05–2024 ರಂದು ಪತ್ರ ಬರೆದು, ಐ.ಡಿ.ಎಸ್.ಎಂ.ಟಿ ಯೋಜನೆಯಡಿ ಗುಂಡುರಾವ್ ಬಡಾವಣೆಯಲ್ಲಿ ಸಂಚಾರಿ ಪೋಲೀಸ್ ಠಾಣೆ ನಿರ್ಮಾಣಕ್ಕಾಗಿ 26.72 ಸೆಂಟ್ ಸಿ.ಎ. ನಿವೇಶನವನ್ನು ಪೋಲೀಸ್ ಅಧೀಕ್ಷಕರು ಮಡಿಕೇರಿರವರ ಹೆಸರಿಗೆ ಮಂಜೂರಾಗಿತ್ತು, ಆದರೆ ಜಿಲ್ಲಾಧಿಕಾರಿಗಳ ಆದೇಶದಂತೆ ಮಂಜೂರಾಗಿರುವ ಸದರಿ ನಿವೇಶನವನ್ನು ರದ್ದುಪಡಿಸಿರುವುದರಿಂದ, ಸದರಿ ಜಾಗಕ್ಕೆ ಬದಲಾಗಿ ಕುಶಾಲನಗರ ಸಂಚಾರಿ ಪೋಲೀಸ್ ಠಾಣೆಗೆ ಮತ್ತು ಸಾರ್ವಜನಿಕರಿಗೆ ಅನುಕೂಲವಾಗುವಂತೆ ಬದಲಿ ಜಾಗವನ್ನು ನೀಡುವುದಾಗಿ ತಿಳಿಸಿದ್ದಲ್ಲಿ, ನಮ್ಮ ಪ್ರಧಾನ ಕಛೇರಿಗೆ ಪತ್ರ ವ್ಯವಹಾರ ನಡೆಸಿ, ಬದಲಿ ಜಾಗವನ್ನು ಪಡೆದುಕೊಳ್ಳುತ್ತೇವೆ, ಈ ಬಗ್ಗೆ ಶೀಘ್ರವಾಗಿ ಕಛೇರಿಗೆ ಮಾಹಿತಿಯನ್ನು ನೀಡುವಂತೆ ಕೋರಿದ್ದು, ಸದರಿ ಪತ್ರದ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಸದರಿ ಪತ್ರವನ್ನು ಉಲ್ಲೇಖಿಸಿ, ಮುಖ್ಯಾಧಿಕಾರಿ, ಪುರಸಭೆ ಇವರು ದಿನಾಂಕ:12–07–2024 ರಂದು ಈ ಕಛೇರಿಗೆ ಪತ್ರ ಬರೆದು, ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ಪೋಲೀಸ್ ಇಲಾಖೆಗೆ ದಾಖಲಿಸಿದ ಇ–ಆಸ್ತಿಯನ್ನು ರದ್ದುಗೊಳಿಸಿದ್ದು, ಅದರಂತೆ ಈಗಾಗಲೇ ಸದರಿ ನಿವೇಶನವನ್ನು ತಮ್ಮ ಕಚೇರಿಗೆ ಪರಿತ್ಯಜನ ಪತ್ರ ಮಾಡಿ ಇ–ಆಸ್ತಿ ನೀಡಲಾಗಿರುತ್ತದೆ, ಪೋಲೀಸ್ ಅಧೀಕ್ಷಕರು ಸಂಚಾರಿ ಪೋಲೀಸ್ ಠಾಣೆ ನಿರ್ಮಾಣಕ್ಕಾಗಿ ಬದಲಿ ಜಾಗವನ್ನು ಮಂಜೂರು ಮಾಡುವಂತೆ ಕೋರಲಾಗಿದ್ದು, ಸಿ.ಎ. ನಿವೇಶನಗಳನ್ನು ಮಂಜೂರು ಮಾಡಲು ಪುರಸಭೆಯು ಸೂಕ್ತ ಪ್ರಾಧಿಕಾರವಲ್ಲದ ಕಾರಣ ಸರ್ಕಾರದ ಅಧಿಸೂಚನೆಯಂತೆ ಪ್ರಸ್ತುತ ಸಿ.ಎ. ನಿವೇಶನಗಳನ್ನು ಮಂಜೂರು ಮಾಡಲು ತಮ್ಮ ಇಲಾಖಾ ವ್ಯಾಪ್ತಿಗೆ ಬರುವುದರಿಂದ ಈ ಬಗ್ಗೆ ಪರಿಶೀಲಿಸಿ 3ನೇ ಬ್ಲಾಕ್, ಚಿಕ್ಕಣ್ಣ ಬಡಾವಣೆಯಲ್ಲಿ ನಾಗರೀಕ ಸೌಲಭ್ಯಕ್ಕಾಗಿ ಮೀಸಲಿರಿಸಿದ ನಿವೇಶನವನ್ನು ಸಂಚಾರಿ ಪೋಲೀಸ್ ಠಾಣೆ ನಿರ್ಮಾಣ ಮಾಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ.

ಪರಿಶೀಲಿಸಲಾಗಿ, 3ನೇ ಬ್ಲಾಕ್, ಚಿಕ್ಕಣ್ಣ ಬಡಾವಣೆಯು ಬೆಂಗಳೂರಿನ ಕೇಂದ್ರ ಕಚೇರಿಯಿಂದ ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಇವರಿಂದ ದಿನಾಂಕ: 26–10–2005 ರಂದು ಅನುಮೋದನೆಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 17 ರನ್ವಯ ಬಡಾವಣೆಯಲ್ಲಿನ ನಾಗರೀಕ ಸೌಲಭ್ಯ ನಿವೇಶನ, ಉದ್ಯಾನವನ ಮತ್ತು ರಸ್ತೆಗಾಗಿ ಕಾಯ್ದಿರಿಸಿರುವ ವಿಸ್ತೀರ್ಣಗಳನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸಬೇಕಾಗಿದ್ದು, ಅದರಂತೆ ಸದರಿ ಬಡಾವಣೆಯ ಮಾಲೀಕರು

ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ: ನಅಇ 104 ಬೆಂರೂಪ್ರಾ 2005 ದಿನಾಂಕ: 31–05–2005 ರನ್ವಯ ಪಟ್ಟಣಪಂಚಾಯಿತಿಯ ಮುಖ್ಯಾಧಿಕಾರಿಗಳಿಗೆ ದಿನಾಂಕ: 06–12–2005 ರಂದು ದಾನಪತ್ರದ ಮೂಲಕ ಸಿ.ಎ. ನಿವೇಶನವನ್ನು ಹಸ್ತಾಂತರಿಸಿರುವುದು ಸಲ್ಲಿಸಿರುವ ದಾನಪತ್ರದ ದಾಖಲಾತಿಯ ಪ್ರತಿಯಿಂದ ತಿಳಿದುಬಂದಿರುತ್ತದೆ. ಹಾಗೂ ಇದು ಸರಿಯಾದ ಕ್ರಮವಾಗಿರುತ್ತದೆ.

ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 01 ಟಿಎಂಡಿ 2018 ದಿನಾಂಕ: 30–01–2018 ರ ಸುತ್ತೋಲೆಯು ನಗರಾಭಿವೃದ್ಧಿ ಇಲಾಖೆಯಿಂದ ಹೊರಡಿಸಿದ್ದು, ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳಲ್ಲಿ ಲಭ್ಯವಿರುವ ಮತ್ತು ಲಭ್ಯವಾಗುವ ನಾಗರೀಕ ಸೌಲಭ್ಯಗಳನ್ನು ವಿಲೇವಾರಿ ಮಾಡಲು ಮಾರ್ಗಸೂಚಿಗಳನ್ನು ಹೊರಡಿಸಿರುತ್ತಾರೆ. ಈ ಸುತ್ತೋಲೆಯ ಕಂಡಿಕೆ 2 ರ ಆರನೇ ಸಾಲಿನಲ್ಲಿ **"ಉಳಿದಂತೆ ಸ್ಥಳೀಯ ಯೋಜನಾ ಪ್ರಾಧಿಕಾರ ಅಥವಾ ಪುರಸಭಾ ಯೋಜನಾ ಪ್ರದೇಶ ಇರದ ಕಡೆಯಲ್ಲಿ ಹಾಗೂ ಪ್ರಸ್ತುತ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಲಭ್ಯವಿರುವ ಮತ್ತು ಯೋಜನಾ ಪ್ರಾಧಿಕಾರ ರಚನೆಯಾಗುವವರೆಗೂ ಲಭ್ಯವಾಗುವ ನಾಗರೀಕ ಸೌಲಭ್ಯ ನಿವೇಶನಗಳಿಗೆ ಮೇಲ್ಕಂಡ ನಿಯಮಗಳು ನೇರವಾಗಿ ಅನ್ವಯ ಆಗದೇ ಇರುವುದನ್ನು ಪರಿಶೀಲಿಸಿದ ಸರ್ಕಾರವು ಪುರಸಭೆ ವ್ಯಾಪ್ತಿಯಲ್ಲಿ ಲಭ್ಯವಿರುವ**/ಯೋಜನಾ ಪ್ರಾಧಿಕಾರ ರಚನೆಯಾಗುವವರೆಗೂ ಲಭ್ಯವಾಗುವ **ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ ಕುರಿತಂತೆ ಈ ಕೆಳಕಂಡಂತೆ ಕ್ರಮ ವಹಿಸತಕ್ಕದ್ದು"** ಎಂದು ವಿವರಿಸಿರುತ್ತಾರೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 483 ಮೈಅಪ್ರಾ 2006, ಬೆಂಗಳೂರು, ದಿನಾಂಕ: 18–02–2008ರಲ್ಲಿ ಕುಶಾಲನಗರ ಯೋಜನಾ ಪ್ರದೇಶವೆಂದು ಘೋಷಿಸಿ ಆದೇಶಿಸಲಾಗಿದ್ದು, ದಿನಾಂಕ: 26–10–2005 ರಂದು ಸದರಿ ಬಡಾವಣೆ ಅನುಮೋದನೆಗೊಂಡ ಕಾರಣ ಹಾಗೂ ಈಗಾಗಲೇ ರಾಜ್ಯಪಾಲರು ಕರ್ನಾಟಕ ಸರ್ಕಾರ ಹಾಗೂ ಕುಶಾಲನಗರ ಪಟ್ಟಣಪಂಚಾಯಿತಿಯ ಪರವಾಗಿ ಸಾರ್ವಜನಿಕವಾಗಿ ದಾನ ಪಡೆದಿರುವ ಕಾರಣ, ಸದರಿ ಸಿ.ಎ. ನಿವೇಶನವನ್ನು ದಿನಾಂಕ: 31–05–2005 ರ ಸುತ್ತೋಲೆಯನ್ವಯ ತಮ್ಮ ಹಂತದಲ್ಲೇ ಕ್ರಮವಹಿಸಬೇಕೆಂದು ಹಾಗೂ ಮುಖ್ಯಾಧಿಕಾರಿಗಳ ಪತ್ರದಲ್ಲಿ ತಿಳಿಸಿರುವಂತೆ ಮಾನ್ಯ ಘನ ಉಚ್ಚನ್ಯಾಯಾಲಯದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದು ಮಂಜೂರು ಮಾಡಲಾಗಿದ್ದ ಸಿ.ಎ. ನಿವೇಶನದ ಕ್ರಮವನ್ನು ಪ್ರಶ್ನಿಸಿ ರಿಟ್ ಪಿಟಿಷನ್ ದಾಖಲಾಗಿದ್ದ ಕಾರಣ, ಮಾನ್ಯ ಜಿಲ್ಲಾಧಿಕಾರಿಗಳು ಮಾನ್ಯ ಘನಉಚ್ಚನ್ಯಾಯಾಲಯದ ಅಂತಿಮ ತೀರ್ಪಿನಂತೆ ಕ್ರಮವಹಿಸಬೇಕಾದ ಕಾರಣ ಅನುಮೋದನೆ ನೀಡಲಾಗಿದ್ದ ನಡಾವಳಿಯನ್ನು ವಜಾಗೊಳಿಸಿ, ಕುಶಾಲನಗರ ಯೋಜನಾ ಪ್ರಾಧಿಕಾರದ ಕಛೇರಿಗೆ 1ನೇ ಬ್ಲಾಕ್, ಗುಂಡುರಾವ್ ಬಡಾವಣೆಯ 1081.71 ಚ.ಮೀ. ವಿಸ್ತೀರ್ಣದ ಸಿ.ಎ. ನಿವೇಶನವನ್ನು ಹಸ್ತಾಂತರಿಸಲಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ಕಲಂ 17 ಅನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 10–09–2015 ರಂದು ಅಧಿಕೃತವಾಗಿ ಪ್ರಕಟಿಸಲಾಗಿದ್ದು, ಸದರಿ ದಿನಾಂಕದಿಂದ ಜಾರಿಗೆ ಬರುವಂತೆ ಕಲಂ 17(2ಬಿ) ರನ್ವಯ ಬಡಾವಣೆಗಳಿಗೆ ಅಂತಿಮ ಅನುಮೋದನೆ ನೀಡುವಾಗ ನಾಗರೀಕ ಸೌಲಭ್ಯ ನಿವೇಶನಗಳನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರಿಸಿಕೊಳ್ಳಬೇಕೆಂದು ತಿದ್ದುಪಡಿ ಮಾಡಲಾಗಿದೆ. ಆದ್ದರಿಂದ ಸದರಿ ದಿನಾಂಕದ ಪೂರ್ವದಲ್ಲಿ ಯಾವುದೇ ಬಡಾವಣೆಯ ಸಿ.ಎ. ನಿವೇಶನಗಳನ್ನು ಪಟ್ಟಣಪಂಚಾಯಿತಿಗೆ ಹಸ್ತಾಂತರಿಸಿದ್ದರೇ, ಅದನ್ನು ಯೋಜನಾ ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಳ್ಳಲು ಅವಕಾಶವಿರುವುದಿಲ್ಲ.

ಆದ್ದರಿಂದ ಸದರಿ ಪ್ರಸ್ತಾವನೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 01 ಟಿಎಂಡಿ 2018 ದಿನಾಂಕ: 30–01–2018 ರನ್ವಯ ಮಾನ್ಯ ಜಿಲ್ಲಾಧಿಕಾರಿಯವರಿಂದ ಮಾರ್ಗದರ್ಶನ/ ಅನುಮೋದನೆಯನ್ನು ಪಡೆದು ತಮ್ಮ ಹಂತದಲ್ಲೇ ಕ್ರಮವಹಿಸಬೇಕೆಂದು ಅಥವಾ ಸರ್ಕಾರದಿಂದ ಮಾರ್ಗದರ್ಶನ ಪಡೆದ ನಂತರ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕೆಂದು ಮುಖ್ಯಾಧಿಕಾರಿಗಳಿಗೆ ದಿನಾಂಕ: 15–07–2024 ರಂದು ಪತ್ರ ಬರೆದು ತಿಳಿಸಲಾಗಿದೆ.

ಮುಖ್ಯಾಧಿಕಾರಿ, ಪುರಸಭೆ ಇವರು ದಿನಾಂಕ:18–07–2024 ರಂದು ಮತ್ತೊಮ್ಮೆ ವಿವರಣೆ ನೀಡಿ ಪತ್ರ ಬರೆದಿದ್ದು, ಪುರಸಭೆಯಿಂದ ನಾಗರೀಕ ಸೌಲಭ್ಯದ ನಿವೇಶನವನ್ನು ಮಂಜೂರಾತಿ ಮಾಡುವ ಬಗ್ಗೆ ಸರ್ಕಾರದಿಂದ ಸುತ್ತೋಲೆ ಸಂಖ್ಯೆ ನಅಇ/–1/ಟಿ.ಎಂ.ಡಿ.2018 ದಿನಾಂಕ: 30–01–2018 ರಂತೆ ಸ್ಪಷ್ಟಪಡಿಸಲಾಗಿರುವುದರಿಂದ ನಿವೇಶನ ಮಂಜೂರಾತಿಗಾಗಿ ಮಾನ್ಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸುವುದು ಸರಿಯಾದ ಕ್ರಮವಾಗಿರುವುದಿಲ್ಲ. ಕುಶಾಲನಗರ ಪುರಸಭೆ ವ್ಯಾಪ್ತಿಯಲ್ಲಿ ನಗರ ಯೋಜನಾ ಪ್ರಾಧಿಕಾರ ಇರುವ ಕಾರಣ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ

ನಂ/ಯುಡಿಡಿ/27/ಟಿಟಿಪಿ/2016 ಬೆಂಗಳೂರು ದಿನಾಂಕ: 24–05–2017ರ ನಿಯಮಗಳಡಿಯಲಿ ತಮ್ಮ ಕಛೇರಿಯಿಂದ ನಾಗರೀಕ ಸೌಲಭ್ಯದ ನಿವೇಶನವನ್ನು ಪೋಲೀಸ್ ಅಧೀಕ್ಷಕರು, ಕೊಡಗು ಜಿಲ್ಲೆ, ಮಡಿಕೇರಿ ರವರಿಗೆ ಸಂಚಾರಿ ಪೋಲೀಸ್ ಠಾಣೆ ನಿರ್ಮಾಣ ಮಾಡಲು ಮಾಡಲು ಮಂಜೂರು ಮಾಡುವುದು ಸೂಕ್ತವಾಗಿರುತ್ತದೆ. ಎಲ್ಲಾ ಅಂಶಗಳನ್ನು ಮತ್ತು ಸರ್ಕಾರದ ಎಲ್ಲಾ ಸುತ್ತೋಲೆಗಳನ್ನು ಮತ್ತೊಮ್ಮೆ ಪರಾಮರ್ಶಿಸಿ, ಅವಲೋಕಿಸಿ, ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರಿರುತ್ತಾರೆ. ಮುಖ್ಯಾಧಿಕಾರಿಗಳ ಸದರಿ ಪತ್ರವನ್ನು ಸಭೆಗೆ ಮಂಡಿಸಿದೆ.

ನಿರ್ಣಯ: ವಿಷಯದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಟಿಪ್ಪಣಿಯಲ್ಲಿ ಸದಸ್ಯಕಾರ್ಯದರ್ಶಿಗಳು ವಿವರಿಸಿರುವ ಅಂಶಗಳನ್ನು ಪರಿಗಣಿಸಲಾಯಿತು. ಸದರಿ ಪ್ರಸ್ತಾವನೆಗೆ ಮುಖ್ಯಾಧಿಕಾರಿಗಳ ಹಂತದಲ್ಲೇ ಕ್ರಮವಹಿಸಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(ಖ): ಗುಂಡುರಾವ್ ಬಡಾವಣೆಯಲ್ಲಿನ 26.72 ಸೆಂಟ್ ನಾಗರೀಕ ಸೌಲಭ್ಯ ನಿವೇಶನದಲ್ಲಿ ಸಂಚಾರಿ ಪೋಲೀಸ್ ಠಾಣೆಯ ಕಟ್ಟಡ ನಿರ್ಮಾಣಕ್ಕಾಗಿ ಅಡಿಪಾಯವನ್ನು ನಿರ್ಮಿಸಿದ್ದು, ಅದರ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸುವ ಬಗ್ಗೆ.

ನಿರ್ಣಯ: ಬೈಚನಹಳ್ಳಿ ಗ್ರಾಮದಲ್ಲಿ ಐ.ಡಿ.ಎಸ್.ಎಂ.ಟಿ ಯೋಜನೆಯಲ್ಲಿ ರಚಿಸಲಾದ ಗುಂಡುರಾವ್ ಬಡಾವಣೆಯಲ್ಲಿರುವ 1081.713 ಚ.ಮೀ ವಿಸ್ತೀರ್ಣದ ಸಿ.ಎ. ನಿವೇಶನವನ್ನು ಸಂಚಾರಿ ಪೋಲೀಸ್ ಠಾಣೆ ನಿರ್ಮಾಣಕ್ಕಾಗಿ ಪೋಲೀಸ್ ಅಧೀಕ್ಷಕರು ಮಡಿಕೇರಿರವರ ಹೆಸರಿಗೆ ಪುರಸಭೆ ವತಿಯಿಂದ ಮಂಜೂರಾಗಿರುತ್ತದೆ. ಆದರಂತೆ ಪೋಲೀಸ್ ಇಲಾಖೆಯವರು ಕಟ್ಟಡ ನಿರ್ಮಿಸಲು ಅಡಿಪಾಯವನ್ನು ನಿರ್ಮಿಸಿರುತ್ತಾರೆ. ಆದರೆ ಮಾನ್ಯ ಜಿಲ್ಲಾಧಿಕಾರಿಗಳ ಆದೇಶದಂತೆ ಸದರಿ ಮಂಜೂರಾತಿಯನ್ನು ರದ್ದುಪಡಿಸಲಾಗಿದೆ. ಆದ್ದರಿಂದ ವಿಷಯ ಸಂಖ್ಯೆ(3) ರಲ್ಲಿ ಸದರಿ ಸಿ.ಎ. ನಿವೇಶನವನ್ನು ಪ್ರಾಧಿಕಾರದ ಸ್ವಂತ ಕಛೇರಿ ಕಟ್ಟಡ ನಿರ್ಮಿಸಲು ಕಾಯ್ದಿರಿಸಲು ನಿರ್ಣಯಿಸಲಾಗಿದೆ. ಸದರಿ ನಿವೇಶನದಲ್ಲಿ ಈಗಾಗಲೇ ಪೋಲೀಸ್ ಇಲಾಖೆಯಿಂದ ಅಡಿಪಾಯವನ್ನು ನಿರ್ಮಿಸಿರುವುದರಿಂದ ಅದರ ವೆಚ್ಚವನ್ನು ಪ್ರಾಧಿಕಾರದಿಂದ ಭರಿಸಬೇಕಾಗಿರುತ್ತದೆ. ಪೋಲೀಸ್ ಇಲಾಖೆಯವರು ಸದರಿ ನಾಗರೀಕ ಸೌಲಭ್ಯ ನಿವೇಶನದ ಕಟ್ಟಡ ನಕ್ಷೆ, ಅಡಿಪಾಯದ ನಕ್ಷೆ, ಅಂದಾಜುಪಟ್ಟಿ ಹಾಗೂ ಈ ಹಂತದವರೆಗೆ ತಗುಲಿರುವ ವೆಚ್ಚವನ್ನು ಲೋಕೋಪಯೋಗಿ ಇಲಾಖೆ ಇವರಿಂದ ದೃಢೀಕರಿಸಿಕೊಂಡು ಸಲ್ಲಿಸಿದ್ದಲ್ಲಿ, ಸದರಿ ವೆಚ್ಚವನ್ನು ಪ್ರಾಧಿಕಾರದಿಂದ ಪಾವತಿಸಬಹುದಾಗಿದೆ ಎಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

(ಎ): ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಕುಶಾಲನಗರ ಹೋಬಳಿ, ಮುಳ್ಳುಸೋಗೆ ಗ್ರಾಮದ ಸ.ನಂ. 42/14 ರಲ್ಲಿ 0.95 ಎಕರೆ ವಿಸ್ತೀರ್ಣದ ಜಮೀನಿನ ವಸತಿ ಉದ್ದೇಶದ ಬಹು–ನಿವೇಶನ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ (**ಅರ್ಜಿದಾರರು:– ಶ್ರೀ ಮಂಜೇಗೌಡ ಬಿ.ವಿ**).

ಟಿಪ್ಪಣಿ: ವಿಷಯಕ್ಕೆ ಸಂಬಂಧಿಸಿದಂತೆ, ಪ್ರಶ್ನಿತ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆ ನೀಡುವ ಬಗ್ಗೆ ಪ್ರಸ್ತಾವನೆಯನ್ನು ಪ್ರಾಧಿಕಾರದ 59ನೇ ಸಭೆಯ ವಿಷಯಸಂಖ್ಯೆ(4) ರಲ್ಲಿ ಮಂಡಿಸಿ ಚರ್ಚಿಸಲಾಗಿದ್ದು, ಪ್ರಶ್ನಿತ ಜಮೀನಿನ ಕರಡು ವಿನ್ಯಾಸ ನಕ್ಷೆಯಲ್ಲಿ ಉತ್ತರ ದಿಕ್ಕಿನಲ್ಲಿರುವ ಹಾಲಿ 6.0ಮೀ ಅಗಲದ ಗ್ರಾಮ ರಸ್ತೆಯನ್ನು ಮಹಾಯೋಜನೆಯಂತೆ 12.0ಮೀ ಅಗಲಕ್ಕೆ ವಿಸ್ತರಿಸುವ ಷರತ್ತಿಗೊಳಪಟ್ಟಿದ್ದು, ಸದರಿ ರಸ್ತೆಯು ಎರಡು ಬಡಾವಣೆಗಳ ಮಧ್ಯೆ ಹಾದುಹೋಗುತ್ತಿದ್ದು, ರಸ್ತೆ ಮಧ್ಯಭಾಗದಿಂದ 6.0ಮೀ ಅಗಲವನ್ನು ಎರಡು ಬಡಾವಣೆಯವರು ಕಾಯ್ದಿರಿಸುವ ಷರತ್ತಿಗೆ ಒಳಪಟ್ಟಿರುತ್ತಾರೆ. ಸದರಿ ಜಮೀನಿನ ಮಾಲೀಕರು ರಸ್ತೆ ಮಧ್ಯ ಭಾಗದಿಂದ 6.0ಮೀ ಅಗಲಕ್ಕೆ ದಕ್ಷಿಣದ ಕಡೆಗೆ ಅಂತರವನ್ನು ಕಾಯ್ದಿರಿಸಿರುತ್ತಾರೆ.

ಆದರೆ ಉತ್ತರ ದಿಕ್ಕಿನಲ್ಲಿರುವ ಸ.ನಂ. 36/2 ರಲ್ಲಿನ 2.30 ಎಕರೆ ಪೈಕಿ 2.00 ಎಕರೆ ವಸತಿ ಉದ್ದೇಶದ ಹಾಗೂ 0.30 ಎಕರೆ ವಾಣಿಜ್ಯ ಉದ್ದೇಶದ ಕರಡು ವಿನ್ಯಾಸ ನಕ್ಷೆಗೆ ಈ ಕಛೇರಿ ಆದೇಶ ಸಂಖ್ಯೆ: ಕುಯೋಪ್ರಾ/ಸಕಾ/ಸೋ.ತಾ/ಮುಳ್ಳುಸೋಗೆ ಗ್ರಾಮ/ವಿ.ಅ/03/188/2020–21 ದಿನಾಂಕ:10–11–2020 ರಂದು ಅನುಮೋದನೆ ನೀಡಿದ್ದು (ಮಾಲೀಕರು: ಶ್ರೀ ಜಿ.ಬಿ. ಜಗದೀಶ್), ಅದರಲ್ಲಿ ವಾಣಿಜ್ಯ ಉದ್ದೇಶದ ಕಡೆಗೆ ಲಗತ್ತಾಗಿರುವ ಸದರಿ ರಸ್ತೆಯ ಮಧ್ಯಭಾಗದಿಂದ ಉತ್ತರದ ಕಡೆಗೆ 6.0ಮೀ ಬದಲು ಕೇವಲ

4.35ಮೀ ಅಗಲದಷ್ಟು ಮಾತ್ರ ಜಾಗವನ್ನು ಕಾಯ್ದಿರಿಸಿ ತಮ್ಮ ಜಮೀನನ್ನು ಅಭಿವೃದ್ಧಿಪಡಿಸಿರುತ್ತಾರೆ. ನಕ್ಷೆಯನ್ನು ಪರಿಶೀಲಿಸಿದಾಗ ಸದರಿ ಗ್ರಾಮರಸ್ತೆಯ ಅಗಲ 9.0ಮೀ ರಸ್ತೆ ಎಂದು ನಮೂದಾಗಿರುತ್ತದೆ. (ಅಂದರೆ 4.35ಮೀ ಅಗಲದ ಜಾಗವನ್ನು ಕಾಯ್ದಿರಿಸಿರುವುದು ನಕ್ಷೆಯ ಪ್ರಕಾರ ಸರಿಯಾಗಿರುತ್ತದೆ.) ಸದರಿ ರಸ್ತೆಯನ್ನು 12.0ಮೀಗೆ ವಿಸ್ತರಿಸಲು ಶ್ರೀ ಜಿ.ಬಿ. ಜಗದೀಶ್ ಇವರ ಜಮೀನಿಗೆ ಕಡೆಗೆ ಹೆಚ್ಚುವರಿ 1.65ಮೀ ಅಗಲದ ಜಾಗವನ್ನು ಕಾಯ್ದಿರಿಸಬೇಕಾಗಿರುತ್ತದೆ. ಆದ್ದರಿಂದ ಇದರ ಮಾಲೀಕರಾದ ಶ್ರೀ ಜಿ.ಬಿ. ಜಗದೀಶ್ ಇವರಿಗೆ ನೋಟೀಸ್ ನೀಡಿ "ರಸ್ತೆಯನ್ನು 12.0ಮೀಗೆ ವಿಸ್ತರಿಸುವ ಸಂಬಂಧ ಹೆಚ್ಚುವರಿ 1.65ಮೀ ಅಗಲದ ಜಾಗವನ್ನು ವಿಸ್ತರಿಸಬೇಕೆಂದು ಹಾಗೂ ಕರಡು ವಿನ್ಯಾಸ ನಕ್ಷೆಯನ್ನು ಪರಿಷ್ಕರಿಸಿಕೊಳ್ಳಬೇಕೆಂದು" ನೋಟೀಸ್ ನೀಡುವಂತೆ ಸಭೆಯು ಸದಸ್ಯಕಾರ್ಯದರ್ಶಿಯವರಿಗೆ ಸೂಚಿಸಿತು. ಅದರಂತೆ ಶ್ರೀ ಜಿ.ಬಿ. ಜಗದೀಶ್ ಇವರು ರಸ್ತೆಯನ್ನು ವಿಸ್ತರಿಸಿದ ನಂತರ ಪ್ರಶ್ನಿತ ಮುಳ್ಳುಸೋಗೆ ಗ್ರಾಮದ ಸ.ನಂ. 42/14 ರಲ್ಲಿ 0.95 ಎಕರೆ ವಿಸ್ತೀರ್ಣದ ಜಮೀನಿನ ವಸತಿ ವಿನ್ಯಾಸ ನಕ್ಷೆಗೆ ಅಂತಿಮ ಅನುಮೋದನೆಯನ್ನು ನೀಡಬಹುದಾಗಿದೆ ಹಾಗೂ ನಿವೇಶನಗಳನ್ನು ಬಿಡುಗಡೆ ಮಾಡಬಹುದಾಗಿದೆ ಎಂದು ಸಭೆಯಲ್ಲಿ ನಿರ್ಣಯಿಸಲಾಗಿತ್ತು.

ಪ್ರಸ್ತುತ ಅರ್ಜಿದಾರರು ದಿನಾಂಕ: 25–06–2024 ರಂದು ಈ ಕಛೇರಿಗೆ ಮತ್ತೊಮ್ಮೆ ಮನವಿ ಸಲ್ಲಿಸಿ, ಅಂತಿಮ ಅನುಮೋದನೆ ನೀಡಬೇಕೆಂದು ಹಾಗೂ ನಿವೇಶನಗಳನ್ನು ಬಿಡುಗಡೆಗೊಳಿಸಬೇಕೆಂದು ಕೋರಿರುತ್ತಾರೆ.

ನಿರ್ಣಯ: ಪ್ರಶ್ನಿತ ಜಮೀನಿನ ಉತ್ತರ ದಿಕ್ಕಿನಲ್ಲಿರುವ ಹಾಲಿ 6.0ಮೀ ಅಗಲದ ಗ್ರಾಮ ರಸ್ತೆಯನ್ನು ಮಹಾಯೋಜನೆಯಂತೆ 12.0ಮೀ ಅಗಲಕ್ಕೆ ವಿಸ್ತರಿಸುವ ಷರತ್ತಿಗೊಳಪಟ್ಟಿದ್ದು, ಸದರಿ ಜಮೀನಿನ ಮಾಲೀಕರು ಈಗಾಗಲೇ ರಸ್ತೆ ಮಧ್ಯ ಭಾಗದಿಂದ 6.0ಮೀ ಅಗಲಕ್ಕೆ ದಕ್ಷಿಣದ ಕಡೆಗೆ ಅಭಿವೃದ್ಧಿಪಡಿಸಿರುವ ಕಾರಣ ಸದರಿ ಬಡಾವಣೆಯನ್ನು ಮತ್ತೊಮ್ಮೆ ಪರಿಶೀಲಿಸಿ, ರಸ್ತೆಯ ಅಗಲ, ನಾಗರೀಗ ಸೌಲಭ್ಯ ನಿವೇಶನ, ಉದ್ಯಾನವನ ಹಾಗೂ ನಿವೇಶನಗಳ ಅಳತೆಗಳನ್ನು ಪರಿಶೀಲಿಸಿದ ನಂತರ ಸದರಿ ವಿನ್ಯಾಸ ನಕ್ಷೆಯಲ್ಲಿನ ರಸ್ತೆ ಮತ್ತು ಉದ್ಯಾನವನಕ್ಕೆ ಕಾಯ್ದಿರಿಸಿದ ಜಮೀನನ್ನು ಸ್ಥಳೀಯ ಸಂಸ್ಥೆಗೆ ಹಾಗೂ ನಾಗರೀಕ ಸೌಲಭ್ಯಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಯೋಜನಾ ಪ್ರಾಧಿಕಾರಕ್ಕೆ ಪರಿತ್ಯಾಜನ ಪತ್ರದ ಮುಖೇನ ಹಸ್ತಾಂತರಿಸಿದ ನಂತರ ಅಂತಿಮ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಬಹುದೆಂದು ಹಾಗೂ ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು

ಸಹಿ/–	ಸಹಿ/–
ಸದಸ್ಯ ಕಾರ್ಯದರ್ಶಿ	ಅಧ್ಯಕ್ಷರು
ಕುಶಾಲನಗರ ಯೋಜನಾ ಪ್ರಾಧಿಕಾರ	ಕುಶಾಲನಗರ ಯೋಜನಾ ಪ್ರಾಧಿಕಾರ
ಕುಶಾಲನಗರ	ಕುಶಾಲನಗರ